## ಇತಿಹಾಸ

### ಅಧ್ಯಾಯ.1 ಭಾರತಕ್ಕೆ ಯುರೋಪಿಯನ್ನರ ಆಗಮನ

**1) ಭಾರತಕ್ಕೆ ಹೊಸ ಜಲಮಾರ್ಗದ ಅನ್ವೇಷಣೆಗೆ ಪ್ರೇರಣೆ ನೀಡಿದ ಅಂಶಗಳಾವುವು? ಅಥವಾ ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯಲು ಕಾರಣವಾದ ಅಂಶಗಳನ್ನು ತಿಳಿಸಿ ಅಥವಾ ಕಾನ್‌ಸ್ಟಾಂಟಿನೋಪಲ್ ನಗರದ ಪತನದ ಪರಿಣಾಮಗಳೇನು?**

* ಆಟೋಮನ್ ಟರ್ಕರಿಂದ **ಕಾನ್‌ಸ್ಟಾಂಟಿನೋಪಲ್** ನಗರದ ವಶ
* ಟರ್ಕರು **ಕಾನ್‌ಸ್ಟಾಂಟಿನೋಪಲ್** ನಗರದ ವ್ಯಾಪಾರಗಳ ಮೇಲೆ ಅಧಿಕ ತೆರಿಗೆ ವಿಧಿಸಿದರು.
* ಅಧಿಕ ತೆರಿಗೆಯಿಂದ ಯುರೋಪಿನ ವ್ಯಾಪಾರಿಗಳಿಗೆ ನಷ್ಟವಾಯಿತು
* ಯುರೋಪಿನ ಇತರ ದೇಶಗಳು ಇಟಲಿಯ ವರ್ತಕರ ಏಕಸ್ವಾಮ್ಯವನ್ನು ಮುರಿಯಲು ಯತ್ನಿಸಿದವು.
* ಯುರೋಪಿನ ರಾಜರು ಸಾಹಸಿ ನಾವಿಕರಿಗೆ ಪ್ರೋತ್ಸಾಹ ನೀಡಿದರು
* ಹೊಸ ವೈಜ್ಞಾನಿಕ ಆವಿಷ್ಕಾರಗಳಾದ ದಿಕ್ಸೂಚಿ ,ಆಸ್ಟ್ರೋ ಲೋಬ್, ಸಿಡಿಮದ್ದುಗಳ ಸಂಶೋಧನೆ.

**2) ಮಧ್ಯಕಾಲದಲ್ಲಿ ಭಾರತ ಮತ್ತು ಯೂರೋಪ್ ನಡುವಿನ ವ್ಯಾಪಾರ ಹೇಗೆ ನಡೆಯುತ್ತಿತ್ತು. ಅಥವಾ ಕಾನ್‌ಸ್ಟಾಂಟಿನೋಪಲ್ ನಗರವು ಯುರೋಪಿನ ವ್ಯಾಪಾರದ ಹೆಬ್ಬಾಗಿಲೆಂದೇ ಪರಿಗಣಿಸಲ್ಪಟ್ಟಿತ್ತು ಈ ಹೇಳಿಕೆಯನ್ನು ಸಮರ್ಥಿಸಿ . ಅಥವಾ**

**ಕಾನ್‌ಸ್ಟಾಂಟಿನೋಪಲ್ ನಗರವು ಮಧ್ಯಯುಗದ ಅಂತರರಾಷ್ಟ್ರೀಯ ಸರಕು ವಿನಿಮಯ ಕೇಂದ್ರವಾಗಿತ್ತು ಸಮರ್ಥಿಸಿ.**

* ಮಧ್ಯಕಾಲದಲ್ಲಿ ವ್ಯಾಪಾರವು **ಕಾನ್‌ಸ್ಟಾಂಟಿನೋಪಲ್** ನಗರದ ಮೂಲಕ ಜರುಗುತ್ತಿತ್ತು.
* ಅರಬ್ಬರು ಭಾರತದ ವ್ಯಾಪಾರಿ ಸರಕುಗಳನ್ನು **ಕಾನ್‌ಸ್ಟಾಂಟಿನೋಪಲ್‌ಗೆ** ತರುತ್ತಿದ್ದರು.
* ಅಲ್ಲಿಂದ ಇಟಲಿಯ ವ್ಯಾಪಾರಿಗಳು ಈ ಸರಕುಗಳನ್ನು ಕೊಂಡು ಯುರೋಪ್ ದೇಶದಲ್ಲಿ ಮಾರುತ್ತಿದ್ದರು.
* ಏಷ್ಯಾ ದೇಶಗಳ ವ್ಯಾಪಾರದ ಮೇಲೆ ಅರಬ್ಬರು ಏಕಸ್ವಾಮ್ಯ ಸಾಧಿಸಿದ್ದರು.
* ಯುರೋಪಿನ ದೇಶಗಳ ವ್ಯಾಪಾರದ ಮೇಲೆ ಇಟಲಿಯ ವರ್ತಕರು ಏಕಸ್ವಾಮ್ಯ ಸಾಧಿಸಿದ್ದರು

**3) ಪೋರ್ಚುಗೀಸರ ಏಳಿಗೆಯಲ್ಲಿ ಫ್ರಾನ್ಸಿಸ್ ಕೊ–ಡಿ– ಆಲ್‌ಮೆಡ ಮತ್ತು ಆಲ್ಫನ್ಸೋ –ಡಿ –ಆಲ್ಬುಕರ್ಕನ ಪಾತ್ರವನ್ನು ವಿವರಿಸಿ. ಅಥವಾ**

**ಆಲ್ಫನ್ಸೋ –ಡಿ –ಆಲ್ಬುಕರ್ಕನ ಸಾಧನೆಗಳನ್ನು ವಿವರಿಸಿ**

**ಆಲ್ಫನ್ಸೋ –ಡಿ –ಆಲ್ಬುಕರ್ಕನ ನೇತೃತ್ವದಲ್ಲಿ ಪೋರ್ಚುಗೀಸರು ಭಾರತದಲ್ಲಿ ಹೇಗೆ ಪ್ರವರ್ಧಮಾನಕ್ಕೆ ಬಂದರು?**

* ಪೋರ್ಚುಗೀಸರ ಮೊಟ್ಟ ಮೊದಲ ವೈಸರಾಯ್ ಫ್ರಾನ್ಸಿಸ್ಕೋ ಡಿ ಅಲ್ಮೇಡಾ.
* ನೀಲಿ ನೀರಿನ ನೀತಿಯನ್ನು ಜಾರಿಗೆ ತಂದನು .
* ಭೂಮಿಯ ಮೇಲಿನ ಅಧಿಪತ್ಯಕ್ಕಿಂತ ಸಮುದ್ರದ ಮೇಲೆ ಅಧಿಪತ್ಯ ಸ್ಥಾಪಿಸಿದನು.
* ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕ.

* ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡ.

**5) ಮಾರ್ತಾಂಡವರ್ಮನ ಆಳ್ವಿಕೆಯ ಕಾಲವನ್ನು ಕೇರಳದ ರಾಜಕೀಯದಲ್ಲಿ ಅತ್ಯಂತ ಮಹತ್ವದ ಕಾಲಘಟ್ಟ ಎಂದು ಏಕೆ ಕರೆಯಲಾಗಿದೆ? ಅಥವಾ**

**ಮಾರ್ತಾಂಡವರ್ಮನ ಸಾಧನೆಗಳನ್ನು ತಿಳಿಸಿ. ಅಥವಾ**

**ಮಾರ್ತಾಂಡ ವರ್ಮನು ಡಚ್ಚರನ್ನು ಹೇಗೆ ನಿಯಂತ್ರಿಸಿದನು.**

* ತಿರುವನಂತಪುರಕ್ಕೆ ರಾಜಧಾನಿ ಸ್ಥಳಾಂತರಿಸಿದ.
* 50,000 ಸೈನಿಕರ ಸೈನ್ಯವನ್ನು ಕಟ್ಟಿದನು.
* ತನ್ನ ಸಂಸ್ಥಾನವನ್ನು ವಿಶ್ವ ತಿರುವಾಂಕೂರು ಸಂಸ್ಥಾನ ಎಂದು ಹೆಸರಾಗುವಂತೆ ಮಾಡಿದ.
* ಮೆಣಸು ಬೆಳೆಯುವ ಪ್ರದೇಶಗಳನ್ನು ವಶಪಡಿಸಿಕೊಂಡನು .
* ಡಚ್ಚರ ವಿರುದ್ಧ ರಣತಂತ್ರ ರಚಿಸಿದನು.
* ನಡು ಮಂಗಳ ಮತ್ತು ಕೊಟ್ಟಾರ ಕರಗಳನ್ನು ವಶಪಡಿಸಿಕೊಂಡನು. .
* ನಾವೆಂದೂ ಮೆಣಸಿನ ವ್ಯಾಪಾರವನ್ನು ವ್ಯಾಪಾರದ ಹಕ್ಕನ್ನು ಪರಕೀಯರಿಗೆ ಬಿಟ್ಟುಕೊಡೆವು ಎಂದು ಡಚ್ಚರಿಗೆ ಪತ್ರ ಬರೆದನು.
* 1741ರಲ್ಲಿ ಕೊಳಚಲ್ ನಲ್ಲಿ ಡಚ್ಚರನ್ನು ಸೋಲಿಸಿದನು.
* ಕೇರಳ ಮತ್ತು ತಮಿಳುನಾಡಿನಲ್ಲಿ ಮೆಣಸಿನ ವ್ಯಾಪಾರದ ಹಕ್ಕನ್ನು ಸ್ಥಾಪಿಸಿದ.
* 1753ರ ಒಪ್ಪಂದದಲ್ಲಿ ಡಚ್ಚರು ಪೂರ್ಣ ಅಧಿಕಾರವನ್ನು ತಿರುವಾಂಕೂರಿಗೆ ಒಪ್ಪಿಸಿ ಶರಣಾದರು

**6) ಪ್ಲಾಸಿ ಕದನಕ್ಕೆ ಕಾರಣ ಮತ್ತು ಪರಿಣಾಮಗಳನ್ನು ತಿಳಿಸಿ. ಅಥವಾ**

**ಸಿರಾಜ್ ಉದ್ ದೌಲ ಬ್ರಿಟಿಷರ ಮೇಲೆ ಯುದ್ಧ ಘೋಷಿಸಲು ಕಾರಣಗಳೇನು ?ಅದರಿಂದ ಉಂಟಾದ ಪರಿಣಾಮಗಳಾವುವು**

**ಕಾರಣಗಳು.**

ದಸ್ತಕಗಳ ದುರುಪಯೋಗ .

*. ನವಾಬನ ಅನುಮತಿ ಇಲ್ಲದೆ ಕೋಟೆಯ ದುರಸ್ತಿ

* ಕಪ್ಪು ಕೋಣೆಯ ದುರಂತ.

**ಪರಿಣಾಮಗಳು .**

*. ಮೀರ್ ಜಾಫರ್ ಬಂಗಾಳದ ನವಾಬನಾದನು.

*.ಭಾರತೀಯರಲಿದ್ದ ಅನೈಕ್ಯತೆ ಅಸಂಘಟನೆ ಮತ್ತು ಲೋಭಿತನ ಪ್ರದರ್ಶನ.

*.ಬ್ರಿಟಿಷರು ಬಂಗಾಳದಲ್ಲಿ ವ್ಯಾಪಾರದ ಅನಿರ್ಭಂದಿತ ಹಕ್ಕನ್ನು ಪಡೆದರು(17 ಕೋಟಿ 70ಲಕ್ಷ)

**7 .ಬಕ್ಸಾರ್ ಕದನಕ್ಕೆ ಕಾರಣಗಳು ಯಾವುವು ? ಅಥವಾ**

**ಮೀರ್ ಕಾಸಿಂನ ಒಕ್ಕೂಟ ಸೈನ್ಯ ಬ್ರಿಟಿಷರ ಮೇಲೆ ಯುದ್ಧ ಘೋಷಿಸಲು ಕಾರಣಗಳೇನು?**

*.ಮೀರ್ ಕಾಸಿಂ ಬಂಗಾಳದ ವ್ಯಾಪಾರವನ್ನು ಸುಂಕ ಮುಕ್ತಗೊಳಿಸಿದ .

* ಭಾರತೀಯರು ವ್ಯಾಪಾರದಲ್ಲಿ ಬ್ರಿಟಿಷರೊಡನೆ ನೇರ ಸ್ಪರ್ಧೆಗಿಳಿದರು .

* ಬ್ರಿಟಿಷರ ವ್ಯಾಪಾರಕ್ಕೆ ಭಾರಿ ಒಡೆತ ಬಿದ್ದಿತ್ತು.
* .ಬ್ರಿಟಿಷರಿಂದ  ಮೀರ್ ಖಾಸಿಂನ ಪದಚ್ಯುತಿ ಪುನಃ ಮೀರ್ ಜಾಫರ್ ನವಾಬನಾಗಿ ನೇಮಕ.
* ಮೀರ್ ಖಾಸಿಮನು ಮೊಘಲರ ಷಾಆಲಂ ಮತ್ತು ಔದ್ ನವಾಬರೊಂದಿಗೆ ಸೇರಿ ಬ್ರಿಟಿಷರ ಮೇಲೆ ಯುದ್ಧ ಸಾರಿದನು.

**8.ಬಕ್ಸಾರ್ ಕದನದ ಪರಿಣಾಮಗಳಾವುವು ಅಥವಾ ಬಕ್ಸಾರ್ ಕದನವು ಬ್ರಿಟಿಷರಿಗೆ ಅನೇಕ ಸೌಲಭ್ಯಗಳನ್ನು ಪಡೆಯಲು ಸಹಾಯ ಮಾಡಿತು ಹೇಗೆ? ಅಥವಾ**

**ಬಕ್ಸಾರ್ ಕದನವು ಬ್ರಿಟಿಷರನ್ನು ಬಂಗಾಳ ಮತ್ತು ಬಿಹಾರದ ನಿಜವಾದ ಒಡೆಯರೆಂದು ದೃಢೀಕರಿಸಿತು ಹೇಗೆ?**

* ಮೀರ್ ಖಾಸೀಂನ ಒಕ್ಕೂಟ ಸೈನ್ಯಕ್ಕೆ ಸೋಲು.
* ಎರಡನೇ ಷಾ ಆಲಂ, ಬಂಗಾಳದಲ್ಲಿ ಬ್ರಿಟಿಷರಿಗೆ ದಿವಾನಿ ಹಕ್ಕನ್ನು ನೀಡಿದನು .
* ಷಾ ಆಲಂ ವಾರ್ಷಿಕ 26 ಲಕ್ಷ ರೂಪಾಯಿ ಪಡೆದು ಬಂಗಾಳದ ಎಲ್ಲಾ ಹಕ್ಕು ಬಿಟ್ಟು ಕೊಟ್ಟನು .
* ಔದ್ ನವಾಬ ಕಂಪನಿಗೆ ಯುದ್ಧ ನಷ್ಟ ಪರಿಹಾರವಾಗಿ 50 ಲಕ್ಷ ರೂ ನೀಡಿದ.
* ಬಂಗಾಳದ ಪೂರ್ಣ ಆಡಳಿತ ಬ್ರಿಟಿಷರು ಪಡೆದರು.
* ಬಂಗಾಳದಲ್ಲಿ ದ್ವಿ ಪ್ರಭುತ್ವ ಪದ್ಧತಿ ಜಾರಿ

## ಅಧ್ಯಾಯ–2 ಬ್ರಿಟಿಷ್ ಆಳ್ವಿಕೆಯ ವಿಸ್ತರಣೆ

**1. ಮೊದಲನೇ ಆಂಗ್ಲೋ ಮರಾಠ ಯುದ್ಧಕ್ಕೆ ಕಾರಣಗಳನ್ನು ವಿವರಿಸಿ.**

* ಎರಡನೇ ಷಾಆಲಂನನ್ನು ಮರಾಠರು ದೆಹಲಿ ಸಿಂಹಾಸನದಲ್ಲಿ ಕುಳ್ಳಿರಿಸಿದರು.
* ಎರಡನೇ ಷಾಆಲಂ ಬ್ರಿಟಿಷರಿಗೆ ನೀಡಿದ ಕೋರ ಮತ್ತು ಅಲಹಾಬಾದ್‌ಗಳನ್ನು ಮರಾಠರಿಗೆ ನೀಡಿದನು.
* ಪೇಶ್ವೆ ಮಾಧವರಾಯನ ಮರಣ
* ನಂತರ ಪೇಶ್ವೆಯಾದ ನಾರಾಯಣರಾವ್‌ನನ್ನು ರಘೋಬನು ಕೊಲೆ ಮಾಡಿದ.
* ನಾನಾ ಫಡ್ನವೀಸ್ ನೇತೃತ್ವದಲ್ಲಿ 2ನೇ ಮಾದವರಾವ್‌ನನ್ನು ಪೇಶ್ವೆಯಾಗಿ ನೇಮಕ ಮಾಡಿದರು
* ಪೇಶ್ವೆ ಹುದ್ದೆಗಾಗಿ ರಘೋಬನಿಂದ ಬ್ರಿಟಿಷರ ಬೆಂಬಲ ಕೋರಿಕೆ
* ಬ್ರಿಟಿಷರು ಈ ಸಂದರ್ಭವನ್ನು ತಮ್ಮ ಲಾಭಕ್ಕೆ ಬಳಸಿಕೊಂಡರು.

**2. ಸಹಾಯಕ ಸೈನ್ಯ ಪದ್ಧತಿಯ ನಿಬಂಧನೆಗಳಾವುವು?  ಅಥವಾ**
**ಭಾರತೀಯ ರಾಜರನ್ನು ನಿಯಂತ್ರಣದಲ್ಲಿಡಲು ಬ್ರಿಟಿಷರಿಗೆ ಸಹಾಯಕ ಸೈನ್ಯ ಪದ್ಧತಿಯ ಹೇಗೆ ನೆರವಾಯಿತು? ಅಥವಾ**
**ಸಹಾಯಕ ಸೈನ್ಯ ಪದ್ಧತಿಗೆ ಸಹಿ ಹಾಕಿದ ಭಾರತೀಯ ರಾಜರು ಬ್ರಿಟಿಷ್ ಇಂಡಿಯಾ ಕಂಪನಿಯ ಕೈಗೊಂಬೆ ಆಗಿದ್ದರು. ಸಮರ್ಥಿಸಿ**

*. ಭಾರತೀಯ ರಾಜನು ಬ್ರಿಟಿಷ್ ಸೈನ್ಯದ ತುಕಡಿಯನ್ನು ತನ್ನ ರಾಜ್ಯದಲ್ಲಿ ಇರಿಸಿಕೊಳ್ಳಬೇಕು.
* ಸೇನೆಯ ವೆಚ್ಚವನ್ನು ಆ ರಾಜ್ಯವೇ ಭರಿಸಬೇಕು.

* ರಾಜನ ಆಸ್ಥಾನದಲ್ಲಿ ಬ್ರಿಟಿಷ್ ರೆಸಿಡೆಂಟನ ನೇಮಕ.
* ಬ್ರಿಟಿಷರ ಅನುಮತಿ ಇಲ್ಲದೆ ನೇಮಿಸಿಕೊಳ್ಳುವಂತಿಲ್ಲ.
* ಗವರ್ನರ್‌ನ ಅನುಮತಿ ಇಲ್ಲದೆ ಯುದ್ಧ ಅಥವಾ ಸಂಧಾನ ಮಾಡಿಕೊಳ್ಳುವಂತಿಲ್ಲ.
* ಕಂಪನಿಯು ಆ ರಾಜ್ಯಕ್ಕೆ ಆಂತರಿಕ ಮತ್ತು ಬಾಹ್ಯ ರಕ್ಷಣೆಯನ್ನು ಒದಗಿಸುವುದು.

3. **ಮೂರನೇಆಂಗ್ಲೋ-ಮರಾಠ ಯುದ್ಧವನ್ನು ವಿವರಿಸಿ.**
* ಮರಾಠ ಮನೆತನಗಳು ಸ್ವಾತಂತ್ರ್ಯ ಮತ್ತು ಘನತೆ ಉಳಿಸಿಕೊಳ್ಳಲು ನಡೆಸಿದ ಪ್ರಯತ್ನ
* ಪೇಶ್ವೆ ಬ್ರಿಟಿಷರ ನಿಯಂತ್ರಣದಿಂದ ಮುಕ್ತಗೊಳ್ಳಲು ಪ್ರಯತ್ನಿಸಿದನು.
* ಪೇಶ್ವೆ ಪೂನಾದ ರೆಸಿಡೆನ್ಸಿಯ ಮೇಲೆ ನಡೆಸಿದ ದಾಳಿ
* ಅಪ್ಪಾಸಾಹೇಬ ಮತ್ತು ಮಲ್ಹಾರರಾವ್ ಹೋಳ್ಕರ್‌ರವರ ಬ್ರಿಟಿಷರ ವಿರುದ್ಧದ ದಂಗೆ
* ಕೋರೆಗಾವ್ ಮತ್ತು ಅಷ್ಟಿ ಯುದ್ಧಗಳಲ್ಲಿ ಪೇಶ್ವೆಯ ಸೋಲು
* ಪೇಶ್ವೆ ಪದವಿ ರದ್ದು

**ಅಧ್ಯಾಯ ; 3 ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು.**

1. **ಬ್ರಿಟಿಷರು ರೂಪಿಸಿದ ನ್ಯಾಯಾಂಗ ವ್ಯವಸ್ಥೆಯನ್ನು ವಿವರಿಸಿ. ಅಥವಾ**
**ಈಸ್ಟ್ ಇಂಡಿಯಾ ಕಂಪನಿ ಮೂಲಕ ದೇಶದಲ್ಲಿ ಬ್ರಿಟಿಷರು ರೂಪಿಸಿದ ನ್ಯಾಯಾಂಗ ವ್ಯವಸ್ಥೆಯನ್ನು ವಿಶ್ಲೇಷಿಸಿರಿ.**
* ವಾರನ್ ಹೇಸ್ಟಿಂಗ್ಸ್ ನಿಂದ ಹೊಸ ನ್ಯಾಯಾಂಗ ವ್ಯವಸ್ಥೆ ಜಾರಿ.
* ಎರಡು ಬಗೆಯ ನ್ಯಾಯಾಲಯ ದಿವಾನಿ ಅದಾಲತ್ ಮತ್ತು ಫೌಜದಾರಿ ಅದಾಲತ್

. **ದಿವಾನಿ ಅದಾಲತ್** (ನಾಗರೀಕ ನ್ಯಾಯಾಲಯ)
*. ಹಿಂದೂಗಳಿಗೆ ಧರ್ಮಶಾಸ್ತ್ರದ ಪ್ರಕಾರ ಮುಸಲ್ಮಾನರಿಗೆ ಷರಿಯತ್ ಪ್ರಕಾರ ನ್ಯಾಯ.
* ಇವು ಯೂರೋಪಿನ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕಾರ್ಯ.

**ಪೌಜದಾರಿಅದಾಲತ್**(ಅಪರಾಧ ನ್ಯಾಯಾಲಯ)
* ಎಲ್ಲರಿಗೂ ಇಸ್ಲಾಂ ಕಾನೂನುಗಳ ಅನುಸಾರ ವಿಚಾರಣೆ.
* ಕಾಜಿಗಳ ಅಧೀನದಲ್ಲಿದ್ದರು ಯುರೋಪಿಯನ್ನರ ಮೇಲ್ವಿಚಾರಣೆಯಲ್ಲಿಯೇ ಕಾರ್ಯ.

2. **ಬ್ರಿಟಿಷರ ಕಾಲದಲ್ಲಿ ಪೋಲೀಸ್ ವ್ಯವಸ್ಥೆಯಲ್ಲಿ ತಂದಂತಹ ಸುಧಾರಣೆಗಳಾವುವು**?
* ಸೂಪರಿಡೆಂಟೆಂಟ್ಆಫ್ ಪೊಲೀಸ್ ಹುದ್ದೆ ಸೃಷ್ಟಿ.
* ಜಿಲ್ಲಾ ಠಾಣೆಗಳು **ಕೊತ್ವಾಲ**ರ ಅಧೀನಕ್ಕೆ ಮತ್ತು ಹಳ್ಳಿಗಳು **ಚೌಕಿದಾರ**ರ ಅಧೀನ.
* ಕೊತ್ವಾಲರಿಗೆ ಹಳ್ಳಿಗಳಲ್ಲಿ ಕಳ್ಳತನ, ಅಪರಾಧ, ದರೋಡೆಗಳ ನಿಯಂತ್ರಣದ ಜವಾಬ್ದಾರಿ.
* 1861ರಲ್ಲಿ **ಪೊಲೀಸ್ಕಾಯ್ದೆ** ಜಾರಿ.
* ಪೊಲೀಸ್ ಅಧಿಕಾರಿಗಳು ಮ್ಯಾಜಿಸ್ಟ್ರೇಟ್‌ಗಳ ಅಧೀನಕ್ಕೆ.
* 1902ರಲ್ಲಿ ಪೊಲೀಸ್ ಕಮಿಷನ್ ಕಾಯ್ದೆ ಜಾರಿ.

3. **ಖಾಯಂಜಮೀನ್ದಾರಿ ಪದ್ಧತಿಯು ರೈತರನ್ನು 'ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸಾಯುವಂತೆ' ಮಾಡಿತು. ಹೇಗೆ**? **ಅಥವಾ**

**ಖಾಯಂ ಜಮೀನ್ದಾರಿ ಪದ್ಧತಿ ಒಳಗೊಂಡಿದ್ದ ಪ್ರಮುಖಾಂಶಗಳು ಯಾವುವು? ಅಥವಾ**
**ಖಾಯಂ ಜಮೀನ್ದಾರಿ ಪದ್ಧತಿ ರೈತರ ಶೋಷಣೆಗೆ ಹೇಗೆ ಕಾರಣವಾಯಿತು?**

* ರೈತರ ಭೂ ಮಾಲಿಕತ್ವವನ್ನು ಕಸಿದುಕೊಂಡಿತು
* ಜಮೀನ್ದಾರರು ರೈತರಿಂದ ಹೆಚ್ಚಿನ ತೆರಿಗೆ ವಸೂಲಿ.
* ತೆರಿಗೆ ನೀಡದ ರೈತರ ಭೂಮಿ ಬ್ರಿಟಿಷರ ವಶವಾಗುತಿತ್ತು..
* ಇದರಿಂದ ಬ್ರಿಟಿಷರಿಗೆ ಮತ್ತು ಜಮೀನ್ದಾರರಿಗೆ ಲಾಭವಾಯಿತೇ ವಿನಃ ರೈತರಿಗಾಗಲಿಲ್ಲ.
*. ರೈತರು,ರೈತ ಕೂಲಿ ಕಾರ್ಮಿಕರು ಜಮೀನ್ದಾರರಿಂದ ಬಹುಮುಖಿ ಶೋಷಣೆಗೊಳಗಾದರು,
* ರೈತರ ಬದುಕು ಅತಂತ್ರ ಸ್ಥಿತಿಯಿಂದ ಕೂಡಿತ್ತು

**4. ಗರಿಷ್ಠ ಪ್ರಮಾಣದ ರೈತರು ರೈತವಾರಿ ಪದ್ಧತಿಯಿಂದ ಸಾಲದ ಸುಳಿಗೆ ಸಿಲುಕಿದರು ಸಷ್ಟೀಕರಿಸಿ**
**ರೈತವಾರಿ ಪದ್ದತಿಯು ಒಳಗೊಂಡ ಪ್ರಮುಖಾಂಶಗಳಾವುವು? ಅಥವಾ**
**ರೈತವಾರಿ ಪದ್ದತಿಯಲ್ಲಿ ಅಡಕವಾಗಿರುವ ಅಂಶಗಳಾವುವು?**

* ಸರಕಾರ ಮತ್ತು ರೈತನ ನಡುವೆ ನೇರ ಸಂಪರ್ಕ.
* ಭೂಮಿ ಉಳುಮೆ ಮಾಡುತ್ತಿದ್ದವನೇ ಅದರ ಮಾಲೀಕನಾದನು
* ಉತ್ಪನ್ನದ ಶೇಕಡ 50ರಷ್ಟು ಭಾಗ ಕಂದಾಯ ರೂಪದಲ್ಲಿ ಸಲ್ಲಿಕೆ.
* ಕಂದಾಯವನ್ನು 30 ವರ್ಷಗಳ ಅವಧಿಗೆ ನಿಗದಿಪಡಿಸಲಾಗಿತ್ತು.
* ತೆರಿಗೆ ಸಂಗ್ರಹಿಸಲು ಬ್ರಿಟಿಷರಿಂದ ಕಠಿಣ ಕ್ರಮ.
* ಲೇವಾದೇವಿಗಾರರಿಂದ ಪಡೆದ ಸಾಲ ತೀರಿಸಲಾಗದೆ ರೈತರಿಂದ ಜಮೀನು ಮಾರಾಟ
* ಗರಿಷ್ಠ ಪ್ರಮಾಣದ ರೈತರು ಸಾಲದ ಸುಳಿಗೆ ಸಿಲುಕಿದರು

**5. ಬ್ರಿಟಿಷರ ಕಂದಾಯ ನೀತಿಗಳಿಂದಾದ ಪರಿಣಾಮಗಳಾವುವು? ಅಥವಾ**
**ಬ್ರಿಟಿಷರ ಭೂ ಕಂದಾಯ ನೀತಿಯು ಭಾರತೀಯರನ್ನು ಸಂಪೂರ್ಣವಾಗಿ ಶೋಷಿಸಿತು. ಹೇಗೆ? ಅಥವಾ**
**ಬ್ರಿಟಿಷರ ಕಂದಾಯ ಪದ್ಧತಿಗಳು ಭಾರತೀಯ ಕೃಷಿ ಮೇಲೆ ಪರಿಣಾಮ ಬೀರಿತು. ಸ್ಪಷ್ಟೀಕರಿಸಿ.**

* ರೈತರನ್ನು ಶೋಷಿಸುವ ಜಮೀನ್ದಾರಿ ಸಮುದಾಯ ಸೃಷ್ಟಿ.
* ಭೂಮಿ ಮಾರಾಟದ ವಸ್ತುವಾಯಿತು.
* ಜಮೀನ್ದಾರರ ಶೋಷಣೆಯಿಂದ ರೈತರು ನಿರ್ಗತಿಕರಾದರು
* ಕೃಷಿ ಕ್ಷೇತ್ರದ ವಾಣಿಜ್ಯೀಕರಣ
* ಭೂಮಿಯನ್ನು ಪರಭಾರೆ ಮಾಡಿ ಸಾಲ ಪಡೆಯಬಹುದಾಗಿತ್ತು.
* ಹಣದ ಲೇವಾದೇವಿಗಾರರು ಬಲಿಷ್ಠರಾದರು.
*ಇಂಗ್ಲೆಂಡಿನ ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳನ್ನೇ ಬೆಳೆಯ ಬೇಕಾಯಿತು.

**6. ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ತಂದ ಸುಧಾರಣೆಗಳು ಯಾವುವು?**

* ವಾರನ್ ಹೇಸ್ಟಿಂಗ್ಸ್ ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನ.
* ಕಲ್ಕತ್ತದಲ್ಲಿ ಮದರಸಾ ಪ್ರಾರಂಭ.
* ಡಂಕನ್ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದನು.

* ಚಾರ್ಲ್ಸ್‌ಗ್ರಾಂಟ್ ಬ್ರಿಟಿಷ್ ಶಿಕ್ಷಣದ ವಿಸ್ತರಣೆಗೆ ಒತ್ತಾಯಿಸಿದನು.
* ವಿಲಿಯಂ ಬೆಂಟಿಂಕನಿಂದ ಬ್ರಿಟಿಷ್ ಶಿಕ್ಷಣದ ವಿಸ್ತರಣೆಗೆ ಪ್ರೋತ್ಸಾಹ.
* ಮೆಕಾಲೆ ವರದಿಯು ಅಧುನಿಕ ಭಾರತದ ಶಿಕ್ಷಣ ವ್ಯವಸ್ಥೆಗೆ ತಳಹದಿಯಾಯಿತು.
* ಡಾಲ್‌ಹೌಸಿಯು ಕಲ್ಕತ್ತಾ, ಬಾಂಬೆ ಮತ್ತು ಮದರಾಸುಗಳಲ್ಲಿ ವಿಶ್ವವಿದ್ಯಾನಿಲಯಗಳ ಸ್ಥಾಪಿಸಿದನು.

**7. ಬ್ರಿಟಿಷ್ ಶಿಕ್ಷಣದಿಂದ ಉಂಟಾದ ಪರಿಣಾಮಗಳನ್ನು ಪಟ್ಟಿಮಾಡಿ. ಅಥವಾ**
**ಬ್ರಿಟಿಷ್ ಶಿಕ್ಷಣದಿಂದ ಭಾತರದ ಮೇಲಾದ ಪರಿಣಾಮಗಳನ್ನು ವಿವರಿಸಿ. ಅಥವಾ**
**ಬ್ರಿಟಿಷ್ ಶಿಕ್ಷಣದ ಪ್ರಭಾವದಿಂದ ಉಂಟಾದ ಅಭಿರುಚಿ ಮತ್ತು ಅಲೋಚನೆಗಳು ಭಾರತದಲ್ಲಿ ಹೊಸ ತಲೆಮಾರುಗಳ ಸೃಷ್ಟಿಗೆ ಹೇಗೆ ಕಾರಣವಾದವು?**

* ಭಾರತೀಯರಲ್ಲಿ ಪ್ರಜಾಪ್ರಭುತ್ವ, ವೈಜ್ಞಾನಿಕ ಮತ್ತು ರಾಷ್ಟ್ರೀಯವಾದಿ ಮನೋಭಾವ ಬೆಳವಣಿಗೆ
* ಸ್ಥಳೀಯ ಭಾಷೆಗಳಲ್ಲಿ ಸಾಹಿತ್ಯ ರಚನೆಗೆ ಪ್ರೋತ್ಸಾಹ.
* ವೃತ್ತ ಪತ್ರಿಕೆಗಳಿಂದ ಭಾರತೀಯರಲ್ಲಿ ಬ್ರಿಟಿಷ್ ಆಡಳಿತದ ಬಗ್ಗೆ ವಿಮರ್ಶಾತ್ಮಕ ಅಭಿಪ್ರಾಯ ಬೆಳೆಯಿತು.
* ಹೊಸ ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳ ಹುಟ್ಟು.
* ಜೆ.ಎಸ್.ಮಿಲ್, ರೂಸೋ, ಮಾಂಟೆಸ್ಕ್ಯೂರವರ ಚಿಂತನೆಗಳು ಆಲೋಚನೆಯಲ್ಲಿ ಹೊಸತನ ತಂದವು.
* ಜಗತ್ತಿನಾದ್ಯಂತ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಗಳ ಪ್ರಭಾವ ಭಾರತೀಯರ ಮೇಲಾಯಿತು.
* ಭಾರತೀಯರು ತಮ್ಮ ಸಾಂಸ್ಕೃತಿಕ ಪರಂಪರೆಗಳನ್ನು ಅರಿತುಕೊಳ್ಳಲು ಸಾಧ್ಯವಾಯಿತು.

**8. ರೆಗ್ಯೂಲೇಟಿಂಗ್‌ಕಾಯ್ದೆ ಹೊಂದಿದ್ದ ನಿಬಂಧನೆಗಳಾವುವು?(1773)**

* ಬಂಗಾಳ ಪ್ರೆಸಿಡೆನ್ಸಿಯಿಂದ ಬಾಂಬೆ ಮತ್ತು ಮದರಾಸು ಪ್ರೆಸಿಡೆನ್ಸಿಗಳ ಮೇಲೆ ಅಧಿಕಾರ
* ಬಂಗಾಳದ ಗವರ್ನರ್ ಮೂರು ಪ್ರೆಸಿಡೆನ್ಸಿಗಳ ಗವರ್ನರ್ ಜನರಲ್ ಆದನು.
* ಗವರ್ನರ್ ಜನರಲ್ಲನಿಗೆ ಬಾಂಬೆ ಮತ್ತು ಮದರಾಸು ಪ್ರೆಸಿಡೆನ್ಸಿಗಳಿಗೆ ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ಮಾಡುವ ಅಧಿಕಾರ
* ಕೋಲ್ಕತ್ತಾದಲ್ಲಿ ಸುಪ್ರೀಂಕೋರ್ಟ್ ಸ್ಥಾಪನೆ.
* ಭಾರತದ ಆಡಳಿತ ಇಂಗ್ಲೆಂಡಿನ ಸರ್ಕಾದ ಅಧೀನಕ್ಕೆ.
* ಬಂಗಾಳ ಸರ್ಕಾರ ಮತ್ತು ಇಂಗ್ಲೆಂಡಿನ ನಿರ್ದೇಶಕ ಮಂಡಳಿಯ ಅನುಮತಿಯಿಲ್ಲದೆ ಬಾಂಬೆ ಮತ್ತು ಮದರಾಸು ಸರ್ಕಾರಗಳು ಯಾರ ಮೇಲೂ ಯುದ್ಧ ಅಥವಾ ಶಾಂತಿ ಸಂಧಾನವನ್ನು ನಡೆಸುವಂತಿಲ್ಲ.

**9. 1919ರ ಭಾರತೀಯ ಪರಿಷತ್‌ಕಾಯ್ದೆಯ ಪ್ರಮುಖ ಅಂಶಗಳಾವುವು?**

* ಕೇಂದ್ರದಲ್ಲಿ ದ್ವಿಸದನ ಶಾಸಕಾಂಗ ರಚನೆಗೆ ಅವಕಾಶ.
* ಪ್ರಾಂತ್ಯಗಳಲ್ಲಿ ದ್ವಿಸರಕಾರ ಜಾರಿ.
* ಭಾರತಕ್ಕೆ ಒಬ್ಬ ಹೈಕಮಿಷನರ್‌ನ ನೇಮಕ.

* ಸ್ವಯಂ ಆಡಳಿತವುಳ್ಳ ಸ್ಥಳೀಯ ಸಂಸ್ಥೆಗಳ ಅಭಿವೃದ್ಧಿಗೆ ಭರವಸೆ.
* ಕೇಂದ್ರದ ಬಜೆಟ್‌ನಿಂದ ಪ್ರಾಂತ್ಯಗಳ ಬಜೆಟನ್ನು ಬೇರ್ಪಡಿಸಲಾಯಿತು.
* ಮುಸ್ಲಿಂ, ಸಿಖ್, ಆಂಗ್ಲೋ–ಇಂಡಿಯನ್ನರಿಗೆ ಪ್ರತ್ಯೇಕ 'ಚುನಾವಣಾ ಮತಗಟ್ಟೆಗಳ ಸ್ಥಾಪನೆ.

**10. 1935ರ ಭಾರತ ಸರ್ಕಾರಕಾಯ್ದೆ ಭಾರತ ಸಂವಿಧಾನದ ಬುನಾದಿ ಸಮರ್ಥಿಸಿ. ಅಥವಾ 1935ರ ಭಾರತ ಸರ್ಕಾರಕಾಯ್ದೆ ಪ್ರಮುಖ ಅಂಶಗಳಾವುವು?**

* ಸಂವಿಧಾನದ ಬಹುತೇಕ ಅಂಶಗಳನ್ನು ಈ ಕಾಯ್ದೆಯನ್ನೇ ಆಧರಿಸಿ ರಚಿಸಲಾಗಿದೆ.
* ಸಂಪೂರ್ಣ ಜವಾಬ್ದಾರಿ ಸರ್ಕಾರ ರಚನೆಗೆ ಅವಕಾಶ.
* ಅಖಿಲ ಭಾರತ ಒಕ್ಕೂಟ ರಚನೆಗೆ ಅವಕಾಶ.
* ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಗೆ ಅವಕಾಶ.
* ಭಾರತದಲ್ಲಿ ಫೆಡರಲ್‌ಕೋರ್ಟ್ ಸ್ಥಾಪನೆಗೆ ಅವಕಾಶ.
* ಕೇಂದ್ರದಲ್ಲಿ ದ್ವಿಸರಕಾರ ಜಾರಿಗೆ ಬಂತು.
* ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಿತು.

## ಅಧ್ಯಾಯ 5

## ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳು

**1. ಭಾರತದ ಇತಿಹಾಸದಲ್ಲಿ 19ನೆಯ ಶತಮಾನವನ್ನು 'ಭಾರತೀಯ ಪುನರುಜ್ಜೀವನ' ಕಾಲವೆಂದು ಕರೆಯುತ್ತಾರೆ ಸಮರ್ಥಿಸಿ.**

* ಪಾಶ್ಚಾತ್ಯ ನಾಗರಿಕತೆಯ ಸಂಪರ್ಕ.
* ಇಂಗ್ಲಿಷ್ ವಿದ್ಯಾಭ್ಯಾಸದ ಸೌಲಭ್ಯ.
* ವೈಚಾರಿಕತೆಯ ಮನೋಭಾವ ಬೆಳೆಯಿತು.
* ಇದು ಮೂಢನಂಬಿಕೆಗಳನ್ನು ಪ್ರಶ್ನಿಸಲು ಪ್ರೇರೇಪಿಸಿತು.
* ದ್ವಂದ್ವ, ವಿರೋಧಾಭಾಸ ಹಾಗೂ ಸ್ವಹಿತಾಸಕ್ತಿಗಳ ಅರಿವು.
* ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಸಮಾನತೆ, ರಾಷ್ಟ್ರೀಯತೆಯಂತಹ ಪಾಶ್ಚಾತ್ಯ ಪರಿಕಲ್ಪನೆಗಳು ಪರಿಚಯ.
* ಪಾಶ್ಚಾತ್ಯ ಶಿಕ್ಷಣದಿಂದ ಉಂಟಾದ ಜಾಗೃತಿ.

**2. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳಲ್ಲಿ ಬ್ರಹ್ಮ ಸಮಾಜದ ಪಾತ್ರವನ್ನು ವಿವರಿಸಿ? ಅಥವಾ ಬ್ರಹ್ಮಸಮಾಜದ ಭೋಧನೆಗಳು ಯಾವುವು?**

* ಸ್ತ್ರೀ ಶೋಷಣೆಗೆ ವಿರೋಧ
* ಸತಿ ಪದ್ಧತಿ ಮತ್ತು ಬಾಲ್ಯವಿವಾಹದ ವಿರುದ್ಧ ಹೋರಾಟ
* ಹಿಂದೂ ಧರ್ಮದಲ್ಲಿದ್ದ ಆಚಾರ–ವಿಚಾರಗಳ ಸುಧಾರಣೆಗೆ ಪ್ರಯತ್ನ.
* ವಿಗ್ರಹಾರಾಧನೆ ಮತ್ತು ಬಹುದೇವತಾ ಆರಾಧನೆಗೆ ವಿರೋಧ
* ಏಕದೇವತಾ ಆರಾಧನೆಗೆ ಪ್ರೋತ್ಸಾಹ.
* ಯಜ್ಞಯಾಗಾದಿಗಳನ್ನು ಖಂಡಿಸಿತು.
* ಪುರೋಹಿತ ಶಾಹಿಯನ್ನು ವಿರೋಧಿಸಿತು

**3. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳಲಿ ಸ್ವಾಮಿ ದಯಾನಂದ ಸರಸ್ವತಿಯರ ಪಾತ್ರವನ್ನು ವಿವರಿಸಿ. ಅಥವಾ**

**ಆರ್ಯ ಸಮಾಜದ ಉದ್ದೇಶಗಳೇನು?**

* ಆರ್ಯ ಸಮಾಜ ಸ್ಥಾಪನೆ, ವೇದಗಳಿಗೆ ಹಿಂದಿರುಗಿ ಘೋಷಣೆ
* ವಿಗ್ರಹರಾಧನೆ ಮತ್ತು ಜಾತಿಪದ್ಧತಿಖಂಡನೆ
* ಪುರೋಹಿತಶಾಹಿ ಅಧಿಕಾರ ತಿರಸ್ಕಾರ
* ವಿಧವಾ ವಿವಾಹಕ್ಕೆ ಪ್ರೋತ್ಸಾಹ, ಸ್ವದೇಶಿ ಚಳವಳಿಗೆ ಕರೆ
* ಸತ್ಯಾರ್ಥ ಪ್ರಕಾಶ ಕೃತಿಯಲ್ಲಿ ತಮ್ಮ ವಿಚಾರಗಳ ಪ್ರತಿಪಾದನೆ
* ಶುದ್ಧಿ ಚಳವಳಿ ಮತ್ತು ಶಾಲಾ ಕಾಲೇಜುಗಳ ಸ್ಥಾಪನೆ
* ಭಾರತೀಯರು ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆ

**4. ಸತ್ಯ ಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ. ಅಥವಾ**

**ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳು ಯಾವುವು?**

* ಸ್ವಾತಂತ್ರ್ಯ ಪ್ರತಿಯೊಬ್ಬ ಮನುಷ್ಯನ ಪ್ರಥಮ ಅವಶ್ಯಕತೆ ಎಂದು ಪ್ರತಿಪಾದನೆ
* ಪಾನ ನಿಷೇಧಕ್ಕೆ ಒತ್ತಾಯ
* ಸ್ತ್ರೀಪುರುಷರ ಅಸಮಾನತೆ, ಮಾನವ ಹಕ್ಕುಗಳ ನಿರಾಕರಣೆಗೆ ವಿರೋಧ
* ಶೋಷಣೆ ಮತ್ತು ಅಸ್ಪೃಶ್ಯತಾ ಆಚರಣೆಗೆ ವಿರೋಧ

.* ಸಾಮಾಜಿಕ ನ್ಯಾಯಕ್ಕಾಗಿ ಚಳುವಳಿ

* ವಿದ್ಯಾರ್ಥಿನಿಯರ ಶಿಕ್ಷಣಕ್ಕಾಗಿ ಶಾಲೆ ಪ್ರಾರಂಭ
* ಗುಲಾಮಗಿರಿಗ ೆಕಾರಣರಾದವರನ್ನು ಉಗ್ರವಾಗಿ ಖಂಡಿಸಿತು.
* ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪ್ರತಿಪಾದನೆ.
* ರೈತಪರವಾದ ಹೋರಾಟ
* ಸಾವಿತ್ರಿಬಾಯಿ ಫುಲೆರವರಿಂದ ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹ

**5. ಆಲಿಘರ್ ಚಳವಳಿಯ ಉದ್ದೇಶಗಳನ್ನು ವಿಶ್ಲೇಷಿಸಿ**

* ಮುಸ್ಲಿಂರಿಗೆ ಆಧುನಿಕ ಶಿಕ್ಷಣ ನೀಡುವುದು
* ಆಂಗ್ಲೋ ಓರಿಯೆಂಟಲ್ ಕಾಲೇಜು ಸ್ಥಾಪನೆ
* ಪಾಶ್ಚಾತ್ಯ ಶಿಕ್ಷಣದೊಂದಿಗೆ ಧಾರ್ಮಿಕ ಶಿಕ್ಷಣ ನೀಡುವುದು
* ಸ್ತ್ರೀ ಶಿಕ್ಷಣಕ್ಕೆ ಬೆಂಬಲ
* ಬಹುಪತ್ನಿತ್ವದ ಖಂಡನೆ
* ವಿಧವಾ ವಿವಾಹದ ವಿರುದ್ಧ ವಿಚಾರಗಳ ಖಂಡನೆ

**6) ಸ್ವಾಮಿ ವಿವೇಕಾನಂದರು ಯುವ ಶಕ್ತಿಯ ಪ್ರೇರಕರಾಗಿದ್ದರು ಹೇಗೆ ವಿವರಿಸಿ,**

* ರಾಮಕೃಷ್ಣ ಪರಮಹಂಸರ ಆದರ್ಶಗಳನ್ನು ಪ್ರಚಾರ.
* ರಾಮಕೃಷ್ಣ ಮಿಷನ್ ಸ್ಥಾಪನೆ.

* ಜೀವನ ಪ್ರೀತಿಯ ಮಹತ್ವವನ್ನು ಸಾರಿದರು.
* ಸಮಾಜ ಸೇವೆಗೆ ಮಹತ್ವ.
* ಇವರ ಚಿಂತನೆಗಳು ಗಾಂಧೀಜಿ ಹಾಗೂ ಅನೇಕ ರಾಷ್ಟ ನಾಯಕರಿಗೆ ಪ್ರೇರಣೆಯಾಯಿತು.
* ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಷಣ.
* ಸರ್ವಧರ್ಮ ಸಹಿಷ್ಣುತೆ ಸಕಲಧರ್ಮಗಳು ಸತ್ಯವೆಂದು ಪ್ರತಿಪಾದನೆ.
* ವಿಶ್ವಕ್ಕೆ ಭಾರತೀಯ ಸಂಸ್ಕೃತಿಯ ಪರಿಚಯ.

**7. ಅನಿಬೆಸೆಂಟೆರ ಸುಧಾರಣಾ ಕ್ರಮಗಳು ಯಾವುವು? ಅಥವಾ**
**ಅನಿಬೆಸೆಂಟರವರ ಭಾರತೀಯ ಇತಿಹಾಸದಲ್ಲಿ ಮರೆಯಲಾಗದ ಮಹಿಳೆ.ಏಕೆ? ಅಥವಾ**
**ಭಾರತೀಯ ಸಂಸ್ಕೃತಿ ಮತ್ತು ರಾಜಕೀಯಕ್ಕೆ ಅನಿಬೆಸೆಂಟರ ಕೊಡುಗೆ ಅವಿಸ್ಮರಣೀಯವಾದದ್ದು ಸಮರ್ಥಿಸಿ.ಅಥವಾ ಭಾರತಕ್ಕೆ ಅನಿಬೆಸೆಂಟರವರ ಕೊಡುಗೆಗಳೇನು?**

* ಭಾರತೀಯ ಸಂಸ್ಕೃತಿಯ ಬಗ್ಗೆ ಅಭಿಮಾನ ಮೂಡಿಸುವುದು.
* ಸಮಾಜದಲ್ಲಿ ಸಮಾನತೆ ಮತ್ತು ವಿಶ್ವಸಹೋದರತೆ ವೃದ್ಧಿ
* ಸಮಾಜದಲ್ಲಿ ಸಾಮರಸ್ಯ ಸಾಧಿಸಲು ಪ್ರಯತ್ನ
* ಸ್ವಾತಂತ್ರ್ಯ ಚಳವಳಿಗೆ ವ್ಯಾಪಕ ಬೆಂಬಲ
* ನ್ಯೂ ಇಂಡಿಯ ಪತ್ರಿಕೆ ಆರಂಭ
* ಹೋಂರೂಲ್ ಚಳವಳಿ ಪ್ರಾರಂಭ

**8. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣಾ ಚಳವಳಿಗಳಲ್ಲಿ ಪ್ರಾರ್ಥನಾ ಸಮಾಜದ ಪಾತ್ರವನ್ನು ವಿವರಿಸಿ?**

* ಶಿಕ್ಷಣ ಪ್ರಸಾರಕ್ಕೆ ಹೆಚ್ಚಿನ ಆದ್ಯತೆ
* ಡೆಕ್ಕನ್ ಶಿಕ್ಷಣ ಸಂಸ್ಥೆ ಸ್ಥಾಪನೆ
* ವಿಧವಾ ವಿವಾಹ, ಸ್ತ್ರೀ ಶಿಕ್ಷಣಕ್ಕೆ ಪ್ರೋತ್ಸಾಹ
* ಅಂತರ್ಜಾತಿ ವಿವಾಹ, ಸಹಭೋಜನಕ್ಕೆ ಪ್ರೋತ್ಸಾಹ
* ಬಾಲ್ಯವಿವಾಹ, ಜಾತಿಪದ್ಧತಿಗಳಿಗೆ ವಿರೋಧ
* ವಿಗ್ರಹಾರಾಧನೆ, ಪರದಾ ಪದ್ಧತಿಗಳ ವಿರೋಧ
* ಅನಾಥಾಲಯಗಳು, ರಾಷ್ಟ್ರೀಯ ಶಾಲೆಗಳು ಮತ್ತು ವಿಧವಾ ಆಶ್ರಮಗಳ ಸ್ಥಾಪನೆ
* ರಾನಡೆರವರಿಂದ ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಪ್ರೌಢಶಾಲೆ ಆರಂಭ

## ಅಧ್ಯಾಯ– 6

## .ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1857)

**1. 1857ರ ದಂಗೆಯ ರಾಜಕೀಯ ಕಾರಣಗಳು ಯಾವುವು? ಅಥವಾ**
**ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದಾದ ಪರಿಣಾಮಗಳು ಯಾವುವು? ವಿಶ್ಲೇಷಿಸಿ.**

* ದತ್ತು ಮಕ್ಕಳಿಗೆ ಹಕ್ಕಿಲ್ಲ ನೀತಿಯಿಂದ ದೇಶಿಯ ಸಂಸ್ಥಾನಗಳ ವಶ.
* ಸತಾರಾ ,ಝಾನ್ಸಿ, ಉದಯಪುರ, ಜೈಪುರ ಬ್ರಿಟಿಷರ ವಶ
* ತಾಂಜಾವೂರು ಮತ್ತು ಕಾರ್ನಾಟಿಕ್ ರಾಜರ ಪದವಿ ರದ್ದು.
* ಮೊಘಲ್ ಚಕ್ರವರ್ತಿ ಮತ್ತು ಔದ್‌ನ ನವಾಬರ ಪದಚ್ಯುತಿ.
* ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು
* 1857ರ ದಂಗೆಗೆ ಪ್ರೇರಣೆಯನ್ನು ನೀಡಿತು

**2. 1857ರ ದಂಗೆಗೆ ಆಡಳಿತಾತ್ಮಕ ಕಾರಣಗಳಾವವು?**

* ಹೊಸ ನಾಗರಿಕ ಮತ್ತು ಅಪರಾಧ ಕಾಯ್ದೆಗಳ ಜಾರಿ.
* ಕಾನೂನಿನಲ್ಲಿ ಪಕ್ಷಪಾತ
* ಭಾರತೀಯರಿಗೆ ಪ್ರತ್ಯೇಕ ನಿಯಮಗಳ ಅನ್ವಯ
* ಆಂಗ್ಲ ಭಾಷೆ ನ್ಯಾಯಾಲಯದ ಭಾಷೆಯಾಯಿತು.
* ಇಂಗ್ಲಿಷ್ ನ್ಯಾಯಾದೀಶರಿಂದ ಇಂಗ್ಲಿಷರ ಪರವಾಗಿ ನ್ಯಾಯ
* ಹೊಸ ಕಾನೂನಿನ ಆಶಯಗಳು ಜನರಿಗೆ ಅರ್ಥವಾಗಲಿಲ್ಲ.

**3. 1857ರ ದಂಗೆಗೆ ಆರ್ಥಿಕ ಬದಲಾವಣೆಗಳು ಹೇಗೆ ಕಾರಣವಾದವು? ವಿವರಿಸಿ.**
**ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಾರಣವಾದ ಆರ್ಥಿಕ ಅಂಶಗಳನ್ನು ವಿವರಿಸಿ.**

* ಇಂಗ್ಲೆಂಡಿನ ಕೈಗಾರಿಕಾ ಕ್ರಾಂತಿಯಿಂದ ಕರಕುಶಲ ಮತ್ತು ದೇಶೀಯ ಕೈಗಾರಿಕೆಗಳ ಅವನತಿ.
* ಭಾರತದ ಕರಕುಶಲಗಾರರು ನಿರುದ್ಯೋಗಿಗಳಾದರು.
* ಆರ್ಥಿಕ ನಷ್ಟದಿಂದ ಗೃಹ ಕೈಗಾರಿಕೆಗಳ ಅವನತಿ.
* ಭಾರತದ ವಸ್ತುಗಳಿಗೆ ದುಬಾರಿ ಸುಂಕ ಹೇರಿದರು.
*. ಜಮಿನ್ದಾರಿ ಪದ್ದತಿಯಿಂದ ರೈತರ ಶೋಷಣೆ.
* ಇನಾಂ ಭೂಮಿ ವಾಪಾಸ್ ಪಡೆಯಲಾಯಿತು.
* ಕೃಷಿಕರು ಅವಮಾನ ಮತ್ತು ಆರ್ಥಿಕ ಸಂಕಷ್ಟ ಅನುಭವಿಸಿದರು.

**3. ದಂಗೆಯ ವಿಫಲತೆಗೆ ಕಾರಣಗಳನ್ನು ಪಟ್ಟಿ ಮಾಡಿ.**
**1857ರ ಪ್ರಥಮ ಸಂಗ್ರಾಮವು ವಿಫಲವಾಗಲು ಕಾರಣಗಳನ್ನು ವಿವರಿಸಿ.**

* ದಂಗೆಯು ದೇಶದಾದ್ಯಂತ ವ್ಯಾಪಿಸಿರಲಿಲ್ಲ

* ಸೂಕ್ತ ಸೇನಾ ನಾಯಕತ್ವ ಮತ್ತು ಶಿಸ್ತಿನ ಕೊರತೆ.
* ಸೂಕ್ತ ಮಾರ್ಗದರ್ಶನ ಮತ್ತು ಸಂಘಟನೆಯ ಕೊರತೆ.
* ಸಿಪಾಯಿಗಳಿಗೆ ನಿಶ್ಚಿತ ಗುರಿ ಇರಲಿಲ್ಲ.
* ಇಂಗ್ಲಿಷರಲ್ಲಿದ್ದ ಒಗ್ಗಟ್ಟು ಭಾರತೀಯ ಸಿಪಾಯಿಗಳಲ್ಲಿ ಇರಲಿಲ್ಲ.
* ಕೆಲವು ದೇಶಿಯ ರಾಜರುಗಳು ಬ್ರಿಟಿಷರಿಗೆ ಬೆಂಬಲ ನೀಡಿದರು.
* ಸಿಪಾಯಿಗಳಲ್ಲಿ ದೇಶದ ಹಿತಕ್ಕಿಂತ ಸ್ವಹಿತಾಸಕ್ತಿ ಹೆಚ್ಚಾಗಿತ್ತು.
* ಸಿಪಾಯಿಗಳು ಲೂಟಿ, ದರೋಡೆ ಮಾಡಿ ಜನಸಾಮಾನ್ಯರ ವಿಶ್ವಾಸ ಕಳೆದುಕೊಂಡರು.

**4. 1857ರ ದಂಗೆಯ ಪರಿಣಾಮಗಳು ಯಾವುವು?**

* ಈಸ್ಟ್ ಇಂಡಿಯಾಕಂಪನಿಯ ಆಳ್ವಿಕೆ ಅಂತ್ಯ
* ಬ್ರಿಟನ್‌ರಾಣಿಗೆ ಆಡಳಿತ ವರ್ಗಾವಣೆ
* ಭಾರತದ ವ್ಯವಹಾರವನ್ನು ಬ್ರಿಟಿಷ್ ಪಾರ್ಲಿಮೆಂಟಿನ ಭಾರತದ ವ್ಯವಹಾರಗಳ ಕಾರ್ಯದರ್ಶಿಗೆ ಒಪ್ಪಿಸಲಾಯಿತು.
* ಭಾರತೀಯರ ಪ್ರೀತಿ, ವಿಶ್ವಾಸ ಗಳಿಸದಿದ್ದರೆ ಶಾಂತಿಯಿಂದ ಆಳುವುದು ಕಷ್ಟ ಎಂದು ಬ್ರಿಟಿಷರು ತಿಳಿದರು.
*. ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ದಿಕ್ಸೂಚಿಯಾಯಿತು.

**5. ಬ್ರಿಟನ್ ರಾಣಿಯ ಘೋಷಣೆಗಳು ಯಾವುವು.?**

* ದೇಶಿಯ ರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದಗಳ ಅಂಗೀಕಾರ.
* ಪ್ರಾದೇಶಿಕ ವಿಸ್ತರಣೆಯ ಅಪೇಕ್ಷೆಯನ್ನು ಕೈಬಿಡುವುದು.
* ಭಾರತೀಯರಿಗೆ ಸುಭದ್ರ ಸರ್ಕಾರ ನೀಡುವುದು
* ಕಾನೂನಿನ ಮುಂದೆ ಸಮಾನತೆ
* ಧಾರ್ಮಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡದಿರುವುದು
* ಭಾರತೀಯರ ಪ್ರೀತಿ, ವಿಶ್ವಾಸ ಗಳಿಸದಿದ್ದರೆ ಶಾಂತಿಯಿಂದ ಆಳುವುದು ಕಷ್ಟ ಎಂಬ ಅರಿವು.

## ಅಧ್ಯಾಯ : 7 ಸ್ವಾತಂತ್ರ್ಯ ಹೋರಾಟ

**1 . ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಪಾತ್ರವೇನು ? ಅಥವಾ**
**ಸ್ವಾತಂತ್ರ್ಯ ಹೋರಾಟದಲ್ಲಿ ಉದಾರ ರಾಷ್ಟ್ರೀಯವಾದದ ಕಾಲವನ್ನು ಮಂದಗಾಮಿಗಳ ಯುಗವೆಂದು ಕರೆಯಲಾಗಿದೆ. ಸಷ್ಟೀಕರಿಸಿ ಅಥವಾ**
**ಮಂದಗಾಮಿಗಳು ಬ್ರಿಟಿಷರ ಮುಂದಿಟ್ಟ ಬೇಡಿಕೆಗಳೇನು? ವಿವರಿಸಿ. ಅಥವಾ**
**ಸ್ವಾತಂತ್ರ್ಯ ಹೋರಾಟದಲ್ಲಿ ಮಂದಗಾಮಿಗಳ ಸಾಧನೆಗಳನ್ನು ವಿವರಿಸಿ. ಅಥವಾ**

- ರಾಷ್ಟ್ರೀಯ ಕಾಂಗ್ರೇಸಿನ ಪ್ರಾರಂಭದ 20 ವರ್ಷಗಳನ್ನು ಮಂದಗಾಮಿಗಳ ಯುಗವೆಂದು ಕರೆಯಲಾಗಿದೆ.
- ಎಂ.ಜಿ. ರಾನಡೆ , ದಾದಾ ಬಾಯಿ ನವರೋಜಿ , ಸುರೇಂದ್ರನಾಥ ಬ್ಯಾನರ್ಜಿ , ಗೋಪಾಲ ಕೃಷ್ಣ ಗೋಖಲೆ ಪ್ರಮುಖ ಮಂದಗಾಮಿಗಳು .

- ಜನರಿಗೆ ರಾಜಕೀಯ ಶಿಕ್ಷಣ ನೀಡಲು ಪ್ರಯತ್ನಿಸಿದರು .
- ಬ್ರಿಟಿಷ್ ಆಳ್ವಿಕೆ ಮತ್ತು ನ್ಯಾಯಪರತೆಯಲ್ಲಿ ನಂಬಿಕೆ ಇಟ್ಟಿದ್ದರು.
- ಪ್ರಾರ್ಥನೆ, ಮನವಿ ಮೂಲಕ ಬೇಡಿಕೆ ಇಡುತ್ತಿದ್ದರು.
- ಸಭೆಗಳನ್ನು ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದರು.
- ದೇಶದ ಕೈಗಾರಿಕೆಗಳ ಅಭಿವೃದ್ಧಿಗೆ ಒತ್ತಾಯಿಸಿದರು.
- ಸೈನಿಕ ವೆಚ್ಚ ಕಡಿಮೆ ಮಾಡುವುದು.
- ಉತ್ತಮ ಶಿಕ್ಷಣ ನೀಡುವುದು.
- ಬಡತನದ ಬಗ್ಗೆ ಅಧ್ಯಯನ ಮುಂತಾದ ಬೇಡಿಕೆ ಇಟ್ಟರು.
- ಬ್ರಿಟಿಷ್ ಆಳ್ವಿಕೆಯ ದುಷ್ಪರಿಣಾಮಗಳನ್ನು ತಿಳಿಸಿದರು.
- ಸಂಪತ್ತಿನ ಸೋರಿಕೆಯ ಬಗ್ಗೆ ತಿಳಿಸಿದರು.

**2 . " ತೀವ್ರವಾದಿಗಳು ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಮತ್ತಷ್ಟು ತೀವ್ರತೆಯನ್ನು ತಂದುಕೊಟ್ಟರು." ಈ ಹೇಳಿಕೆಯನ್ನು ಸಮರ್ಥಿಸಿ. ಅಥವಾ**
**ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತೀವ್ರವಾದಿಗಳ ಪಾತ್ರವನ್ನು ವಿವರಿಸಿ. ಅಥವಾ**
**" ಬಾಲಗಂಗಾಧರ ತಿಲಕರು ಭಾರತದ ಸ್ವಾತಂತ್ರ್ಯ ಹೋರಾಟದ ಮುನ್ನಡೆಗೆ ವಹಿಸಿದ ಪಾತ್ರ ಬಹಳ ಪ್ರಮುಖವಾದುದು." ಈ ಹೇಳಿಕೆಯನ್ನು ಸಮರ್ಥಿಸಿ. ಅಥವಾ**
**" ತೀವ್ರವಾದಿಗಳ ಹೋರಾಟವು ಮಂದಗಾಮಿಗಳ ಹೋರಾಟಕ್ಕಿಂತ ಭಿನ್ನವಾಗಿತ್ತು." ಈ ಹೇಳಿಕೆಯನ್ನು ಸಮರ್ಥಿಸಿ.**

- ಮಂದಗಾಮಿಗಳ ಮೃದು ಧೋರಣೆಯನ್ನು ಟೀಕೆ ಮಾಡುತ್ತಾ ತೀವ್ರವಾದ ನಿಲುವುಗಳನ್ನು ಪ್ರತಿಪಾದಿಸುತ್ತಾ ಬಂದ ಬಣವನ್ನು ತೀವ್ರವಾದಿಗಳೆಂದು ಗುರುತಿಸಲಾಗಿದೆ.
- ಲಾಲ್ , ಬಾಲ್ , ಪಾಲ್ , ಪ್ರಮುಖ ತೀವ್ರವಾದಿಗಳು.
- 1905ರ ಬಂಗಾಳದ ವಿಭಜನೆಯನ್ನು ವಿರೋಧಿಸಿದರು.
- ಸ್ವದೇಶಿ ಚಳವಳಿಯನ್ನು ದೇಶದಾದ್ಯಂತ ಪ್ರಾರಂಭಿಸಿದರು.
- ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿದರು.
- ತಿಲಕರು "ಸ್ವರಾಜ್ಯ ನನ್ನ ಜನ್ಮ ಸಿದ್ಧ ಹಕ್ಕು: ಅದನ್ನು ಪಡದೇ ತೀರುವೆ" ಎಂದು ಘೋಷಿಸಿದರು.
- ಜನಸಾಮಾನ್ಯರನ್ನು ಹೋರಾಟಕ್ಕೆ ಸಂಘಟಿಸಿದರು.
- ಧಾರ್ಮಿಕ ಆಚರಣೆಯ ಮೂಲಕ ಜನರನ್ನು ಸಂಘಟಿಸಿದರು.
- ಪತ್ರಿಕೆಗಳ ಮೂಲಕ ಜನರನ್ನು ಪ್ರೇರೇಪಿಸಿದರು.

- ತಿಲಕರು ಕೇಸರಿ ಮತ್ತು ಮರಾಠ ಪತ್ರಿಕೆಗಳನ್ನು ಆರಂಭಿಸಿದರು.

**3. " ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳ ಹೋರಾಟವು ಭಿನ್ನವಾಗಿತ್ತು." ಸಮರ್ಥಿಸಿ. ಅಥವಾ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಪ್ರಮುಖ ಕ್ರಾಂತಿಕಾರಿಗಳು ಯಾರು, ಅವರ ಸಾಧನೆಗಳನ್ನು ವಿವರಿಸಿ. ಅಥವಾ**
**ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಾಂತಿಕಾರಿಗಳ ಪಾತ್ರವೇನು ? ವಿವರಿಸಿ.**

- ಕ್ರಾಂತಿಕಾರಿಗಳು ಪೂರ್ಣ ಸ್ವಾತಂತ್ರ್ಯದ ಕನಸ್ಸನ್ನು ಕಂಡಿದ್ದರು.
- ವಿ.ಡಿ. ಸಾವರ್ಕರ್ , ಭಗತ್ ಸಿಂಗ್ , ಚಂದ್ರಶೇಖರ್ ಅಜಾದ್ ಪ್ರಮುಖ ಕ್ರಾಂತಿಕಾರಿಗಳು.
- ಬ್ರಿಟಿಷರನ್ನು ಹಿಂಸಾತ್ಮಕ ಮಾರ್ಗದಿಂದ ಓಡಿಸಬಹುದೆಂದು ನಂಬಿದ್ದರು.
- ರಹಸ್ಯ ಸಂಘಗಳ ಶಾಖೆಗಳನ್ನು ಸ್ಥಾಪಿಸಿದ್ದರು.
- ಅನುಶೀಲನ ಸಮಿತಿ ಮತ್ತು ಅಭಿನವ ಭಾರತ ರಹಸ್ಯ ಸಂಘಟನೆಗಳು.
- ಹಣಕಾಸು ಮತ್ತು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದ್ದರು.
- ಕ್ರಾಂತಿಕಾರಿಗಳಿಗೆ ತರಭೇತಿ ನೀಡಿದರು.
- ಗುರಿಸಾಧನೆಗೆ ಬಾಂಬು ಮತ್ತು ಬಂದೂಕುಗಳ ಪ್ರಯೋಗ ಮಾಡಿದರು.
- ಇವರನ್ನು ಬಂಧಿಸಿ ಜೀವಾವದಿ ಶಿಕ್ಷೆ ವಿಧಿಸಲಾಯಿತು.
- ಅನೇಕರನ್ನು ಗಲ್ಲಿಗೇರಿಸಲಾಯಿತು.

**4. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಗಾಯಿಡಿನ್‌ಲೂ ರವರ ಪಾತ್ರವೇನು? ವಿವರಿಸಿ. ಅಥವಾ**
**"ಭಾರತದ ಈಶಾನ್ಯ ಭಾಗದ ಮಹಿಳೆಯರನ್ನು ಸಂಘಟಿಸಿ ಬ್ರಿಟಿಷರ ವಿರುದ್ಧ ಹೋರಾಡಿದ ಗಾಯಿಡನ್ ಲೂ ಸ್ವಾತಂತ್ರ್ಯ ಹೋರಾಟದ ಪ್ರಮುಖ ಬಿಂದುವಾಗಿದ್ದಾರೆ.". ಸಮರ್ಥಿಸಿ. ಅಥವಾ**
**"ಸ್ವಾತಂತ್ರ್ಯ ಹೋರಾಟದಲ್ಲಿ ಗಾಯಿಡಿನ್‌ಲೂರವರು ಬಳಸಿದ ರಣತಂತ್ರಕ್ಕೆ ಆಂಗ್ಲರು ತತ್ತರಿಸಿ ಹೋದರು." ಸಮರ್ಥಿಸಿ.**

- ಗಾಯಿಡನ್ ಲೂ ಎಂಬ ಯುವತಿ ಈಶಾನ್ಯ ಭಾರತದ ಮಹಿಳೆಯರನ್ನು ಸಂಘಟಿಸಿ ಹೊಸ ಪಡೆ ಕಟ್ಟಿದಳು
- ಜಾದೊನಾಂಗ್ ಜೊತೆಯಲ್ಲಿ ಸೇರಿ ಬ್ರಿಟಿಷರ ವಿರುದ್ಧ ಹೋರಾಡಿದಳು.
- ಧಾರ್ಮಿಕ ಜಾಗೃತಿಗಾಗಿ " ಹರಕ್ಕಾ" ಸಂಸ್ಥೆ ಕಟ್ಟಿದಳು.
- ಶಿವಾಜಿ ರೀತಿಯಲ್ಲಿ ರಣತಂತ್ರ ರೂಪಿಸಿ, ಗೆರಿಲ್ಲಾ ಬಗೆಯಲ್ಲಿ ಹೋರಾಡಿದಳು.
- ಆಕೆಯ ಹೋರಾಟದಿಂದ ಬ್ರಿಟಿಷರು ತತ್ತರಿಸಿ ಹೋದರು.
- ಆಕೆಯ ಹೋರಾಟಕ್ಕೆ ಹಳ್ಳಿ ಹಳ್ಳಿಗಳೇ ಸಾಥ್ ನೀಡಿದವು.

- ಸಾವಿರಾರು ಸ್ತ್ರೀ ಪುರುಷರು ಆಕೆಯ ಸೈನ್ಯವನ್ನು ಸೇರಿದರು.
- ಕೆಲವರು ಆಂಗ್ಲ ಸೈನ್ಯದ ಕುರಿತು ಆಕೆಗೆ ಮಾಹಿತಿ ನೀಡಿದರು.
- ಬ್ರಿಟಿಷರು ಹರಾಲೂ ಎಂಬಾತನ ಸಹಕಾರದಿಂದ ಆಕೆಯನ್ನು ಬಂಧಿಸಿದರು.
- ಆಕೆ ಸ್ವಾತಂತ್ರ್ಯ ಸಿಗುವವರೆಗೂ ಜೈಲಲ್ಲಿ ಇರಬೇಕಾಯಿತು.

**5 . "ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದಲ್ಲಿ ರೈತರು ಮತ್ತು ಕಾರ್ಮಿಕರು ಸಂಘಟಿಸಿದ ಪ್ರತಿಭಟನೆಗಳು ಪ್ರಮುಖವಾಗಿದ್ದವು." ಸಮರ್ಥಿಸಿ. ಅಥವಾ**
**ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರೈತರ ಮತ್ತು ಕಾರ್ಮಿಕರ ಬಂಡಾಯಗಳನ್ನು ವಿವರಿಸಿ. ಅಥವಾ**
**"ಸ್ವಾತಂತ್ರ್ಯ ಚಳುವಳಿಯಲ್ಲಿ ರೈತರ ಮತ್ತು ಕಾರ್ಮಿಕರ ಪಾತ್ರವು ಅನನ್ಯವಾದುದು" ಸಮರ್ಥಿಸಿ.**

***ರೈತ ಹೋರಾಟಗಳು:***

- ಚಂಪಾರಣ್ಯ ಜಿಲ್ಲೆಯಲ್ಲಿ ನೀಲಿ ಬೆಳೆಯುವುದನ್ನು ವಿರೋಧಿಸಿದರು.
- ಭೂ ಕಂದಾಯದ ವಿರುದ್ಧ ಹರತಾಳ ನಡೆಸಿದರು.
- ತೆಲಂಗಾಣದಲ್ಲಿ ರೈತರು ಜಮೀನ್ದಾರರು ಹಾಗು ರಜಾಕಾರರ ವಿರುದ್ಧ ಪ್ರತಿಭಟಿಸಿದರು.
- ಬಂಗಾಳದಲ್ಲಿ ಜಮೀನ್ದಾರರ ವಿರುದ್ಧ ದಂಗೆ ಎದ್ದರು.
- ಮಹಾರಾಷ್ಟ್ರದಲ್ಲಿ ಕಡಿಮೆ ಕೂಲಿ ವಿರುದ್ಧ ಚಳವಳಿ ನಡೆಸಿದರು.

*ಕಾರ್ಮಿಕ ಬಂಡಾಯ:*

- ಸೆಣಬು, ಬಟ್ಟೆ ಗಿರಣಿ ಕಾರ್ಮಿಕರು, ರೈಲ್ವೆ ಕೂಲಿಗಳು ತಮ್ಮ ಬೇಡಿಕೆಗಳಿಗಾಗಿ ಸಂಘಟಿತರಾದರು.
- ರೈಲ್ವೆ ಕೂಲಿಗಳು ಹೆಚ್ಚಿನ ಕೂಲಿಗಾಗಿ ಘೋಷಣೆಗಳನ್ನು ಕೂಗಿದರು.
- ಮದ್ರಾಸ್ ನಲ್ಲಿ ಲೇಬರ್ ಯುನಿಯನ್ ಸ್ಥಾಪನೆಗೊಂಡಿತು.
- ಕಾಂಗ್ರೇಸ್, ಕಾರ್ಮಿಕ ಸಂಘಟನೆಗಳಿಗೆ ಬೆಂಬಲ ನೀಡಿತು.
- ಸ್ವಾತಂತ್ರ್ಯ ಚಳುವಳಿಯಲ್ಲಿ ಕಾರ್ಮಿಕರ ಪಾತ್ರವು ಅನನ್ಯವಾದುದು.

**6. ಅಸಹಕಾರ ಚಳವಳಿಯನ್ನು ವಿವರಿಸಿ. ಅಥವಾ**
**ಅಸಹಕಾರ ಚಳವಳಿಯ ಸಂದರ್ಭದಲ್ಲಿ ನಡೆದ ಘಟನೆಗಳನ್ನು ವಿವರಿಸಿ. ಅಥವಾ**
**" ಅಸಹಕಾರ ಚಳವಳಿಯ ಬೆಳವಣಿಗೆಯು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಪ್ರಮುಖ ಘಟನೆಯಾಗಿದೆ." ಸಮರ್ಥಿಸಿ.**

- 1920ರಲ್ಲಿ ಗಾಂಧೀಜಿಯು ಅಸಹಕಾರ ಚಳುವಳಿಗೆ ಕರೆಯಿತ್ತರು.
- ವಿದ್ಯಾರ್ಥಿಗಳು ಶಾಲಾ ಕಾಲೇಜುಗಳನ್ನು ಬಹಿಷ್ಕರಿಸಿದರು.

- ಬ್ರಿಟಿಷರು ನೀಡಿದ್ದ ಪುರಸ್ಕಾರಗಳನ್ನು ಭಾರತೀಯ ನಾಯಕರು ಹಿಂತಿರುಗಿಸಿದರು.
- ವಕೀಲರು ನ್ಯಾಯಾಲಯಗಳನ್ನು ಬಹಿಷ್ಕರಿಸಿದರು.
- ಮೋತಿಲಾಲ್ ನೆಹರು, ಸಿ,ಆರ್. ದಾಸ್ ತಮ್ಮ ವಕೀಲಿ ವೃತ್ತಿಯನ್ನು ತ್ಯಜಿಸಿದರು.
- ಬ್ರಿಟನ್ ರಾಜಕುಮಾರನ ಭಾರತದ ಭೇಟಿಯನ್ನು ವಿರೋಧಿಸಲಾಯಿತು.
- ರಾಜಕುಮಾರನ ಭೇಟಿ ವಿರುದ್ಧ ಚಳವಳಿಗಳು ನಡೆದವು.
- ಚೌರಿ ಚೌರ ಹಿಂಸಾತ್ಮಕ ಘಟನೆಗಳಿಂದ ಗಾಂಧೀಜಿ ಈ ಚಳವಳಿಯನ್ನು ಹಿಂಪಡೆದರು.

**7. ಸವಿನಯ ಕಾನೂನು ಭಂಗ ಚಳವಳಿಯನ್ನು ವಿವರಿಸಿ ಅಥವಾ**
**ಗಾಂಧೀಜಿಯವರ ದಂಡಿ ಸತ್ಯಾಗ್ರವನ್ನು ವಿವರಿಸಿ. ಅಥವಾ**
**" ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹ ಘಟನೆಯನ್ನು ನಿರ್ಲಕ್ಷಿಸುವಂತಿಲ್ಲ". ಈ ಹೇಳಿಕೆಯನ್ನು ಸಮರ್ಥಿಸಿ.**

- ಗಾಂಧೀಜಿ ಈ ಚಳವಳಿಯ ನೇತೃತ್ವ ವಹಿಸಿದ್ದರು.
- ಗಾಂಧೀಜಿಯವರು ವೈಸರಾಯ್ ಇರ್ವಿನ್ ಮುಂದೆ ಉಪ್ಪಿನ ತೆರಿಗೆ ರದ್ದತಿ ಸೇರಿದಂತೆ 11 ಬೇಡಿಕೆಗಳನ್ನು ಸಲ್ಲಿಸಿದ್ದರು.
- ಆದರೆ ಇರ್ವಿನ್ ಈ ಬೇಡಿಕೆಗಳನ್ನು ಪರಿಗಣಿಸಲ್ಲಿಲ್ಲ.
- ಗಾಂಧೀಜಿ ಸಬರಮತಿ ಆಶ್ರಮದಿಂದ ದಂಡಿಯವರಗೆ ತಮ್ಮ ಅನುಯಾಯಿಗಳೊಂದಿಗೆ ಕಾಲ್ನಡಿಗೆಯಲ್ಲಿ ಹೊರಟರು.
- ದಂಡಿ ಕಡಲ ತೀರದಲ್ಲಿ ಉಪ್ಪು ತಯಾರಿಸಿ ಈ ಚಳವಳಿಯನ್ನು ಪ್ರಾರಂಭಿಸಿದರು.
- ಈ ಘಟನೆಯನ್ನು ದಂಡಿ ಸತ್ಯಾಗ್ರಹ ಎನ್ನಲಾಗಿದೆ.
- ಚಳವಳಿಯಲ್ಲಿ ಭಾಗವಹಿಸಿದ್ದ ಸಾವಿರಾರು ಜನರನ್ನು ಬಂಧಿಸಿದರು.
- ಈ ಚಳವಳಿ ದೇಶದ ನಾನಾ ಭಾಗಗಳಲ್ಲಿ ವ್ಯಾಪಿಸಿತು.
- ಗಾಂಧಿ ಇರ್ವಿನ್ ಒಪ್ಪಂದದ ಪ್ರಕಾರ ಚಳವಳಿಯನ್ನು ನಿಲ್ಲಿಸಲಾಯಿತು.

**8. "ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕ್ವಿಟ್ ಇಂಡಿಯಾ ಚಳವಳಿಯು ಮಹತ್ವ ಪೂರ್ಣವೆನಿಸಿದೆ." ಸಮರ್ಥಿಸಿ. ಅಥವಾ**
**ಗಾಂಧೀಜಿಯವರ ' ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ' ಚಳವಳಿಯನ್ನು ವಿವರಿಸಿ. ಅಥವಾ**
**" ಗಾಂಧೀಜಿಯವರ ಕ್ವಿಟ್ ಇಂಡಿಯಾ ಚಳವಳಿಯು ಹೊಸ ನಾಯಕರುಗಳ ಉದಯಕ್ಕೆ ಎಡೆಮಾಡಿಕೊಟ್ಟಿತು." ಈ ಹೇಳಿಕೆಯನ್ನು ಸಮರ್ಥಿಸಿ.**

- ಕ್ರಿಪ್ಸ್ ಅಯೋಗವು ಕೆಲ ಸಲಹೆಗಳನ್ನು ಭಾರತೀಯರ ಮುಂದಿಟ್ಟಿತು.

- ಕಾಂಗ್ರೆಸ್ ಈ ಸಲಹೆಗಳನ್ನು ಒಪ್ಪದೆ ಕ್ವಿಟ್ ಇಂಡಿಯಾ ಚಳವಳಿಗೆ ಕರೆ ನೀಡಿತು.
- ಬ್ರಿಟಿಷರೇ ಭಾರತ ಬಿಟ್ಟು ತೊಲಗಿ ಇದರ ಆಶಯವಾಗಿತ್ತು.
- ಗಾಂಧೀಜಿ 'ಮಾಡು ಇಲ್ಲವೇ ಮಡಿ' ಕರೆ ನೀಡಿದರು.
- ಗಾಂಧೀಜಿ, ನೆಹರು ಮುಂತಾದವರನ್ನು ಬಂಧಿಸಲಾಯಿತು.
- ಕಾಂಗ್ರೇಸ್ಸೇತರ ಸಂಘಟನೆಗಳು ಮುಖ್ಯ ಭೂಮಿಕೆಯಲ್ಲಿದ್ದವು.
- ಹೊಸ ನಾಯಕರ ಉದಯಕ್ಕೆ ಎಡೆಮಾಡಿಕೊಟ್ಟಿತು.
- ಜಯಪ್ರಕಾಶ್ ನಾರಾಯಣರವರು ಈ ಚಳವಳಿಯ ನೇತೃತ್ವ ವಹಿಸಿಕೊಂಡರು.
- ಜನತೆ ಹೋರಾಟದಲ್ಲಿ ಭಾಗವಹಿಸಲು ಕರೆಯನ್ನಿತ್ತರು.

**9 . " ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯಲ್ಲಿ ಜಾರಿಗೆ ತಂದ ಕಂದಾಯ ಮತ್ತು ಅರಣ್ಯ ನೀತಿಗಳು ಬುಡಕಟ್ಟು ದಂಗೆಗೆ ನೇರವಾಗಿ ಪ್ರೇರಣೆಯಾದವು." ಸಮರ್ಥಿಸಿ. ಅಥವಾ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ವಿವಿಧ ಬುಡಕಟ್ಟುಗಳ ಬಂಡಾಯಗಳನ್ನು ವಿವರಿಸಿ. ಅಥವಾ ಸಂತಾಲ ಬುಡಕಟ್ಟು ದಂಗೆಯನ್ನು ಭಾರತದ ಆದ್ಯ ಹೋರಾಟ ಎಂದು ಗುರುತಿಸಲಾಗಿದೆ . ಸಮರ್ಥಿಸಿ.**

- ಬ್ರಿಟಿಷ್‌ರ ಕಂದಾಯ ಮತ್ತು ಅರಣ್ಯ ನೀತಿಗಳು ಬುಡಕಟ್ಟು ದಂಗೆಗೆ ನೇರವಾಗಿ ಪ್ರೇರಣೆಯಾದವು.
- ಸಂತಾಲರು, ಕೋಲರು, ಮುಂಡರ ಚಳವಳಿಗಳು ಪ್ರಮುಖವಾಗಿವೆ.
- ಕರ್ನಾಟಕದಲ್ಲಿ ಹಲಗಲಿಯ ಬೇಡರ ಬಂಡಾಯ ಪ್ರಮುಖವಾದುದು.
- ಜಮೀನ್ದಾರಿ ಪದ್ಧತಿಯಿಂದ ಬುಡಕಟ್ಟು ಜನರು ನಿರ್ಗತಿಕರಾದರು.
- ಸಂತಾಲರು ರಹಸ್ಯ ಸಭೆಗಳನ್ನು ನಡೆಸಿದರು.
- ಜಮೀನ್ದಾರರನ್ನು ಲೂಟಿಮಾಡಲು ನಿರ್ಧರಿಸಿದರು.
- ದಂಗೆಯು ಬರಾಹತ್, ಬಗತ್‌ಪುರ್ ಮತ್ತು ರಾಜಮಹಲ್‌ಗಳಲ್ಲಿ ತೀವ್ರವಾಯಿತು.
- ಜಮೀನ್ದಾರರು,ಲೇವಾದೇವಿಗಾರರು ಪಲಾಯನ ಮಾಡಿದರು.
- ಸಂತಾಲರ ದಂಗೆ ಹತ್ತಿಕ್ಕಲು ಸೈನ್ಯವನ್ನು ಬಳಸಲಾಯಿತು.
- ಕೋಲರು, ಮುಂಡರು ಬ್ರಿಟಿಷರ ವಿರುದ್ಧ ಹೋರಾಡಿದರು.

**10. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್ ರವರ ಪಾತ್ರ / ಸಾಧನೆಗಳನ್ನು ವಿವರಿಸಿ. " ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್‌ರವರ ಪಾತ್ರವು ಒಂದು ದಿಟ್ಟ ಮೈಲಿಗಲ್ಲು" ಈ ಹೇಳಿಕೆಯನ್ನು ಸಮರ್ಥಿಸಿ.**

- ಸುಭಾಷರು ನೇತಾಜಿ ಎಂದು ಜನಪ್ರಿಯರಾಗಿದ್ದರು.

- ಬ್ರಿಟಿಷ್ ಸರ್ಕಾರದ ಪ್ರತಿಷ್ಠಿತ ಹುದ್ದೆಯನ್ನು ತ್ಯಜಿಸಿ ಸ್ವಾತಂತ್ರ್ಯ ಚಳವಳಿಗೆ ಧುಮುಕಿದರು.
- ಹರಿಹರಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾಗಿದ್ದರು.
- ' ಫಾರ್ವರ್ಡ್ ಬ್ಲಾಕ್ ' ಎಂಬ ಪಕ್ಷವನ್ನು ಕಟ್ಟಿದರು.
- ಬ್ರಿಟಿಷ್ ಸರ್ಕಾರ ಇವರನ್ನು ಬಂಧಿಸಿತು.
- ಗೃಹಬಂಧನದಿಂದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿದರು.
- ಹಿಟ್ಲರ್ ಇವರಿಗೆ ಸಹಾಯದ ಭರವಸೆ ನೀಡಿದನು.
- ಐ.ಎನ್.ಎ.ಯ ಮುಖಂಡತ್ವವನ್ನು ವಹಿಸಿದರು.
- ದೆಹಲಿ ಚಲೋ ಎಂದು ಕರೆ ನೀಡಿದರು.
- ' ನನಗೆ ರಕ್ತ ಕೊಡಿ , ನಾನು ನಿಮಗೆ ಸ್ವಾತಂತ್ರ್ಯ ನೀಡಲು ಪ್ರಮಾಣಿಸುತ್ತೇನೆ, ' ಎಂದು ಕರೆಯಿತ್ತರು.
- ಆಕಸ್ಮಿಕವಾಗಿ ವಿಮಾನ ಅಪಘಾತದಲ್ಲಿ ಮಡಿದರು.

**11. ಅಸ್ಪೃಶ್ಯತೆ ನಿವಾರಣೆಗೆ ಶ್ರಮಿಸುವಲ್ಲಿ ಅಂಬೇಡ್ಕರರ ಪಾತ್ರ ಮಹತ್ವವೆನಿಸಿದೆ. ಈ ಹೇಳಿಕೆಯನ್ನು ಸಮರ್ಥಿಸಿ.**
**ಡಾ. ಬಿ. ಆರ್. ಅಂಬೇಡ್ಕರರ ಅಸ್ಪೃಶ್ಯತಾ ನಿವಾರಣಾ ಕ್ರಮಗಳನ್ನು ವಿವರಿಸಿ. ಅಥವಾ**
**ಡಾ. ಬಿ.ಆರ್ ಅಂಬೇಡ್ಕರವರ ಕೊಡುಗೆಗಳನ್ನು ವಿವರಿಸಿ. ಅಥವಾ**
**ಡಾ. ಬಿ.ಆರ್. ಅಂಬೇಡ್ಕರವರ ಸಾಮಾಜಿಕ ಸಮಾನತೆಯ ಕಾಳಜಿಯನ್ನು ಉದಾಹರಣೆಗಳೊಂದಿಗೆ ಸ್ಪಷ್ಟೀಕರಿಸಿ.**

- ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದರು.
- ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟ ರೂಪಿಸಿದರು.
- ಮಹಾಡ್ ಮತ್ತು ಕಾಲಾರಾಂ ಚಳವಳಿಗಳನ್ನು ರೂಪಿಸಿದರು.
- ಮೂರೂ ದುಂಡು ಮೇಜಿನ ಸಮ್ಮೇಳನಗಳಲ್ಲಿ ಭಾಗವಹಿಸಿದ್ದರು.
- ಅಸ್ಪೃಶ್ಯರ ರಕ್ಷಣೆಗಾಗಿ ಪ್ರತ್ಯೇಕ ಮತ ಕ್ಷೇತ್ರಗಳನ್ನು ಬಯಸಿದ್ದರು.
- ಬಹಿಷ್ಕೃತ ಹಿತಕಾರಣಿ ಸಭಾ ಸ್ಥಾಪಿಸಿದರು.
- ಸ್ವತಂತ್ರ ಕಾರ್ಮಿಕ ಪಕ್ಷವನ್ನು ಸ್ಥಾಪಿಸಿದರು.
- ಪ್ರಬುದ್ಧ ಭಾರತ, ಜನತಾ, ಮೂಕನಾಯಕ, ಬಹಿಷ್ಕೃತ ಭಾರತ ಪತ್ರಿಕೆಗಳನ್ನು ಹೊರಡಿಸಿದರು.
- ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿದ್ದರು.
- ಅಸ್ಪೃಶ್ಯತೆ ವಿರುದ್ಧ ಕಾನೂನಿನ ರಕ್ಷಣೆ ಒದಗಿಸಿದರು.
- ಭಾರತದ ಮೊದಲ ಕಾನೂನು ಮಂತ್ರಿಯಾದರು.
- ಅವರಿಗೆ ಭಾರತ ರತ್ನವನ್ನು ನೀಡಿ ಗೌರವಿಸಲಾಗಿದೆ.

**12 . ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಜವಾಹರಲಾಲ ನೆಹರೂರವರ ಕೊಡುಗೆಗಳನ್ನು ವಿವರಿಸಿ.**

**ಭಾರತದ ಮೊದಲ ಪ್ರಧಾನ ಮಂತ್ರಿಯಾಗಿ ನೆಹರೂರವರ ಪ್ರಮುಖ ಕೊಡುಗೆಗಳನ್ನು ವಿವರಿಸಿ.**

**" ಸ್ವತಂತ್ರ ಭಾರತದ ಅಭಿವೃದ್ಧಿಗೆ ಜವಾಹರಲಾಲ್ ನೆಹರೂರವರು ನೀಡಿರುವ ಕೊಡುಗೆಗಳು ಪ್ರಮುಖವೆನಿಸಿವೆ." ಸಮರ್ಥಿಸಿ.**

**ಕೈಗಾರಿಕೀಕರಣ ಮತ್ತು ನವಭಾರತದ ಶಿಲ್ಪಿಯಾಗಿ ಭಾರತದ ಮೊದಲ ಪ್ರಧಾನ ಮಂತ್ರಿಯಾಗಿದ್ದ ನೆಹರೂರವರ ಕೊಡುಗೆಗಳನ್ನು ವಿವರಿಸಿ.**

**ನೆಹರೂರವರು ಸ್ವತಂತ್ರ ಭಾರತದ ಅಭಿವೃದ್ಧಿ ಯೋಜನೆಗಳ ರೂವಾರಿ ಎಂದೇ ಪ್ರಸಿದ್ಧರು . ಈ ಹೇಳಿಕೆಯನ್ನು ಸಮರ್ಥಿಸಿ.**

- ಭಾರತದ ಪ್ರಥಮ ಪ್ರಧಾನ ಮಂತಿಯಾಗಿ ಸೇವೆ ಸಲ್ಲಿಸಿದರು.
- ಕೈಗಾರಿಕೀಕರಣ ಮತ್ತು ನವಭಾರತದ ಶಿಲ್ಪಿ ಎನಿಸಿದ್ದಾರೆ.
- ಸರದಾರ್ ಪಟೇಲರ ನೆರವಿನಿಂದ ದೇಶೀಯ ಸಂಸ್ಥಾನಗಳ ವಿಲೀನಿಕರಣವನ್ನು ಪೂರ್ಣ ಗೊಳಿಸಿದರು.
- ಭಾಷಾವಾರು ಪ್ರಾಂತ್ಯಗಳ ರಚನೆ ಮಾಡಿದರು.
- ಕೈಗಾರಿಕೀಕರಣದಿಂದ ದೇಶದ ಅಭಿವೃದ್ಧಿ ಸಾಧ್ಯ ಎಂದು ನಂಬಿದ್ದರು.
- ಭಾರತದಲ್ಲಿ ಕೈಗಾರಿಕೀಕರಣವನ್ನು ಸಾಧಿಸಿದ್ದರು.
- ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತಂದರು.
- ಮಿಶ್ರ ಆರ್ಥಿಕ ನೀತಿಯನ್ನು ಜಾರಿಗೆ ತಂದರು.
- ಅಲಿಪ್ತ ನೀತಿಯನ್ನು ಪ್ರತಿಪಾದಿಸಿದರು.
- ಪಂಚಶೀಲ ತತ್ವಗಳ ಮೇಲೆ ವಿದೇಶಾಂಗ ನೀತಿ ರೂಪಿಸಿದರು.

**13. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಾತ್ಮ ಗಾಂಧೀಜಿಯವರ ಪಾತ್ರ ನಿರ್ವಹಣೆಯನ್ನು ವಿವರಿಸಿ.**

**" ಮಹಾತ್ಮ ಗಾಂಧೀಜಿಯವರ ಪ್ರವೇಶದಿಂದಾಗಿ ಸ್ವಾತಂತ್ರ ಚಳವಳಿಯು ಹೊಸ ಆಯಾಮವನ್ನು ಪಡೆಯಿತು." ಈ ಹೇಳಿಕೆಯನ್ನು ಸಮರ್ಥಿಸಿ.**

**" 1920 –1947ರ ವರಗಿನ ಕಾಲಘಟ್ಟವನ್ನು ಗಾಂಧೀಯುಗವೆಂದೇ ಕರೆಯಲಾಗಿದೆ." ಸ್ಪಷ್ಟೀಕರಿಸಿ.**

- ರೌಲತ್‌ಕಾಯಿದೆ ವಿರೋಧಿಸಿದರು.
- ಚಂಪಾರಣ್ಯ ಮತ್ತು ಖೇಡ ಚಳವಳಿಗೆ ಬೆಂಬಲ ಸೂಚಿಸಿದರು.
- ಸ್ವದೇಶಿ ಚಳವಳಿಗೆ ಕರೆ ನೀಡಿದರು.
- ಖಿಲಾಫತ್ ಚಳವಳಿಗೆ ಬೆಂಬಲ ನೀಡಿದರು.
- ಅಸಹಕಾರ ಚಳವಳಿಗೆ ಕರೆಯಿತ್ತರು.
- ಸವಿನಯ ಕಾನೂನು ಭಂಗ ಚಳವಳಿ ಆರಂಭಿಸದರು.

- ಎರಡನೇ ದುಂಡು ಮೇಜಿನ ಸಭೆಯಲ್ಲಿ ಭಾಗವಹಿಸಿದ್ದರು.
- ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಜನರಿಗೆ 'ಮಾಡು ಇಲ್ಲವೇ ಮಡಿ' ಎಂದು ಕರೆ ನೀಡಿದರು.
- ಸತ್ಯ, ಅಹಿಂಸೆ ಮತ್ತು ಸತ್ಯಾಗ್ರಹ ಇವುಗಳಲ್ಲಿ ನಂಬಿಕೆ ಇಟ್ಟಿದ್ದರು.

**14. " ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ,ಜಲಿಯನ್ ವಾಲಾಬಾಗ್ ದುರಂತವು ಒಂದು ಅಮಾನುಷ ಘಟನೆಯಾಗಿದೆ." ಎಂದು ಹೇಗೆ ಸಮರ್ಥಿಸುವಿರಿ.**

**" ಸ್ವಾತಂತ್ರ್ಯ ಚಳವಳಿಯಲ್ಲಿ ,ಜಲಿಯನ್ ವಾಲಾಬಾಗ್ ಹತ್ಯಾಕಾಂಡವು ಬ್ರಿಟಿಷರು ಭಾರತೀಯರ ಮೇಲೆ ನಡೆಸಿದ ದೌರ್ಜನ್ಯ ಎಂದು ಹೇಳಲಾಗಿದೆ." ಈ ಹೇಳಿಕೆಯನ್ನು ಸಮರ್ಥಿಸಿ.**

**ಜಲಿಯನ್ ವಾಲಾಬಾಗ್ ಹತ್ಯಾಕಾಂಡವನ್ನು ವಿವರಿಸಿ.**

- ರೌಲತ್ ಕಾಯಿದೆ ವಿರುದ್ಧ ಪಂಜಾಬಿನಲ್ಲಿ ಚಳವಳಿಯು ವ್ಯಾಪಕವಾಗಿ ಹರಡಿತು.
- ಈ ಕಾಯ್ದೆಯ ವಿರುದ್ಧದ ಪ್ರತಿಭಟನೆಯಲ್ಲಿ ಸುಮಾರು 20 ಸಾವಿರ ಜನ ಸಭೆ ಸೇರಿದ್ದರು.
- ಸುತ್ತಲೂ ಎತ್ತರವಾದ ಗೋಡೆಗಳಿಂದ, ಕಿರಿದಾದ ಪ್ರವೇಶದಿಂದ ಕೂಡಿದ ಜಲಿಯನ್ ವಾಲಾಬಾಗ್ ನಲ್ಲಿ ಶಾಂತಿಯುತ ಸಭೆ ಸೇರಿತ್ತು.
- ಜನರಲ್ ಡಯಾರನು ಯಾವುದೇ ಮುನ್ಸೂಚನೆ ನೀಡದೆ ಸಭೆ ನಡೆಸುತ್ತಿದ್ದ ಜನರ ಮೇಲೆ ಅಮಾನುಷವಾಗಿ ಗುಂಡಿನ ಮಳೆಗರೆದನು.
- ಈ ಹತ್ಯಾಕಾಂಡದಲ್ಲಿ 379 ಪ್ರತಿಭಟನಾಕಾರರು ಪ್ರಾಣ ಕಳೆದುಕೊಂಡರು.
- ಸಹಸ್ರಾರು ಜನರು ಗಾಯಗೊಂಡರು.
- ಈ ಘಟನೆಯನ್ನು ಇತಿಹಾಸದಲ್ಲಿ ಜಲಿಯನ್ ವಾಲಾಬಾಗ್ ದುರಂತವೆಂದೇ ಕರೆಯಲಾಗಿದೆ.
- ಸರ್ಕಾರವು ಈ ಘಟನೆಯ ವಿಚಾರಣೆಗಾಗಿ ಹಂಟರ್ ಆಯೋಗವನ್ನು ನೇಮಿಸಿತು.
- ಈ ಆಯೋಗದಿಂದ ಭಾರತೀಯರಿಗೆ ಯಾವುದೇ ಪ್ರಯೋಜನವಾಗಲಿಲ್ಲ.
- ಭಾರತೀಯರ ಮೇಲಿನ ದೌರ್ಜನ್ಯ ಮತ್ತೂ ಕೂಡ ಮುಂದುವರಿಯಿತು.

## ಅಧ್ಯಾಯ 8

## ಸ್ವಾತಂತ್ರ್ಯೋತ್ತರ ಭಾರತ

**1. ಭಾರತವು ಸ್ವಾತಂತ್ರ್ಯ ಗಳಿಸಿದ ಸಮಯದಲ್ಲಿ ಎದುರಿಸಿದ ಸಮಸ್ಯೆಗಳಾವುವು? ಅಥವಾ ಭಾರತವು ಸ್ವಾತಂತ್ರ್ಯ ಪಡೆದು ಕೊಂಡಾಗ ಸಮಸ್ಯೆಗಳ ಗೂಡಾಗಿತ್ತು ಸಷ್ಟೀಕರಿಸಿ**

- ಲಕ್ಷಾಂತರ ನಿರಾಶ್ರಿತರ ಸಮಸ್ಯೆ.
- ಕೋಮುಗಲಭೆಗಳು
- ದೇಶಿಯ ಸಂಸ್ಥಾನಗಳ ವಿಲೀನೀಕರಣ.

- ಕೃಷಿ ಬೆಳವಣಿಗೆ .
- ಕೈಗಾರಿಕೆ ಮತ್ತು ಬೆಳವಣಿಗೆ
- ಆಹಾರ ಉತ್ಪಾದನೆ

**2. ಸ್ವಾತಂತ್ರ ಬಂದಾಗ ಭಾರತವು ಎದುರಿಸಿದ ನಿರಾಶ್ರಿತರ ಸಮಸ್ಯೆಯನ್ನು ವಿವರಿಸಿ. ಅಥವಾ ಭಾರತದ ವಿಭಜನೆಯ ಅನೇಕ ಸಮಸ್ಯೆಗಳನ್ನು ಭಾರತಕ್ಕೆ ತಂದೊಡ್ಡಿತು ಹೇಗೆ?**

- ದೇಶ ವಿಭಜನೆಯಿಂದ ಪಾಕಿಸ್ತಾನದಿಂದ ಭಾರತಕ್ಕೆ ಲಕ್ಷಾಂತರ ಜನರ ವಲಸೆ .
- ತಾವು ಬೆಳೆದು ತಾವು ಹುಟ್ಟಿ ಬೆಳೆದ ಪರಿಸರ ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ತಮ್ಮದಲ್ಲದ ಪ್ರದೇಶಗಳಿಗೆ ವಲಸೆ ಹೋಗಬೇಕಾಯಿತು .
- ನಿರಾಶ್ರಿತರಾದ ಜನರಿಗೆ ವಸತಿ ಉದ್ಯೋಗ ಭೂಮಿ ಶಿಕ್ಷಣ ಆರೋಗ್ಯ ಸಾಮಾಜಿಕ ವಾತಾವರಣ ಎಲ್ಲವನ್ನು ನಿರ್ಮಿಸಿ ಕೊಡಬೇಕಾದ ಬೃಹತ್ ಜವಾಬ್ದಾರಿ ಸರ್ಕಾರದ ಮೇಲೆ ಬಿದ್ದಿತ್ತು .

**3. ಪಾಂಡಿಚೆರಿಯನ್ನು ಫ್ರೆಂಚರಿಂದ ವಿಮುಕ್ತಿಗೊಳಿಸಿದ ರೀತಿಯನ್ನು ತಿಳಿಸಿ . ಅಥವಾ ಫ್ರೆಂಚರಿಂದ ಪಾಂಡಿಚೆರಿಯನ್ನು ಹೇಗೆ ಬಿಡುಗಡೆಗೊಳಿಸಲಾಯಿತು? ಅಥವಾ ಸ್ವತಂತ್ರ ನಂತರ ಪಾಂಡಿಚೆರಿಯನ್ನು ಭಾರತಕ್ಕೆ ಹೇಗೆ ಸೇರ್ಪಡೆಮಾಡಿಕೊಳ್ಳಲಾಯಿತು ?**

- ಸ್ವತಂತ್ರ ನಂತರವೂ ಭಾರತದ ಅನೇಕ ಪ್ರದೇಶಗಳು ಫ್ರೆಂಚರ ಹಿಡಿತದಲ್ಲಿದ್ದವು .
- ಪಾಂಡಿಚೆರಿ ಕಾರಕಲ್ ಮಾಹೆ ಚಂದ್ರ ನಾಗೂರ್ಗಳು ಭಾರತಕ್ಕೆ ಸೇರಬೇಕೆಂದು ಕಾಂಗ್ರೆಸ್ ಕಮ್ಯುನಿಸ್ಟ್ ಪಕ್ಷಗಳು ಹೋರಾಡಿದವು.
- ಈ ಸಂಘಟನೆಗಳ ನೇತೃತ್ವದ ಹೋರಾಟದ ಫಲವಾಗಿ 1954 ರಲ್ಲಿ ಪಾಂಡಿಚೆರಿ ಭಾರತಕ್ಕೆ ಸೇರ್ಪಡೆಯಾಯಿತು.

**4. ಗೋವಾವನ್ನು ಪೋರ್ಚುಗೀಸರಿಂದ ಹೇಗೆ ಮುಕ್ತಿಗೊಳಿಸಲಾಯಿತು ಅಥವಾ ಗೋವಾವನ್ನು ಭಾರತದ ಒಕ್ಕೂಟಕ್ಕೆ ಹೇಗೆ ಸೇರ್ಪಡೆಗೊಳಿಸಲಾಯಿತು?**

- ಗೋವಾ ಭಾರತಕ್ಕೆ ಸೇರಬೇಕೆಂದು ಚಳುವಳಿ.
- ಚಳುವಳಿಗಾರರನ್ನು ಹತ್ತಿಕ್ಕಲು ಆಫ್ರಿಕಾ ಪೋರ್ಚುಗೀಸ್ ಸೇನೆ ಆಗಮನ .
- ಜನರಿಂದ ಗೋವಾ ವಿಮೋಚನೆಗಾಗಿ ಹೋರಾಟ .
- 1961 ರಲ್ಲಿ ಭಾರತೀಯ ಸೇನೆಯಿಂದ ಗೋವಾದ ವಶ.

**5. ಭಾಷಾವಾರು ಪ್ರಾಂತ್ಯಗಳನ್ನು ಹೇಗೆ ರಚಿಸಲಾಯಿತು?**

- ಉತ್ತಮ ಆಡಳಿತಕ್ಕಾಗಿ ಭಾಷೆ ಆಧರಿಸಿ ಗಡಿ ಗುರುತಿಸಬೇಕೆಂಬ ಒತ್ತಾಯ.
- ಸ್ವಾತಂತ್ರ್ಯ ನಂತರ ಭಾಷಾವಾರು ರಾಜ್ಯಗಳನ್ನು ರಚಿಸಬೇಕೆಂಬ ಕೂಗು.
- ವಿಶಾಲ ಅಂದ್ರೆ ರಚನೆಗಾಗಿ ಪೊಟ್ಟಿ ಶ್ರೀರಾಮುಲು ಉಪವಾಸ ಮಾಡಿ ಅಸುನೀಗಿದರು .
- 1953ರಲ್ಲಿ ರಾಜ್ಯಗಳ ಪುನರ್ ವಿಂಗಡಣೆಗೆ ಫಜಲ್ ಆಲಿಯವರ ಅಧ್ಯಕ್ಷತೆಯಲ್ಲಿ ಆಯೋಗ ರಚನೆ.
- 1953 ರಲ್ಲಿ ರಾಜ್ಯ ಪುನರ್ ವಿಂಗಡಣಾ ಕಾನೂನು ಜಾರಿ.
- 14 ರಾಜ್ಯಗಳು ಮತ್ತು ಆರು ಕೇಂದ್ರಾಡಳಿತ ಪ್ರದೇಶಗಳ ರಚನೆ .

**6. ದೇಶಿಯ ಸಂಸ್ಥಾನಗಳ ವಿಲೀನೀಕರಣವನ್ನು ಸರ್ದಾರ್ ವಲ್ಲಬಾಯ್ ಪಟೇಲರು ಹೇಗೆ ನಿಭಾಯಿಸಿದರು ? ಅಥವಾ**

**ಸರ್ದಾರ್ ವಲ್ಲಭಾಯಿ ಪಟೇಲರನ್ನು ಭಾರತದ ಉಕ್ಕಿನ ಮನುಷ್ಯ ಎಂದು ಕರೆಯಲು ಕಾರಣಗಳೇನು? ಅಥವಾ**

**ಸರ್ದಾರ್ ವಲ್ಲಬಾಯ್ ಪಟೇಲರನ್ನು ಭಾರತದ ಉಕ್ಕಿನ ಮನುಷ್ಯ ಎಂಬ ಬಿರುದುಗೆ ಪಾತ್ರವಾಗಲು ಕಾರಣಗಳೇನು ?**

- ಸ್ವಾತಂತ್ರ ಬಂದಾಗ 562 ಸಂಸ್ಥಾನಗಳಿದ್ದವು
- ಸಂಸ್ಥಾನಗಳಿಗೆ ಭಾರತ, ಪಾಕಿಸ್ತಾನಕ್ಕೆ ಸೇರುವ ಅಥವಾ ಸ್ವತಂತ್ರವಾಗಿರುವ ಆಯ್ಕೆ.
- ಸಂಸ್ಥಾನಗಳಿಗೆ ಭಾರತ ಒಕ್ಕೂಟಕ್ಕೆ ಸೇರಲು ಆಹ್ವಾನ .
- ವಿಲೀನಗೊಂಡವರಿಗೆ ರಾಜಧನ ಸವಲತ್ತು ಮತ್ತು ಸ್ಥಾನಮಾನ ನೀಡುವ ಭರವಸೆ.
- ಜುನಾಗರ್ ಹೈದರಾಬಾದ್ ಮತ್ತು ಜಮ್ಮು ಕಾಶ್ಮೀರ ಸಂಸ್ಥಾನಗಳಿಂದ ಪ್ರತಿರೋಧ .
- ಸೈನಿಕ ಕಾರ್ಯಾಚರಣೆ ಮೂಲಕ ವಿಲೀನ.
- ಸರ್ದಾರ್ ವಲ್ಲಬಾಯ್ ಪಟೇಲರು ಭಾರತದ ಉಕ್ಕಿನ ಮನುಷ್ಯ ಎಂದು ಖ್ಯಾತರಾದರು .

**7. ಹೈದರಾಬಾದ್ ಸಂಸ್ಥಾನವನ್ನು ಭಾರತದ ಒಕ್ಕೂಟಕ್ಕೆ ಹೇಗೆ ವಿಲೀನಗೊಳಿಸಲಾಯಿತು? ಅಥವಾ ಹೈದರಾಬಾದ್ ಸಂಸ್ಥಾನದ ವಿಲೀನಕರಣ ಸರ್ದಾರ್ ವಲ್ಲಬಾಯ್ ಪಟೇಲ್ ರವರಿಗೆ ಒಂದು ಸವಾಲು ಆಗಿತ್ತು ಹೇಗೆ ? /ಹೈದರಾಬಾದ್ ಸಂಸ್ಥಾನದ ವಿಲೀನೀಕರಣದಲ್ಲಿ ಸರ್ದಾರ್ ವಲ್ಲಭಭಾಯಿ ಪಟೇಲರು ಹೇಗೆ ಯಶಸ್ವಿಯಾದರು?**

- ಹೈದರಾಬಾದ್ ನಿಜಾಮನ ಅಧೀನದಲ್ಲಿತ್ತು.
- ಸ್ವತಂತ್ರವಾಗಿ ಉಳಿಯುವ ಉದ್ದೇಶದಿಂದ ಭಾರತಕ್ಕೆ ಸೇರಲು ನಿರಾಕರಣೆ .
- ಕಮಿನಿಸ್ಟರ್ ನೇತೃತ್ವದಲ್ಲಿ ತೆಲಂಗಾಣ ರೈತರ ಸಶಸ್ತ್ರ ಹೋರಾಟ.
- ನಿಜಾಮನ ರಜಾಕಾರರ ಬಗ್ಗೆ ಜನರಿಂದ ಪ್ರತಿರೋಧ.
- ಸೈನಿಕ ಕಾರ್ಯಾಚರಣೆ ನಡೆಸಿ ಹೈದರಾಬಾದ್ ಸಂಸ್ಥಾನ ವಿಲೀನ.

**8. ಜಮ್ಮು ಮತ್ತು ಕಾಶ್ಮೀರದ ಸಮಸ್ಯೆಯನ್ನು ಸಂಕ್ಷಿಪ್ತವಾಗಿ ವಿವರಿಸಿ. ಅಥವಾ**
**ಕಾಶ್ಮೀರದ ಅರಸ ಹರಿಸಿಂಗ್ ಇಂದಿನ ಕಾಶ್ಮೀರ ಸಮಸ್ಯೆಗೆ ಹೇಗೆ ಕಾರಣನಾದನು? ಅಥವಾ**
**ಸರ್ದಾರ್ ವಲ್ಲಭಬಾಯಿ ಪಟೇಲರು ಕಾಶ್ಮೀರವನ್ನು ಭಾರತದ ಒಕ್ಕೂಟದಲ್ಲಿ ವಿಲೀನೀಕರಣಗೊಳಿಸುವಲ್ಲಿ ಹೇಗೆ ಯಶಸ್ವಿಯಾದರು**

- ರಾಜ ಹರಿಸಿಂಗ್ ಭಾರತದ ಒಕ್ಕೂಟ ಸೇರುವಲ್ಲಿ ವಿಳಂಬ.
- ಪಾಕಿಸ್ತಾನದಿಂದ ದಾಳಿ ರಾಜ ಹರಿಸಿಂಗ್ ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸಲು ಸಹಿ.
- ಭಾರತದಿಂದ ವಿಶ್ವಾಸಂಸ್ಥೆಯಲ್ಲಿ ದಾವೆ.
- ವಿಶ್ವಸಂಸ್ಥೆ ಕದನ ವಿರಾಮಕ್ಕೆ ಆದೇಶ.
- ಕಾಶ್ಮೀರದ ವಾಯುವ್ಯ ಭಾಗ ಪಾಕಿಸ್ತಾನದ ಬಳಿ ಉಳಿಯಿತು.
- ಪಾಕ್ ಆಕ್ರಮಿತ ಕಾಶ್ಮೀರ ಇಂದಿಗೂ ಸಮಸ್ಯೆಯಾಗಿದೆ.

**9. ಕನ್ನಡ ಮಾತನಾಡುವ ಪ್ರದೇಶಗಳ ಏಕೀಕರಣ ಹೇಗೆ ಆಯಿತು? ಅಥವಾ**
**ಕರ್ನಾಟಕದ ಏಕೀಕರಣದಲ್ಲಿ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಪಾತ್ರವೇನು?**

- ಕನ್ನಡ ಮಾತನಾಡುವ ಪ್ರದೇಶಗಳು ಹಲವು ಸಂಸ್ಥಾನಗಳಲ್ಲಿ ಹರಿದು ಹಂಚಿ ಹೋಗಿದ್ದವು.
- ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು ಸ್ಥಾಪನೆ .
- ಕನ್ನಡ ಮಾತನಾಡುವ ಪ್ರದೇಶಗಳನ್ನು ಒಟ್ಟುಗೂಡಿಸುವ ಬೇಡಿಕೆ .
- ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತು ನೇತೃತ್ವದಲ್ಲಿ ಚಳುವಳಿ ಪ್ರಾರಂಭವಾಯಿತು.
- 1956 ನವಂಬರ್ ಒಂದರಂದು ಮೈಸೂರು ರಾಜ್ಯ ಅಸ್ತಿತ್ವಕ್ಕೆ ಬಂದಿತು.
- 1973ರಲ್ಲಿ ಕರ್ನಾಟಕ ಎಂದು ಮರುನಾಮಕರಣ ಮಾಡಲಾಯಿತು.

## .ಅಧ್ಯಾಯ 9
## ಮಹಾಯುದ್ಧಗಳು ಮತ್ತು ಭಾರತದ ಪಾತ್ರ

**1) ಪ್ರಥಮ ಮಹಾಯುದ್ಧದ ಕಾರಣಗಳನ್ನು ಪಟ್ಟಿ ಮಾಡಿರಿ.**

- ಅತಿಯಾದ ಮಿಲಿಟರಿಕರಣ.
- ಅತಿಯಾದ ರಾಷ್ಟ್ರೀಯತೆ.
- ಎರಡು ವಿರೋಧಿ ಬಣಗಳ ರಚನೆ.
- ಸಾಮ್ರಾಜ್ಯವಾದ ನೀತಿಗಳು ಬಲಗೊಂಡವು.
- ಸಂಕೀರ್ಣ ಒಪ್ಪಂದಗಳು.

- ಭೌಗೋಳಿಕ ಗಡಿ ಸಮಸ್ಯೆಗಳು.
- ಮೈತ್ರಿಕೂಟಗಳ ರಚನೆ.
- ಆರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆ.

**2) ಪ್ರಥಮ ಮಹಾಯುದ್ಧದ ಪರಿಣಾಮಗಳನ್ನು ಪಟ್ಟಿ ಮಾಡಿರಿ.**

- ಜರ್ಮನಿಯಿಂದ ವರ್ಸೇಲ್ಸ್ ಒಪ್ಪಂದಕ್ಕೆ ಸಹಿ.
- ಆಸ್ಟ್ರೋ–ಹಂಗೇರಿ, ಅಟೋಮನ್ ಸಾಮ್ರಾಜ್ಯಗಳ ಅಂತ್ಯ.
- ಜರ್ಮನಿ ಅಧಿಕ ಪ್ರದೇಶ ಕಳೆದುಕೊಂಡಿತು.
- ಯುರೋಪಿನ ಭೂಪಟ ಬದಲಾವಣೆ.
- ರಾಷ್ಟ್ರಸಂಘ ರಚನೆ.
- ಸಣ್ಣ ಸ್ವತಂತ್ರ ರಾಷ್ಟ್ರಗಳ ಉದಯ.
- ಉಗ್ರ ರಾಷ್ಟ್ರೀಯತೆ, ಅವಮಾನಕರ ಭಾವನೆ ಬೆಳವಣಿಗೆ.
- ಆರ್ಥಿಕ ಕುಸಿತ ಉಂಟಾಯಿತು.
- ಸರ್ವಾಧಿಕಾರಿಗಳ ಬೆಳವಣಿಗೆ.

**3) ಸರ್ವಾಧಿಕಾರಿಯಾಗಿ ಹಿಟ್ಲರ್ ಕೈಗೊಂಡ ಹೀನ ಕೃತ್ಯಗಳಾವುವು?**

- ಕಮ್ಯುನಿಸ್ಟ್ ಮತ್ತು ಸೋಷಿಯಲಿಸ್ಟರ ದಮನ.
- ಕಾರ್ಮಿಕ ಸಂಘಗಳ ರದ್ಧತಿ.
- ರಾಜಕೀಯ ಪಕ್ಷಗಳ ನಿಷೇಧ.
- ನಾಜಿ ಏಕೈಕ ರಾಜಕೀಯ ಪಕ್ಷವೆಂದು ಘೋಷಣೆ.
- ಜರ್ಮನ್ ಆರ್ಯ ಜನಾಂಗೀಯ ಶ್ರೇಷ್ಠತೆ ಪ್ರತಿಪಾದನೆ.
- ಜನಾಂಗೀಯ ದ್ವೇಷ ಪ್ರಸಾರ.
- ಬೂದು ಅಂಗಿದಳ ಕ್ರೌರ್ಯಪಡೆ ರಚನೆ.
- ಯಹೂದಿಗಳ ಕಗ್ಗೊಲೆ.
- ನ್ಯೂರೆಂಬರ್ಗ್ ಕಾಯ್ದೆ ಜಾರಿ.

**4) ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು ಹೇಗೆ? ವಿವರಿಸಿ./ ಜರ್ಮನಿಯ ಅವನತಿಗೆ ಹಿಟ್ಲರ್ ಹೇಗೆ ಕಾರಣನಾದನು?**

- ಜಗತ್ತಿನಲ್ಲಿ ಜರ್ಮನ್ ಆರ್ಯ ಜನಾಂಗವೇ ಶ್ರೇಷ್ಠ.
- ಜಗತ್ತನ್ನಾಳಲು ಜರ್ಮನ್ನರು ಮಾತ್ರ ಯೋಗ್ಯರು.
- ಉಳಿದ ಜನಾಂಗಗಳು ಆಳಿಸಿಕೊಳ್ಳಲು ಮಾತ್ರ ಯೋಗ್ಯರು.

- ಜರ್ಮನ್ನರ ಸಮಸ್ಯೆಗಳಿಗೆ ಯಹೂದಿಗಳೇ ಕಾರಣ.
- ಕ್ಯಾಥೋಲಿಕ್‌ರು, ಸೋಷಿಯಲಿಸ್ಟರೂ ಕಾರಣ.
- ಇವರು ಬದುಕಲು ಯೋಗ್ಯರಲ್ಲ.
- ಉಗ್ರ ರಾಷ್ಟ್ರೀಯವಾದ ಜಾರಿ.
- ಗೋಬೆಲ್ಸ್ ಎಂಬ ವಿಶೇಷ ಮಂತ್ರಿ ನೇಮಕ.
- ಬೂದು ಅಂಗಿ ದಳ ಎಂಬ ಕ್ರೌರ್ಯಪಡೆ ರಚನೆ.

**5) ಫ್ಯಾಸಿಸ್ಟವಾದದ ಲಕ್ಷಣಗಳೇನು? ಅಥವಾ**
**ಮುಸೋಲಿನಿಯ ಫ್ಯಾಸಿಸ್ಟ್‌ವಾದವು ಅತ್ಯಂತ ಕ್ರೂರವಾಗಿತ್ತು. ಸಮರ್ಥಿಸಿರಿ.**

- ಉಗ್ರ ರಾಷ್ಟ್ರೀಯವಾದ.
- ಪರಕೀಯ ಶಕ್ತಿಗಳ ನಾಶ.
- ಹಿಂಸೆಯ ವೈಭವೀಕರಣ.
- ಜನಾಂಗೀಯ ಶ್ರೇಷ್ಠತೆ.
- ಸಾಮ್ರಾಜ್ಯವಾದದ ವಿಸ್ತರಣೆ.
- ನರಮೇಧಗಳಿಗೆ ಬೆಂಬಲ.

**6) ಇಟಲಿಯಲ್ಲಿ ಮುಸೋಲಿನಿ ಕೈಗೊಂಡ ಕಾರ್ಯಗಳು ಇಟಲಿಯ ಅವನತಿಗೆ ಹೇಗೆ ಕಾರಣವಾಯಿತು?**

- ರಾಷ್ಟ್ರೀಯ ಫ್ಯಾಸಿಸ್ಟ್ ಪಕ್ಷ ಸ್ಥಾಪನೆ.
- ಪ್ರಜಾಪ್ರಭುತ್ವ ವಿಸರ್ಜಿಸಿ, ಸರ್ವಾಧಿಕಾರಿಯಾದನು.
- ರಾಜಕೀಯ ವಿರೋಧಿಗಳ ನಾಶ.
- ಕಾರ್ಮಿಕರ ಮುಷ್ಕರ ನಿಷೇಧ.
- ಏಕಪಕ್ಷದ ಸರ್ವಾಧಿಕಾರ ಸ್ಥಾಪನೆ.
- ಲಕ್ಷಾಂತರ ಜನರ ಸಾವಿಗೆ ಕಾರಣನಾದನು.

**7) 1930ರ ಮಹಾ ಆರ್ಥಿಕ ಕುಸಿತದ ಪರಿಣಾಮಗಳೇನು?**

- ಯುರೋಪ್ & ಅಮೆರಿಕಾದಲ್ಲಿ ಸಂಕಷ್ಟ ಸ್ಥಿತಿ ನಿರ್ಮಾಣ.
- ಜನರ ಜೀವನ ಮಟ್ಟ ಕುಸಿತ.
- ಕೈಗಾರಿಕೆ ಮತ್ತು ಕೃಷಿ ಪ್ರಗತಿ ಕುಂಠಿತ.
- ನಿರುದ್ಯೋಗ ಹೆಚ್ಚಳ.

**8) ಎರಡನೆಯ ಮಹಾಯುದ್ಧಕ್ಕೆ ಕಾರಣಗಳನ್ನು ತಿಳಿಸಿ.**

- ಮೊದಲ ಮಹಾಯುದ್ಧದ ಸೋಲು.
- ಅವಮಾನಕರ ಒಪ್ಪಂದಗಳು.
- ಉಗ್ರ ರಾಷ್ಟ್ರೀಯತೆ ಬೆಳವಣಿಗೆ.
- ಕೈಗಾರಿಕೋದ್ಯಮಿಗಳಿಂದ ಧನಸಹಾಯ.
- ಸೇಡು ಮತ್ತು ದುರಾಭಿಮಾನ ಚಳುವಳಿ.
- ಸರ್ವಾಧಿಕಾರಿಗಳ ಬೆಳವಣಿಗೆ.
- ಎರಡು ಶತ್ರುಬಣಗಳ ಉದಯ.
- ರಾಷ್ಟ್ರ ಸಂಘದ ವಿಫಲತೆ.
- ಪೋಲೆಂಡ್ ಮೇಲೆ ಜರ್ಮನಿ ದಾಳಿ.

.

**11) ಎರಡನೆಯ ಮಹಾಯುದ್ಧದ ಪರಿಣಾಮಗಳಾವುವು?**

- ಅಪಾರ ಸಾವು–ನೋವು ಸಂಭವಿಸಿತು.
- ಜಗತ್ತಿನ ರಾಜಕೀಯ ಮತ್ತು ಸಾಮಾಜಿಕ ಸಂರಚನೆಯಲ್ಲಿ ಬದಲಾವಣೆ.
- ವಿಶ್ವಸಂಸ್ಥೆ ಸ್ಥಾಪನೆ.
- ಯುದ್ಧ ಗೆದ್ದ ದೇಶಗಳು ಭದ್ರತಾ ಮಂಡಳಿಯ ಖಾಯಂ ಸದಸ್ಯರಾದರು.
- ರಷ್ಯಾ, ಅಮೇರಿಕಾ ಪರಸ್ಪರ ವಿರೋಧಿಗಳಾದವು.,
- ಶೀತಲ ಸಮರಕ್ಕೆ ನಾಂದಿ.
- ಏಷ್ಯಾ & ಆಫ್ರಿಕಾದ ವಸಾಹತುಗಳಿಂದ ಸ್ವಾತಂತ್ರ್ಯ ಘೋಷಣೆ.
- ಅಣ್ವಸ್ತ್ರ ಪೈಪೋಟಿಗೆ ದಾರಿ.

**12) ಮೈಸೂರಿನ ಮುಖ್ಯ ಕಮಾಂಡೆಂಟ್‌ಗಳನ್ನು ಹೆಸರಿಸಿ.**

- ಎ.ಟಿ.ತ್ಯಾಗರಾಜ. • ಎ.ಲಿಂಗರಾಜ್ ಅರಸ್. • ಬಿ.ಪಿ.ಕೃಷ್ಣೆ ಅರಸ್. • ಸರ್ದಾರ್ ಬಹದ್ದೂರ.
- ಸುಬ್ಬರಾಜ್ ಅರಸ್. • ವೀರ್ ತುರಾಕ್ ಆಲಿ. • ಬಿ.ಚಾಮರಾಜ್ ಅರಸ್.

**13. ಭಾರತದ ಸಂಪನ್ಮೂಲಗಳನ್ನು ಬ್ರಿಟನ್ ಹೇಗೆ ಎರಡನೇ ಮಹಾಯುದ್ಧದಲ್ಲಿ ಉಪಯೋಗಿಸಿಕೊಂಡಿತು?**

- ಭಾರತದ ಸಿಪಾಯಿಗಳು ಹಾಗೂ ಸಂಪನ್ಮೂಲಗಳ ಬಳಕೆ.
- ಭಾರತದ ಸೇನೆ ಪಶ್ಚಿಮ ಏಷಿಯಾ, ಬರ್ಮ, ಇರಾಕ್, ಇರಾನ್, ಸಿರಿಯ, ಆಫ್ರಿಕಾ, ಇಟಲಿಗಳಲ್ಲಿ ಹೋರಾಡಿತು.

- ಯುದ್ಧದಲ್ಲಿ ಭಾರತೀಯ ಕೃಷಿ ವಸ್ತು ಮತ್ತು ಕೈಗಾರಿಕಾ ಪದಾರ್ಥ ಬಳಕೆ.
- ಯುದ್ಧ ಸಾಮಗ್ರಿ ಉತ್ಪಾದನೆಗೆ ಆರ್ಡಿನೆನ್ಸ್ ಕಾರ್ಖಾನೆ ಮೇಲ್ದರ್ಜೆಗೆ ಏರಿಸಿತು.
- ಹೊಸ ತಂತ್ರಗಾರಿಕೆ ಅಳವಡಿಕೆ.
- ಆಫ್ರಿಕಾದಲ್ಲಿ ಇಟಲಿ ಜೊತೆ ಸೆಣಸಲು ಸಹಾಯ.
- ಭಾರತೀಯ ಸೇನೆಯಿಂದ ಜರ್ಮನಿಗೆ ಸೋಲು.

**14 ಮೊದಲ ಮಹಾ ಯುದ್ಧದಲ್ಲಿ ಮೈಸೂರು ಸಂಸ್ಥಾನದ ಪಾತ್ರವೇನು?**

- ನಾಲ್ವಡಿ ಕೃಷ್ಣರಾಜ ಒಡೆಯರರಿಂದ ಯುದ್ಧದಲ್ಲಿ ಹೆಗಲಿಗೆ ಹೆಗಲು ಕೊಟ್ಟು ನಿಲ್ಲುವುದಾಗಿ ಘೋಷಣೆ.
- ಭಾರತ ಯುದ್ಧ ನಿಧಿಗೆ 50ಲಕ್ಷ ರೂ. ನೀಡಿದರು.
- ಲ್ಯಾನ್ಸರ್ಸ್ ರೆಜಿಮೆಂಟ್ ಈಜಿಪ್ಟ್‌ಗೆ ಹೊರಡಲು ಆದೇಶ.
- ಬಿ.ಚಾಮರಾಜ ಅರಸುರವರ ನೇತೃತ್ವದಲ್ಲಿ ಮೈಸೂರು ಸೇನೆ ರಣ ಭೂಮಿಗೆ ರವಾನೆ.
- ಕಬ್ಬಿಣ, ಅಭ್ರಕ, ಕ್ರೋಮೈಟ್, ಮರಮುಟ್ಟುಗಳು, ಕಂಬಳಿಗಳನ್ನು ಉತ್ಪಾದಿಸಿ ರಣರಂಗಕ್ಕೆ ಕಳುಹಿಸಿತು.
- ಸೂಯಜ್ ಕಾಲುವೆ ಪ್ರಾಂತ್ಯದಲ್ಲಿ ವೈರಿಗಳೊಂದಿಗೆ ಹೋರಾಟ.
- ಗಾಜಾ ಯುದ್ಧದಲ್ಲಿ ಸೈನ್ಯ ಶತ್ರುಗಳ ಬೆನ್ನಟ್ಟಿತು.
- ಮೈಸೂರು ಸೈನಿಕರಿಂದ ಟರ್ಕಿ ಸೈನ್ಯ ನಾಶ.

**15 ಮೊದಲ ಮಹಾ ಯುದ್ಧದಲ್ಲಿ ಭಾರತದ ಕೊಡುಗೆಯನ್ನು ವಿವರಿಸಿರಿ.**

- ದೇಶೀಯ ರಾಜರಿಂದ ಆರ್ಥಿಕ, ಸೈನಿಕ, ವಸ್ತುರೂಪದ ನೆರವು.
- 15 ಲಕ್ಷ ಸಿಪಾಯಿಗಳು ಯುದ್ಧದಲ್ಲಿ ಭಾಗಿ.
- 1,72,815 ಪ್ರಾಣಿಗಳ ಸರಬರಾಜು.
- 7 ಕೋಟಿ ಯುದ್ಧ ಸಾಮಗ್ರಿ ಪೂರೈಕೆ.
- 6 ಲಕ್ಷ ರೈಫಲ್ ಸರಬರಾಜು.
- ಕಚ್ಚಾವಸ್ತು, ಅದಿರು, ಚಹ, ರಬ್ಬರ್ ರವಾನೆ.

## ರಾಜ್ಯಶಾಸ್ತ್ರ ವಿಭಾಗ :

### ಅಧ್ಯಾಯ –1 ಭಾರತಕ್ಕಿರುವ ಸವಾಲುಗಳು ಹಾಗೂ ಅವುಗಳ ಪರಿಹಾರೋಪಾಯಗಳು

**ಈ ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಭಾರತಕ್ಕಿರುವ ಸವಾಲುಗಳು ಯಾವುವು? / ಭಾರತ ಇಂದು ಎದುರಿಸುತ್ತಿರುವ ಪ್ರಮುಖ ಸಮಸ್ಯೆಗಳಾವುವು.? / ಸ್ವಾತಂತ್ರ್ಯ ನಂತರವೂ ಭಾರತ ಅನೇಕ ಸವಾಲುಗಳನ್ನು ಎದುರಿಸುತ್ತಿದೆ ಸ್ಪಷ್ಟೀಕರಿಸಿ.**

1. ಕೋಮುವಾದ 2. ಅನಕ್ಷರತೆ 3. ಮಹಿಳೆಯರ ಸ್ಥಾನಮಾನ 4. ಆರ್ಥಿಕ ಅಸಮಾನತೆ

5. ಜನಸಂಖ್ಯೆ ಹೆಚ್ಚಳ 6. ಬಡತನ.

**2. ಭಾರತಕ್ಕಿರುವ ಸವಾಲುಗಳನ್ನು ಹೇಗೆ ಪರಿಹರಿಸಬಹುದು ? / ಪ್ರಸ್ತುತ ಭಾರತ ಎದುರಿಸುತ್ತಿರುವ ಸವಾಲುಗಳಿಗೆ ನೀವು ಯಾವ ಪರಿಹಾರ ಕ್ರಮಗಳನ್ನು ಸೂಚಿಸುವಿರಿ.**

1. ಉತ್ತಮ ಶಾಸನಗಳ ರಚನೆ
2. ಸಾಮಾಜಿಕ ಸುಧಾರಣೆಗಳು,
3. ದಕ್ಷ ಆಡಳಿತ,
4. ತ್ವರಿತ ಹಾಗೂ ಪಕ್ಷಪಾತರಹಿತ ನ್ಯಾಯಾಂಗ ವ್ಯವಸ್ಥೆ
5. ಜನತೆಯ ಸಹಕಾರ

**3. ಕೋಮುವಾದ ದೇಶದ ಐಕ್ಯತೆಗೆ ಮಾರಕ. ಹೇಗೆ? /ಕೋಮುವಾದ ನಮ್ಮ ಜಾತ್ಯಾತೀತ ತತ್ವಗಳಿಗೆ ವಿರುದ್ಧವಾದದ್ದು. ಹೇಗೆ?/ ಕೋಮುವಾದವು ರಾಷ್ಟ್ರದ ಏಕತೆ ಮತ್ತು ಸಮಗ್ರತೆಗೆ ಭಂಗ ತರುತ್ತದೆ.ಸಮರ್ಥಿಸಿ?**

1. ಸಾಮಾಜಿಕ ಭಿನ್ನತೆ, ಅಪನಂಬಿಕೆ ಹಾಗೂ ಭಯದ ವಾತಾವರಣ ಸೃಷ್ಟಿ.
2. ರಾಷ್ಟ್ರೀಯ ಏಕತೆ ಮತ್ತು ಸಮಗ್ರತೆಗೆ ಭಂಗ.
3. ಗುಂಪುಗಾರಿಕೆ ಮತ್ತು ರಾಜಕೀಯ ಪೈಪೋಟಿಗೆ ಕಾರಣ.
4. ಸಮಾಜದ ನೆಮ್ಮದಿಯನ್ನು ಕೆಡಿಸುತ್ತದೆ.
5. ವ್ಯಕ್ತಿಗಳ ಜೀವನ ಮತ್ತು ಸೊತ್ತುಗಳ ನಾಶ.
6. ಗುಂಪುಗಳ ಮಧ್ಯೆ ಪರಸ್ಪರ ದೋಷಾರೋಪಣೆ, ದೈಹಿಕ ಹಲ್ಲೆ ಕಾರಣವಾಗುತ್ತದೆ.

**4. ಕೋಮುವಾದವನ್ನು ನಿಯಂತ್ರಿಸುವ ಕ್ರಮಗಳಾವುವು ?/ ದೇಶದ ಆಂತರಿಕ ಸಮಸ್ಯೆಯಾದ ಕೋಮುವಾದದ ನಿವಾರಣಾ ಕ್ರಮಗಳಾವುವು?**

1. ಏಕರೂಪ ನಾಗರಿಕ ಸಂಹಿತೆ,
2. ಎಲ್ಲಾ ನಾಗರಿಕರನ್ನು ಸಮಾನ ದೃಷ್ಟಿಯಿಂದ ಕಾಣುವಿಕೆ,
3. ಜಾತ್ಯತೀತ ಮನೋಭಾವಕ್ಕೆ ಎಲ್ಲಾ ರಂಗಗಳಲ್ಲೂ ಪ್ರಾಶಸ್ತ್ಯ,
4. ಸಾರ್ವಜನಿಕ ಎಚ್ಚರ,
5. ರಾಜಕೀಯ ಅಚಲ ನಿರ್ಧಾರ,
6. ಆಡಳಿತಾತ್ಮಕ ಸಮತೋಲನ,

7. ಕ್ರಮಬದ್ಧ ಕಾನೂನು ವ್ಯವಸ್ಥೆ,
8. ಸದೃಢ ರಾಷ್ಟ್ರೀಯ ಮನೋಭಾವ,
9. ಆರೋಗ್ಯಕರ ಪೂರಕ ಸುದ್ದಿಮಾಧ್ಯಮ

**5. ಪ್ರಾದೇಶಿಕವಾದವನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ? /**
**ಪ್ರಾದೇಶಕವಾದನ್ನು ಇಲ್ಲವಾಗಿಸಲು ನಮ್ಮ ಸಂವಿಧಾನ ಸೂಚಿಸಿದ ಮಾರ್ಗೋಪಾಯಗಳಾವುವು?**
1. ಸಂಯುಕ್ತ ರಾಜ್ಯ ಪದ್ಧತಿಗೆ ಅವಕಾಶ. 2. ಸಂವಿಧಾನದ ಪ್ರಸ್ತಾವನೆಯಲ್ಲಿರುವ 'ಭಾರತದ ಪ್ರಜೆಗಳಾದ ನಾವು.....' ಎಂಬ ಸ್ಪಷ್ಟ ಒಕ್ಕಣೆ. 3. 1956ರ ಭಾಷಾವಾರು ಪ್ರಾಂತ್ಯಗಳ ರಚನೆಯಲ್ಲಿ ಏಕತೆಗೆ ಅವಕಾಶ
4. ಅರೆ ಸಂಯುಕ್ತ ವ್ಯವಸ್ಥೆಯನ್ನು ಜಾರಿಗೊಳಿಸಿರುವುದು,
5. ರಾಜ್ಯಗಳಿಗೆ ಸ್ವಾಯತ್ತತೆ ನೀಡಿವೆ.
6. ಸಂವಿಧಾನದ 371 ನೇ ವಿಧಿ ಜಾರಿ
7. ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ವಿವಿಧ ಸಮಿತಿಗಳ ನೇಮಕ

**6. ಭಾರತದಲ್ಲಿ ಅನಕ್ಷರತೆ ಕಾರಣಗಳನ್ನು ತಿಳಿಸಿ./ ಭಾರತದಲ್ಲಿ ಶೈಕ್ಷಣಿಕ ಹಿಂದುಳಿದಿರುವಿಕೆಗೆ ಕಾರಣಗಳಾವುವು.? / ಭಾರತದಲ್ಲಿ ಸಾಕ್ಷರತೆಯ ಪ್ರಮಾಣ ಕಡಿಮೆಯಿದೆ ಏಕೆ.?**
1. ಬಡತನ 2. ವಲಸೆ ಹೋಗುವಿಕೆ, 3. ಮಕ್ಕಳ ದುಡಿಮೆ 4. ಬಾಲ್ಯವಿವಾಹ,
5. ಚಿಕ್ಕ ಮಕ್ಕಳ ಲಾಲನೆ-ಪಾಲನೆಗೆ ಹಿರಿಯ ಮಕ್ಕಳ ಬಳಕೆ 6. ಶಿಕ್ಷಣ ಕೊಡಿಸಬೇಕೆಂಬ ಆಸಕ್ತಿಯ ಕೊರತೆ

**7.ಭಾರತದಲ್ಲಿ ಅನಕ್ಷರತೆ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು.?**
**ಭಾರತದಲ್ಲಿ ಸಾಕ್ಷರತೆಯ ಮಟ್ಟವನ್ನು ಹೆಚ್ಚಿಸಲು ಸರ್ಕಾರ ಅನೇಕ ಕ್ರಮಗಳನ್ನು ಅನುಸರಿಸುತ್ತಿದೆ. ಸಮರ್ಥಿಸಿ.**
1. 2001 ಸರ್ವಶಿಕ್ಷಣ ಅಭಿಯಾನ ಜಾರಿಗೆ ತರಲಾಯಿತು.
2. ವಿಕಲ ಚೇತನರ ಶಿಕ್ಷಣಕ್ಕೆ ಆದ್ಯತೆ
3. ಮಹಿಳಾ ಶಿಕ್ಷಣ ಹಾಗೂ ಮಹಿಳಾ ಜಾಗೃತಿಗೆ ಆದ್ಯತೆ
4. 1988 ರಲ್ಲಿ 'ರಾಷ್ಟ್ರೀಯ ಸಾಕ್ಷರತಾ ಮಿಷನ್' ಸ್ಥಾಪಿಸಿದೆ.
5. ಸಾಕ್ಷರ ಭಾರತ' ಕಾರ್ಯಕ್ರಮದ ಜಾರಿ
6. 21ಎ ವಿಧಿಯನ್ವಯ ಶಿಕ್ಷಣ ಮೂಲಭೂತ ಹಕ್ಕಾಗಿದೆ
7. 2009ರಲ್ಲಿ ಶಿಕ್ಷಣ ಹಕ್ಕು ಕಾಯ್ದೆಯನ್ನು ಜಾರಿಗೊಳಿಸಿದೆ.

**8. ಭ್ರಷ್ಟಾಚಾರದ ಜಾಲದಲ್ಲಿ ಸೇರಿಕೊಂಡಿರುವ ಅಂಶಗಳಾವುವು?/ಭ್ರಷ್ಟಾಚಾರವು ಯಾವ ಯಾವ ಅಂಶಗಳನ್ನು ಒಳಗೊಂಡಿದೆ.?**
1. ತೆರಿಗೆಕಳ್ಳತನ, 2.ಅಕ್ರಮ ದಾಸ್ತಾನು. 3.ಕಳ್ಳಸಾಗಾಣಿಕೆ, 4.ಆರ್ಥಿಕ ವಂಚನೆ, ಮೋಸಗಾರಿಕೆ.
5.ವಿದೇಶೀ ವಿನಿಮಯದ ಕಾನೂನು ಉಲ್ಲಂಘನೆ, 6.ಔದ್ಯೋಗಿಕ ವಂಚನೆ

**9. ಭ್ರಷ್ಟಾಚಾರ ನಿಯಂತ್ರಣ ಕ್ರಮಗಳಾವುವು?**

1. ರಾಜಕೀಯ ಇಚ್ಛಾಶಕ್ತಿ.
2. ಸಾರ್ವಜನಿಕ ಸಹಕಾರ.
3. ಒಳ್ಳೆಯ ರಾಜಕೀಯ ನಾಯಕತ್ವ,
4. ಉತ್ತಮ ಅಧಿಕಾರಿ ವರ್ಗ.
5. ಕಠಿಣ ಶಿಕ್ಷಾ ವಿಧಾನ.
6. ಕಟ್ಟುನಿಟ್ಟಾದ ಮೇಲ್ವಿಚಾರಣೆ.

**10. ಭಾರತದಲ್ಲಿ ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?/ ಇತ್ತೀಚಿನ ದಿನಗಳಲ್ಲಿ ಪರಿಸ್ಥಿತಿಯು ಮಹಿಳೆಯರು ಉತ್ತಮ ಸಾಧನೆಮಾಡಲು ಪೂರಕವಾಗಿದೆ ಹೇಗೆ.? / ಭಾರತದಂತಹ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರ ಸ್ಥಾನಮಾನ ಉತ್ತಮವಾಗಿಲ್ಲ ಅದನ್ನು ಉತ್ತಮಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು.?**

1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯನ್ನು ಪ್ರಾರಂಭಿಸಿದೆ.
2. ಮಹಿಳಾ ಶಿಕ್ಷಣ, ಬಾಲ್ಯವಿವಾಹ ನಿಷೇಧಕಾಯ್ದೆ,
3. ವರದಕ್ಷಿಣೆ ನಿಷೇಧ ಕಾಯ್ದೆ,
4. ಸ್ತ್ರೀ ಶಕ್ತಿಕಾರ್ಯಕ್ರಮವನ್ನು ಜಾರಿಗೊಳಿಸಿದೆ ,
5. ಸ್ವ-ಉದ್ಯೋಗಕ್ಕಾಗಿ ಸಾಲ ಸೌಲಭ್ಯ ಮತ್ತು ಸಬ್ಸಿಡಿ.
6. ಮಹಿಳಾ ಮಂಡಲಗಳು, ಯುವತಿ ಮಂಡಲಗಳು .
7. ಸ್ವಸಹಾಯ ಸಂಘಗಳು.
8. ಮಹಿಳಾ ಸಹಕಾರಿ ಸಂಘಗಳು.

**11. ಆರ್ಥಿಕ ಅಸಮಾನತೆಗೆ ಕಾರಣಗಳಾವುವು.? / ಭಾರತದಲ್ಲಿ ಆರ್ಥಿಕ ಅಸಮಾನತೆ ಹೆಚ್ಚಾಗಿ ಕಂಡುಬರುತ್ತಿದೆ ಏಕೆ ಸಮರ್ಥಿಸಿ. / ಭಾರತದಲ್ಲಿ ಶ್ರೀಮಂತರು ಮತ್ತು ಬಡವರ ಅಂತರ ಹೆಚ್ಚಾಗುತ್ತಿದೆ ಏಕೆ. ?**

1. ಖಾಸಗಿ ಕ್ಷೇತ್ರದ ಅತ್ಯಂತ ಹೆಚ್ಚಿನ ಮೊತ್ತದ ವೇತನ ಶ್ರೇಣಿ,
2. ಬಹುರಾಷ್ಟ್ರೀಯ ಕಂಪನಿಗಳ ಕಾರ್ಯಕ್ಷೇತ್ರ,
3. ಶ್ವೇತಧಾರಿ ಅರ್ಥಾತ್ ಮೇಲುಸ್ತರದ ನೌಕರಿಗಳು,
4. ಲಾಭ ಬಡುಕತನ,
5. ಭ್ರಷ್ಟಾಚಾರ

**12. ಆರ್ಥಿಕ ಅಸಮಾನತೆಯನ್ನು ಹೇಗೆ ಕಡಿಮೆಗೊಳಿಸುವಿರಿ ?/ ಭಾರತದಲ್ಲಿ ಆರ್ಥಿಕ ಅಸಮಾನತೆಯನ್ನು ನಿಯಂತ್ರಿಸಲಾಗುತ್ತಿದೆ ಸಮರ್ಥಿಸಿ. / ಭಾರತ ಸರ್ಕಾರವು ಬಡವ ಮತ್ತು ಶ್ರೀಮಂತರ ನಡುವಿನ ಅಂತರವನ್ನು ಹೇಗೆ ಕಡಿಮೆ ಮಾಡಲು ಪ್ರಯತ್ನಿಸುತ್ತಿದೆ.?**

1. ಉತ್ತಮ ಆರ್ಥಿಕ ಸುಧಾರಣೆಗಳು, 2. ಯೋಜನಾ ಬದ್ಧ ಹಣಕಾಸಿನ ನಿರ್ವಹಣೆ,

3. ಒಳ್ಳೆಯ ತೆರಿಗೆ ವಿಧಾನ 4. ಸಾಮಾಜಿಕ ಭದ್ರತೆ 5. ಗುಡಿ ಕೈಗಾರಿಕೆಗಳ ಅಭಿವೃದ್ಧಿ
6. ಬೃಹತ್ ಉದ್ಯಮ, ಏಕಸ್ವಾಮ್ಯ ವಲಯಗಳ ನಿಯಂತ್ರಣ.
7. ಭೂಸುಧಾರಣೆ, ಕಾರ್ಮಿಕಪರ ಧೋರಣೆಗಳು,

**13. ಜನಸಂಖ್ಯೆಯ ಹೆಚ್ಚಳಕ್ಕೆ ಕಾರಣವಾದ ಅಂಶಗಳಾವುವು.? / ಭಾರತದಲ್ಲಿ ಜನಸಂಖ್ಯೆಯು ತೀವ್ರವಾಗಿ ಹೆಚ್ಚಳವಾಗಲು ಕಾರಣಗಳಾವುವು.? / ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಜನಸಂಖ್ಯೆ ಹೆಚ್ಚಾಗಿರುತ್ತದೆ ಏಕೆ.?**

1. ಜನನದ ಪ್ರಮಾಣದಲ್ಲಿ ಮಿತಿ ಮೀರಿದ ಹೆಚ್ಚಳ,
2. ಮರಣದ ಪ್ರಮಾಣದಲ್ಲಿ ಇಳಿಕೆ,
3. ಜೀವಿತ ಕಾಲಮಾನದಲ್ಲಿ ಗಣನೀಯ ಪ್ರಮಾಣದ ಏರಿಕೆ,
4. ಶಿಶು ಮರಣದ ನಿಷ್ಪತ್ತಿಯಲ್ಲಿ ಕಡಿತ,
5. ಕುಟುಂಬ ಕಲ್ಯಾಣ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಜಾರಿಯಾಗದಿರುವುದು

**14. ಜನಸಂಖ್ಯಾ ಹೆಚ್ಚಳದಿಂದಾಗುವ ಪರಿಣಾಮಗಳಾವುವು.?/ ಅತಿಯಾದ ಜನಸಂಖ್ಯೆಯು ಅನೇಕ ಸಮಸ್ಯೆಗಳಿಗೆ ಕಾರಣವಾಗಿದೆ ಹೇಗೆ.? /ಭಾರತದಲ್ಲಿ ಜನಸಂಖ್ಯೆ ಹೆಚ್ಚಳವು ಅನೇಕ ಸವಾಲುಗಳನ್ನು ಸೃಷ್ಟಿಸಿದೆ ಸ್ಪಷ್ಟಪಡಿಸಿ.**

1. ನಿರುದ್ಯೋಗ, 2. ಅನಕ್ಷರತೆ, 3. ಬಡತನ,
4. ವಸತಿ ಸೌಲಭ್ಯ 5. ಆರೋಗ್ಯ ಸಮಸ್ಯೆ, 6. ನೀರಿನ ಪೂರೈಕೆ

**15. ಜನಸಂಖ್ಯಾ ಸಮಸ್ಯೆಯನ್ನು ಪರಿಹರಿಸುವ ಮಾರ್ಗಗಳಾವುವು. ?./ ಸರ್ಕಾರವು ಜನಸಂಖ್ಯೆ ನಿಯಂತ್ರಿಸಲು ಹಮ್ಮಿಕೊಂಡಿರುವ ಕಾರ್ಯಕ್ರಮಗಳಾವುವು.? / ಭಾರತದಲ್ಲಿ ಜನಸಂಖ್ಯೆ ಹೆಚ್ಚಳವು ಪ್ರಮುಖ ಸವಾಲಾಗಿದೆ ಅದನ್ನು ನಿಯಂತ್ರಿಸಲು ನಿಮ್ಮ ಸಲಹೆಗಳೇನು.?**

1. ಅಕ್ಷರ ಪ್ರಸರಣ, 2. ತಾಂತ್ರಿಕ ಶಿಕ್ಷಣ, 3. ಕೃಷಿ ಅಭಿವೃದ್ಧಿ,
4. ಕೈಗಾರಿಕಾ ಪ್ರಗತಿ, 5. ರಫ್ತು ಹೆಚ್ಚಳ, 6. ವೃತ್ತಿ ಕೌಶಲ್ಯವನ್ನು ಹೆಚ್ಚಿಸುವುದು.
7. ಪಟ್ಟಣ ಹಾಗೂ ಗ್ರಾಮಾಂತರ ಪ್ರದೇಶದಲ್ಲಿನ ಹೆಚ್ಚುವರಿ ಉದ್ಯೋಗವಕಾಶ.

**16. ಬಡತನ ನಿರ್ಮೂಲನೆಗೆ ಸರ್ಕಾರದ ಕ್ರಮಗಳಾವುವು ? /ಬಡತನವನ್ನು ನಿವಾರಿಸಲು ನೀವು ಅನುಸರಿಸುವ ವಿಧಾನಗಳಾವುವು.? / ಜನರ ಜೀವನಮಟ್ಟ ಸುಧಾರಿಸಲು ಸರ್ಕಾರ ಅನುಸರಿಸುತ್ತಿರುವ ಕ್ರಮಗಳಾವುವು**

1. ರಾಷ್ಟ್ರದಲ್ಲಿ ಪಂಚವಾರ್ಷಿಕ ಯೋಜನೆಗಳ ಜಾರಿ
2. ಜವಾಹರ ರೋಜ್‌ಗಾರ್ ಯೋಜನೆ,
3. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ,
4. ಬಡಕುಟುಂಬಗಳಿಗೆ ಬಿಪಿಎಲ್ (ಬಡತನ ರೇಖೆಯ ಕೆಳಗಡೆ) ಕಾರ್ಡುಗಳ ವಿತರಣೆ.
5. ಪ್ರಧಾನ ಮಂತ್ರಿ ಗ್ರಾಮೋದಯ ಯೋಜನೆ ಮುಂತಾದವು

**17. ಲಾಭಕೋರತನದ ಪರಿಣಾಮಗಳಾವುವು.?/ವ್ಯಾಪಾರಿಗಳ ಲಾಭಬಡುಕುತನ ಸಮಾಜದ ಅಸಮಾನತೆಗೆ ಹೇಗೆ ಕಾರಣವಾಗುತ್ತದೆ.?/ ಲಾಭಕೋರತನದಿಂದ ಉಂಟಾಗುವ ದುಷ್ಪರಿಣಾಮಗಳಾವುವು.?**

1. ಅಸಮಾನತೆ ಹೆಚ್ಚಾಗುತ್ತದೆ.
2. ಬಡತನ ಇನ್ನಷ್ಟು ಅಧಿಕ ಎನಿಸುತ್ತದೆ.
3. ಸಮಾಜದಲ್ಲಿ ಅಪರಾಧಗಳ ಏರಿಕೆಯಾಗುತ್ತದೆ.
4. ಅನೈತಿಕ ವ್ಯಾಪಾರ ವಹಿವಾಟಿಗೆ ಪ್ರಚೋದನೆ.
5. ಹಣದುಬ್ಬರಕ್ಕೆ ಎಡೆಮಾಡಿಕೊಡುತ್ತದೆ.
6. ಜನಸಮುದಾಯದ ಆದಾಯದ ಶ್ರೀಮಂತ ವ್ಯಾಪಾರಿ ವರ್ಗದ ಕೈ ಸೇರುತ್ತದೆ.
7. ಬೆಲೆಗಳ ಮೇಲೆ ಹತೋಟಿ ಇಲ್ಲವಾಗುತ್ತದೆ.

**18. ಲಾಭಕೋರತನಕ್ಕೆ ಇರುವ ಮುಖ್ಯ ಕಾರಣಗಳನ್ನು ತಿಳಿಸಿ./ ಲಾಭಕೋರತನವು ಹಲವು ಅನೈತಿಕ ಚಟುವಟಿಕೆಗಳಿಗೆ ಕಾರಣವಾಗಿದೆ ಹೇಗೆ.? / ಲಾಭಕೋರತನವು ಸಮಾಜದ ಸ್ವಾಸ್ಥ್ಯವನ್ನು ಹಾಳು ಮಾಡುತ್ತದೆ ಸಮರ್ಥಿಸಿ.**

1. ಏಕಸ್ವಾಮ್ಯ ವ್ಯವಸ್ಥೆ,
2. ಬಹುರಾಷ್ಟ್ರೀಯ ಕಂಪೆನಿಗಳ ವ್ಯಾಪಕತೆ,
3. ಅನಾರೋಗ್ಯಕರ ಮಾರುಕಟ್ಟೆ ನಿಯಮಗಳು,
4. ಅಕ್ರಮ ದಾಸ್ತಾನು,
5. ಕಳ್ಳ ವ್ಯಾಪಾರ,
6. ಬೆಲೆಯ ಬಗ್ಗೆ ಸರಿಯಾದ ನಿಯಂತ್ರಣ ಇಲ್ಲದಿರುವಿಕೆ

**19. ಕಳ್ಳ ಸಾಗಾಣಿಕೆಯನ್ನು ನಿಯಂತ್ರಿಸುವ ಉತ್ತಮ ಉಪಾಯಗಳು ಯಾವುವು ? / ಕಳ್ಳ ಸಾಗಾಣಿಕೆಯನ್ನು ಹೇಗೆ ನಿಯಂತ್ರಿಸುವಿರಿ.? / ಕಳ್ಳಸಾಗಾಣಿಕೆಯು ದೇಶದ ಅರ್ಥವ್ಯವಸ್ಥೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ ಹಾಗಾಗಿ ಅದನ್ನು ನಿಯಂತ್ರಿಸಲು ನೀವು ಯಾವ ಸಲಹೆಗಳನ್ನು ನೀಡುವಿರಿ.**

1. ಪರ್ಯಾಯ ವಸ್ತುಗಳ ಪೂರೈಕೆ
2. ಬೆಲೆಯನ್ನು ನಿಯಂತ್ರಿಸುವಿಕೆ,
3. ಸುಯೋಗ್ಯ ಆಮದು–ರಫ್ತು ಧೋರಣೆ,
4. ಕಟ್ಟುನಿಟ್ಟಿನ ಕರಾವಳಿ ಗಸ್ತು ಪಡೆಯ ಕಾರ್ಯಾಚರಣೆ,
5. ಆರ್ಥಿಕ ಅಪರಾಧಕ್ಕೆ ಕಠಿಣ ಶಿಕ್ಷೆ,
6. ಪರಸ್ಪರ ವ್ಯಾಪಾರ ಒಪ್ಪಂದಗಳು
7. ರಾಷ್ಟ್ರ ವಿರೋಧಿ ಹಾಗೂ ಆರ್ಥಿಕ ಅಪರಾಧ ಮನೋಭಾವ ಮೂಡಿಸುವುದು
8. ಕಳ್ಳ ಸಾಗಾಣಿಕೆಯ ವಸ್ತುಗಳನ್ನು ಸಾಮಾಜಿಕವಾಗಿ ಬಹಿಷ್ಕರಿಸುವುದು

# ಅಧ್ಯಾಯ–2

## ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

**1. ಅನ್ಯ ರಾಷ್ಟ್ರಗಳೊಂದಿಗೆ ಭಾರತಕ್ಕೆ ಉತ್ತಮ ಬಾಂಧವ್ಯ ಅವಶ್ಯಕ ಏಕೆ?/ ಪ್ರಸ್ತುತ ಜಗತ್ತಿನಲ್ಲಿ ಪ್ರತಿಯೊಂದು ರಾಷ್ಟ್ರವು ಮತ್ತೊಂದು ರಾಷ್ಟ್ರದೊಂದಿಗೆ ಉತ್ತಮ ಸಂಬಂಧ ಹೊಂದಲು ಬಯಸುತ್ತದೆ ಏಕೆ.?**

1.ಗಡಿ ಭದ್ರತೆ, 2.ಅಭಿವೃದ್ಧಿ. 3.ವಿದೇಶ ವ್ಯಾಪಾರ, 4.ಆರ್ಥಿಕ ಲಾಭ, 5.ರಾಷ್ಟ್ರದ ಗೌರವ ಹೆಚ್ಚಿಸುವುದು

**2. ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ಅಂಶಗಳು ಯಾವುವು?/ ಭಾರತ – ಪಾಕಿಸ್ತಾನ ನಡುವಿನ ಶಾಂತಿಯುತ ಸಂಬಂಧ ಸೂಕ್ತವಾಗಿ ಇನ್ನೂ ಮೂಡಿಬಂದಿಲ್ಲ. ಏಕೆ ?/ ಭಾರತದ ಅನೇಕ ಪ್ರಯತ್ನಗಳ ಹೊರತಾಗಿಯು ಪಾಕಿಸ್ತಾನದೊಂದಿಗೆ ಉತ್ತಮ ಸಂಬಂಧ ಹೊಂದಲು ಸಾಧ್ಯವಾಗಿಲ್ಲ, ಸಮರ್ಥಿ**

1. ಕಾಶ್ಮೀರ ಸಮಸ್ಯೆ. 2. ಭಯೋತ್ಪಾದನೆ. 3. ಪಾಕಿಸ್ತಾನದ ಮಿಲಿಟರಿ– ಶಾಹಿತ್ವ.
4. ರಾಜಕೀಯ ಅಸ್ಥಿರತೆ. 5. ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಯುದ್ಧಗಳು.

**3. ಭಾರತ ಮತ್ತು ಚೀನಾ ಸಂಬಂಧ ಐತಿಹಾಸಿಕವಾದುದು ಹೇಗೆ ?/ ಚೀನಾದೊಂದಿಗಿನ ಭಾರತದ ಸಂಬಂಧವು ಬಹಳ ಪ್ರಾಚೀನವಾದುದು ಈ ಹೇಳಿಕೆಯನ್ನು ಸಮರ್ಥಿಸಿ.**

1. ಚೀನಾ ನಮ್ಮ ಉತ್ತರ ಭಾಗದಲ್ಲಿರುವ ನೆರೆಯ ರಾಷ್ಟ್ರ.
2. ಇತಿಹಾಸದ ಉದ್ದಕ್ಕೂ ಪರಸ್ಪರ ಉತ್ತಮ ಸಂಬಂಧ.
3. ಚೈನಾ ಕಮ್ಯುನಿಸ್ಟ್ ರಾಷ್ಟ್ರವೆಂದು ಮಾನ್ಯತೆ ಮಾಡಿದ ಪ್ರಪ್ರಥಮ ರಾಷ್ಟ್ರ ಭಾರತ.
4. ಪಂಚಶೀಲ ತತ್ವಗಳಿಗೆ ಸಹಿ.
5. ಹಿಂದಿ–ಚೀನೀ ಭಾಯಿಭಾಯಿ ತತ್ವದ ಅಳವಡಿಕೆ.

**4.ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧ್ಯವ್ಯ ಹದಗೆಡಲು ಕಾರಣವಾದ ಅಂಶಗಳಾವುವು? / ಭಾರತದೊಂದಿಗಿನ ಚೀನಾ ಸಂಬಂಧವು ಉತ್ತಮವಾಗಿಲ್ಲ ಸಮರ್ಥಿಸಿ. / ಭಾರತ ಚೀನಾ ಸಂಬಂಧಗಳು ನಿರೀಕ್ಷಿತ ಫಲವನ್ನು ನೀಡುವಲ್ಲಿ ವಿಫಲವಾಗಿದೆ, ಸಮರ್ಥಿಸಿ.**

1. ಭಾರತದ ಧೋರಣೆಯ ವಿರುದ್ಧ ಚೈನಾ ಟಿಬೇಟನ್ನು ವಶ.
2. 1962ರಲ್ಲಿ ಚೀನಾ ಭಾರತವನ್ನು ಆಕ್ರಮಿಸಿತು.
3. ಅರುಣಾಚಲ ಪ್ರದೇಶವನ್ನು ತನ್ನದೆಂದು ಪ್ರತಿಪಾದನೆ.
4. ಮಾವೋವಾದಿಗಳು ಭಾರತದಲ್ಲಿ ನಕ್ಸಲವಾದ ಪಸರಿಸುವಿಕೆ.
5. ಭಾರತ ಚೈನಾದ ಮಧ್ಯೆ ಗಡಿಯೂ ಅಂತಿಮವಾಗಿ ನಿರ್ಣಯವಾಗಿಲ್ಲ.
6. ಅಣ್ವಸ್ತ್ರಗಳ ತಯಾರಿ,
7. ವಿದೇಶೀ ವ್ಯಾಪಾರದ ಸವಾಲುಗಳು,
8. ಗಡಿಯಲ್ಲಿ ಮಿಲಿಟರಿ ಪಡೆಗಳ ಅತಿಕ್ರಮಣ

**5. ಭಾರತ ಮತ್ತು ಅಮೆರಿಕಾ ದೇಶಗಳು ಪ್ರಜಾತಂತ್ರ ದೇಶಗಳಾಗಿದ್ದು. ಇವುಗಳ ಪರಸ್ಪರ ಸೌಹಾರ್ದತೆಯು ಹೇಗಿದೆ ಎಂಬುದನ್ನು ವಿವರಿಸಿ. / ಭಾರತ ಮತ್ತು ಅಮೇರಿಕಾ ದೇಶಗಳ ನಡುವಿನ ಸಂಬಂಧವನ್ನು ತಿಳಿಸಿ.**

1. ಬೃಹತ್ ಪ್ರಜಾಪ್ರಭುತ್ವ ರಾಷ್ಟ್ರಗಳಾಗಿವೆ.
2. ಭಾರತದ ಪಂಚವಾರ್ಷಿಕ ಯೋಜನೆಗೆ ಸಹಾಯ.
3. ಚೀನಾ ಆಕ್ರಮಣ ಮಾಡಿದಾಗ ಭಾರತಕ್ಕೆ ಸಹಾಯ.
4. ಭಯೋತ್ಪಾದನೆ ಹತ್ತಿಕ್ಕುವಲ್ಲಿ ಸಮಾನ ಹಿತಾಸಕ್ತಿ.
5. ವಿದೇಶಿ ವ್ಯಾಪಾರ, ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಉತ್ತಮ ಬಾಂಧವ್ಯ.
6. ವಿಶ್ವಸಂಸ್ಥೆಯನ್ನು ಬಲಪಡಿಸುವುದು.
7 .ಬಾಹ್ಯಾಕಾಶ, ಶಿಕ್ಷಣ ಕ್ಷೇತ್ರಗಳಲ್ಲಿ ಉತ್ತಮ ಬಾಂಧವ್ಯ.

**6. ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ./ ಭಾರತವು ರಷ್ಯಾದೊಂದಿಗೆ ಉತ್ತಮ ಸಂಬಂಧ ಹೊಂದಿದೆ ಈ ಹೇಳಿಕೆಯನ್ನು ಸಮರ್ಥಿಸಿ.? / ರಷ್ಯಾ ದೇಶವು ಶೀತಲ ಸಮರದ ಅವಧಿಯಿಂದಲೂ ಭಾರತದೊಂದಿಗೆ ಉತ್ತಮ ಸಂಬಂಧ ಹೊಂದಿದೆ ಸ್ಪಷ್ಟಪಡಿಸಿ.**

1. ಗೋವಾ ವಿಮೋಚನೆಯ ಸಂದರ್ಭದಲ್ಲಿ ಸಹಕಾರ.
2. 1962ರ ಚೈನಾ ದಾಳಿಯನ್ನು ರಷ್ಯಾ ಖಂಡಿಸಿತ್ತು.
3. 1966ರ ತಾಷ್ಕೆಂಟ್ ಒಪ್ಪಂದಕ್ಕೆ ರಷ್ಯಾ ಸಹಕರಿಸಿತು.
4. 1971 ರಲ್ಲಿ 20 ವರ್ಷಗಳ ಶಾಂತಿ, ಮೈತ್ರಿ ಹಾಗೂ ಸಹಕಾರದ ಒಪ್ಪಂದಕ್ಕೆ ಸಹಿ ಹಾಕಿದವು.
5. ಭಿಲ್ಯಾ , ಬೊಕಾರೋ ಉಕ್ಕಿನ ಕಾರ್ಖಾನೆಗಳಿಗೆ ಸಹಕಾರ.
6. ಕೈಗಾರಿಕೆ ಹಾಗೂ ವಾಣಿಜ್ಯ ಕ್ಷೇತ್ರಗಳ ಬೆಳವಣಿಗೆಗೆ ನೆರವು.
7. ಭದ್ರತಾ ಸಮಿತಿಯಲ್ಲಿ ಖಾಯಂ ಸದಸ್ಯತ್ವಕ್ಕೆ ರಷ್ಯಾ ಬೆಂಬಲ.

## ಅಧ್ಯಾಯ – 3. ಜಾಗತಿಕ ಸವಾಲುಗಳು ಹಾಗೂ ಭಾರತದ ಪಾತ್ರ

**1. ಮಾನವ ಹಕ್ಕುಗಳ ಪ್ರತಿಪಾದನೆಗಾಗಿ ಭಾರತವು ನಡೆಸುತ್ತಿರುವ ಹೋರಾಟಗಳನ್ನು ವಿವರಿಸಿ./ಭಾರತವು ತನ್ನ ಎಲ್ಲಾ ಪ್ರಜೆಗಳಿಗೆ ಮಾನವ ಹಕ್ಕುಗಳನ್ನು ಸ್ಪಷ್ಟಪಡಿಸಿದೆ ಸಮರ್ಥಿಸಿ./ ಮಾನವ ಹಕ್ಕುಗಳ ಪ್ರತಿಪಾದನೆಯ ನಿಟ್ಟಿನಲ್ಲಿ ಭಾರತವು ನಿರಂತರ ಪ್ರಯತ್ನಗಳನ್ನು ನಡೆಸುತ್ತಿದೆ, ಈ ಹೇಳಿಕೆಯನ್ನು ಸಮರ್ಥಿಸಿ.**

1. ಸಾರ್ವತ್ರಿಕ ಮಾನವ ಹಕ್ಕುಗಳ ನಿರಂತರ ಪ್ರತಿಪಾದನೆ.
2. ಸಂವಿಧಾನದ 12–35ರ ವಿಧಿಗಳಲ್ಲಿ ಮೂಲಭೂತ ಹಕ್ಕು.
3. ವಿಶ್ವಸಂಸ್ಥೆ ಹಾಗೂ ಜಾಗತಿಕ ವೇದಿಕೆಗಳ ಮೂಲಕ ಮಾನವ ಹಕ್ಕುಗಳ ಸಂರಕ್ಷಣೆ.
4. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ,
5.ರಾಷ್ಟ್ರೀಯ ಮಹಿಳಾ ಆಯೋಗ, ರಾಷ್ಟ್ರೀಯ ಪರಿಶಿಷ್ಟ ಜಾತಿ ಆಯೋಗ ರಚನೆ.

**2. ಶಸ್ತ್ರಾಸ್ತ್ರಗಳ ಸಂಖ್ಯೆಯನ್ನು ತಗ್ಗಿಸುವ ಸಲುವಾಗಿ ಪ್ರಪಂಚದಲ್ಲಿ ಆದ ಪ್ರಮುಖ ಒಪ್ಪಂದಗಳು ಯಾವುವು?/ ನಿಶ್ಯಸ್ತ್ರೀಕರಣದ ಹಿನ್ನೆಲೆಯಲ್ಲಿ ಆಗಿರುವ ಪ್ರಮುಖ ಒಪ್ಪಂದಗಳು ಯಾವುವು.? /ಅಮೇರಿಕಾ ಮತ್ತು ರಷ್ಯಾ ದೇಶಗಳು ಶೀತಲಸಮರದ ಅವಧಿಯಲ್ಲಿ ಶಸ್ತ್ರಾಸ್ತ್ರಗಳ ಸಂಖ್ಯೆಯನ್ನ ತಗ್ಗಿಸಲು ಸಹಿಹಾಕಿದ ಒಪ್ಪಂದಗಳಾವುವು.?**

1. 1963ರ ಮಿತ ಅಣ್ವಸ್ತ್ರ ಪರೀಕ್ಷಾ ನಿರ್ಬಂಧ ಒಪ್ಪಂದ
2. ಪಾಕ್ಷಿಕ ಪ್ರಯೋಗ ನಿಷೇಧ ಒಪ್ಪಂದ.
3. ಫಲಿಕ ನಿಷೇಧ ಒಪ್ಪಂದ.
4. ಸಮಗ್ರ ಪರೀಕ್ಷಣ ನಿಷೇಧ ಒಪ್ಪಂದ
5. ನಿರ್ಣಯಾತ್ಮಕ ಶಸ್ತ್ರ ನಿಯಂತ್ರಣ ಒಪ್ಪಂದ

**3. ಆರ್ಥಿಕವಾಗಿ ಹಿಂದುಳಿದ ರಾಷ್ಟ್ರಗಳ ಲಕ್ಷಣಗಳಾವವು ?/ ತೃತೀಯ ಜಗತ್ತಿನ ರಾಷ್ಟ್ರಗಳ ಜನರ ಜೀವನಮಟ್ಟ ಕೆಳಮಟ್ಟದಲ್ಲಿರುತ್ತದೆ ಸಮರ್ಥಿಸಿ. / ತೃತೀಯ ಜಗತ್ತಿನ ರಾಷ್ಟ್ರಗಳು ಎದುರಿಸುತ್ತಿರುವ ಸಮಸ್ಯೆಗಳಾವುವು.?**

1. ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದೆ ಉಳಿದಿವೆ.
2. ಔದ್ಯೋಗಿಕ, ತಂತ್ರಜ್ಞಾನ ಮತ್ತು ವಿಜ್ಞಾನದಲ್ಲಿ ಹಿಂದೆ ಉಳಿದಿವೆ.
3. ಜನರ ಜೀವನಮಟ್ಟ ಕೆಳಮಟ್ಟದಲ್ಲಿದೆ.
4. ರಾಷ್ಟ್ರೀಯ ಆದಾಯ ಮತ್ತು ತಲಾ ಆದಾಯ ಕಡಿಮೆ
5. ಶಿಕ್ಷಣ, ಆರೋಗ್ಯ, ಕೃಷಿ ಕ್ಷೇತ್ರಗಳಲ್ಲಿ ಸಾಧನೆಗಳಾಗಿಲ್ಲ.

**4. ಭಯೋತ್ಪಾದನೆಯಿಂದ ಉಂಟಾಗುವ ಪರಿಣಾಮಗಳಾವವು?/ ಭಯೋತ್ಪಾದನೆಯು ಸಾಮಾಜಿಕ ಅಶಾಂತಿ ಮತ್ತು ಭಯದ ವಾತಾವರಣವನ್ನು ಸೃಷ್ಟಿಸುತ್ತದೆ ಹೇಗೆ. ?/ ಭಯೋತ್ಪಾದನೆಯು ಕಾನೂನು ಬಾಹಿರ ಮತ್ತು ಸಮಾಜದ್ರೋಹಿ ಕೃತ್ಯ ಸಮರ್ಥಿಸಿ.**

1. ವ್ಯಕ್ತಿಗಳಿಗೆ & ಆಸ್ತಿ-ಪಾಸ್ತಿಗಳಿಗೆ ಹಾನಿ
2. ಸಾಮಾಜಿಕ ಸಂಸ್ಕೃತಿಗೆ, ಸರ್ಕಾರಕ್ಕೆ ನಕಾರಾತ್ಮಕ ಪ್ರಭಾವ.
3. ನಿರ್ದಿಷ್ಟ ಭಾಷೆಯವರು, ಧರ್ಮದವರು, ಜನಾಂಗದವರು ತೊಂದರೆಯನ್ನು ಅನುಭವಿಸುತ್ತಾರೆ.
4. ರಸ್ತೆ ಸಾರಿಗೆ, ರೈಲ್ವೆ, ವಿಮಾನ, ಪ್ರಮುಖ ಸರ್ಕಾರಿ ಕಛೇರಿಗಳು, & ಮಾರುಕಟ್ಟೆ ಪ್ರದೇಶಗಳು ನಾಶವಾಗುತ್ತವೆ.
5. ಅಪಾರ ಸಾವು ನೋವು ಸಂಭವಿಸುತ್ತದೆ.
6. ಭಯದ ವಾತಾವರಣ ಸೃಷ್ಟಿಯಾಗುತ್ತದೆ.

**5. ಭಯೋತ್ಪಾದಕ ಉಗ್ರಗಾಮಿಗಳು ಎಸಗುವ ಹೀನ ಕೃತ್ಯಗಳು ಯಾವುವು? / ಭಯೋತ್ಪಾದಕರು ನಡೆಸಬಹುದಾದ ಚಟುವಟಿಕೆಗಳು /ಕೃತ್ಯಗಳು ಯಾವುವು.? /ಇದುವರೆಗಿನ ಭಯೋತ್ಪಾದಕ ಉಗ್ರಗಾಮಿ ಚಟುವಟಿಕೆಗಳಲ್ಲಿ ನಡೆದಿರುವ ಕೃತ್ಯಗಳನ್ನು ಪಟ್ಟಿಮಾಡಿ.**

1. ಆತ್ಮಾಹುತಿ ದಾಳಿ 2. ವಿಮಾನ ಕಳ್ಳತನ 3. ಗುಂಡಿನ ಕಾಳಗ 4. ಬಾಂಬು ದಾಳಿ
5. ನಿರ್ದಿಷ್ಟ ಅಥವಾ ಮುಗ್ಧ ಜನರನ್ನು ಒತ್ತೆ ಇರಿಸುವಿಕೆ.

## ಅಧ್ಯಾಯ – 4 .ಜಾಗತಿಕ ಸಂಸ್ಥೆಗಳು:

**ಈ ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿರಿ.**

**1. ವಿಶ್ವಸಂಸ್ಥೆಯ ಉದ್ದೇಶಗಳನ್ನು ಪಟ್ಟಿ ಮಾಡಿರಿ. / ವಿಶ್ವಸಂಸ್ಥೆಯು ಜಾಗತಿಕವಾಗಿ ರಾಷ್ಟ್ರಗಳ ನಡುವೆ ಶಾಂತಿ ಭದ್ರತೆಯನ್ನು ಕಾಪಾಡುತ್ತಿದೆ, ಈ ಹೇಳಿಕೆಯನ್ನು ಸಮರ್ಥಿಸಿರಿ./ ವಿಶ್ವಸಂಸ್ಥೆಯು ರಾಷ್ಟ್ರಗಳ ನಡುವೆ ಸ್ನೇಹ ಮತ್ತು ಸೌಹಾರ್ದತಾ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ ಹೇಗೆ.?**

1. ಅಂತರಾಷ್ಟ್ರೀಯ ಶಾಂತಿ & ಭದ್ರತೆ ಕಾಪಾಡುವುದು.
2. ವಿವಿಧ ರಾಷ್ಟ್ರಗಳಲ್ಲಿ ಸ್ನೇಹ ಸಂಬಂಧ ಬೆಳೆಸುವುದು.
3. ಮಾನವನ ಮೂಲಭೂತ ಹಕ್ಕುಗಳ ರಕ್ಷಣೆ.
4. ಅಂತರಾಷ್ಟ್ರೀಯ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ & ಮಾನವೀಯ ಸಮಸ್ಯೆಗಳಿಗೆ ಪರಿಹಾರ.
5. ಅಂತರಾಷ್ಟ್ರೀಯ ನ್ಯಾಯ ಹಾಗೂ ಒಪ್ಪಂದಗಳ ಷರತ್ತುಗಳಿಗೆ ಗೌರವ.
6. ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಣೆ.

**2. ವಿಶ್ವಸಂಸ್ಥೆಯ ಅಂಗಸಂಸ್ಥೆಗಳಾವುವು? /ವಿಶ್ವಸಂಸ್ಥೆಯ ವಿವಿಧ ಅಂಗಸಂಸ್ಥೆಗಳನ್ನು ಪಟ್ಟಿಮಾಡಿರಿ./ ವಿಶ್ವಸಂಸ್ಥೆಯುತನ್ನ ವ್ಯವಸ್ಥಿತ ಕಾರ್ಯನಿರ್ವಹಣೆಗೆ ಹೊಂದಿರುವ ಅಂಗಸಂಸ್ಥೆಗಳನ್ನು ಹೆಸರಿಸಿ.**

1. ಸಾಮಾನ್ಯ ಸಭೆ  2. ಭದ್ರತಾ ಸಮಿತಿ  3. ಸಾಮಾಜಿಕ ಮತ್ತು ಆರ್ಥಿಕ ಸಂಸ್ಥೆ
4. ಧರ್ಮದರ್ಶಿ ಸಮಿತಿ  5. ಸಚಿವಾಲಯ  6. ಅಂತರಾಷ್ಟ್ರೀಯ ನ್ಯಾಯಾಲಯ

**3. ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ರಚನೆ ಮತ್ತು ಕಾರ್ಯಗಳು ಯಾವುವು? /ವಿಶ್ವಸಂಸ್ಥೆಯ ಸಚಿವ ಸಂಪುಟದ ರಚನೆ ಮತ್ತು ಕಾರ್ಯಗಳು ಯಾವುವು. / ವಿಶ್ವಸಂಸ್ಥೆಯಲ್ಲಿ ಭದ್ರತಾ ಸಮಿತಿಯು ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ ಸಮರ್ಥಿಸಿ.**

1. ಈ ಸಮಿತಿಯು 15 ಪ್ರತಿನಿಧಿಗಳಿಂದ ಕೂಡಿದೆ,
2. ಐದು ಖಾಯಂ ಸದಸ್ಯರು ಹಾಗೂ 10 ಹಂಗಾಮಿ ಸದಸ್ಯರು.
3. ಇಂಗ್ಲೆಂಡ್, ಅಮೇರಿಕಾ, ರಷ್ಯಾ, ಪ್ರಾನ್ಸ್, ಚೀನಾ ಖಾಯಂ ಸದಸ್ಯರು.
4. ಖಾಯಂ ಸದಸ್ಯರಿಗೆ ವಿಟೋ ಅಧಿಕಾರವಿದೆ.
5. ಅಂತರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಕಾಪಾಡುತ್ತದೆ.
6. ಸಾಮಾನ್ಯ ಸಭೆಗೆ ನೂತನ ಸದಸ್ಯರ ಶಿಫಾರಸ್ಸು ಮಾಡುವ ಅಥವಾ ತಿರಸ್ಕರಿಸುವ ಆಧಿಕಾರ.
7. ಪ್ರಧಾನ ಕಾರ್ಯದರ್ಶಿ ಹುದ್ದೆಗೆ ಅಭ್ಯರ್ಥಿ ಸೂಚಿಸುತ್ತದೆ
8. ಅಂತರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರ ಆಯ್ಕೆ.

**4. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ರಚನೆ & ಕಾರ್ಯಗಳು ಯಾವುವು? / ವಿಶ್ವಸಂಸ್ಥೆಯ ಸಂಸತ್ತಿನ ರಚನೆ & ಕಾರ್ಯಗಳು ಯಾವುವು? / ವಿಶ್ವಸಂಸ್ಥೆಯಲ್ಲಿ ಸಾಮಾನ್ಯ ಸಭೆಯು ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿದೆ ಸಮರ್ಥಿಸಿ.**

1. ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಒಳಗೊಂಡ ಅಂಗ ಸಂಸ್ಥೆ
2.ಪ್ರತಿಯೊಂದು ಸದಸ್ಯ ರಾಷ್ಟ್ರವು 5 ಸದಸ್ಯರನ್ನು ಇದಕ್ಕೆ ಕಳುಹಿಸಿಕೊಡುತ್ತದೆ.
3. ಪ್ರತಿ ಸದಸ್ಯ ರಾಷ್ಟ್ರಕ್ಕೆ ಒಂದು ಮತದ ಹಕ್ಕು ಮಾತ್ರ ಇರುತ್ತದೆ.
4. ಈ ಸಭೆ ಪ್ರಥಮ ಅಧಿವೇಶನದಲ್ಲಿಯೇ ಒಂದು ವರ್ಷದ ಅವಧಿಗೆ ಓರ್ವ ಅಧ್ಯಕ್ಷನನ್ನು ಆರಿಸುತ್ತದೆ
5. ಪ್ರತಿ ವರ್ಷಸೆಪ್ಟಂಬರ್ ತಿಂಗಳಲ್ಲಿ ಅಧಿವೇಶನ.
6. ಪ್ರಮುಖ ವಿಷಯಗಳನ್ನು ಬಹುಮತದಿಂದ ನಿರ್ಧಾರ
7. ಆಯವ್ಯಯ ಪಟ್ಟಿಗೆ ಅನುಮೋದನೆ.
8. ಪ್ರತಿಯೊಂದು ರಾಷ್ಟ್ರದ ಚಂದಾಹಣ ನಿಗದಿ.

**5. ಅಂತರಾಷ್ಟ್ರೀಯ ಕಾರ್ಮಿಕ ಸಂಘದ ಕಾರ್ಯಗಳನ್ನು ಪಟ್ಟಿ ಮಾಡಿ./ ಅಂತರಾಷ್ಟ್ರೀಯ ಕಾರ್ಮಿಕರ ಜೀವನಮಟ್ಟವನ್ನು ಉತ್ತಮಪಡಿಸುವಲ್ಲಿ ಕಾರ್ಮಿಕ ಸಂಘದ ಪಾತ್ರವೇನು.?**

1. ಕಾರ್ಮಿಕ ವರ್ಗದ ಸಾಮಾಜಿಕ ಭದ್ರತೆ. 2. ಆರೋಗ್ಯ ಸಂರಕ್ಷಣೆ. 3. ಉತ್ತಮ ಜೀವನ ಮಟ್ಟ.
4. ಮಹಿಳಾ ಕಾರ್ಮಿಕರಿಗೆ ಹೆರಿಗೆ ಸೌಲಭ್ಯ. 5. ಕನಿಷ್ಠ ವೇತನ ಜಾರಿ. 6. ವಸತಿ ನಿರ್ಮಾಣ.

**6. ಜಾಗತಿಕ ಮಟ್ಟದಲ್ಲಿನ ಆರ್ಥಿಕ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಐ.ಎಂ.ಎಫ್‌ನ ಪಾತ್ರವನ್ನು ವಿಶ್ಲೇಷಿಸಿ. / ಐ.ಎಮ್.ಎಫ್ ಜಾಗತಿಕ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಲು ಹೇಗೆ ಪ್ರಯತ್ನಿಸುತ್ತಿದೆ.?**

1. ಅಂತರಾಷ್ಟ್ರೀಯ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ಯತ್ನ.
2. ವಿಶ್ವ ವಾಣಿಜ್ಯ ವ್ಯವಹಾರದ ಬೆಳವಣಿಗೆಗೆ ಸಹಕಾರ.
3. ಆರ್ಥಿಕ ಸ್ಥಿರತೆಗೆ ಸಹಕಾರ.
4. ವಿದೇಶಿ ಪಾವತಿ ಸಮತೋಲನಕ್ಕೆ ಸಹಕಾರ
5. ವಿಶ್ವದ ಕೇಂದ್ರ ಬ್ಯಾಂಕು
6. ವಿವಿಧ ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳಿಗೆ ಸಹಕಾರ.

**7. ಕಾಮನ್‌ವೆಲ್ತ್ ರಾಷ್ಟ್ರ ಸಂಘದ ಉದ್ದೇಶಗಳನ್ನು ಪಟ್ಟಿಮಾಡಿರಿ./ ಬ್ರಿಟೀಷ್ ವಸಾಹತು ರಾಷ್ಟ್ರಗಳ ಒಕ್ಕೂಟವು ಹೊಂದಿರುವ ಉದ್ದೇಶಗಳು ಯಾವುವು.? ಬ್ರಿಟೀಷ್ ವಸಾಹತು ರಾಷ್ಟ್ರಗಳ ಹಿತವನ್ನು ಕಾಮನ್‌ವೆಲ್ತ್ ರಾಷ್ಟ್ರ ಸಂಘವು ಹೇಗೆ ಸಂರಕ್ಷಿಸುತ್ತಿದೆ.?**

1. ಪ್ರಜಾತಂತ್ರವನ್ನು ಎತ್ತಿಹಿಡಿಯುವುದು. 2. ಸ್ವಾತಂತ್ರ್ಯದ ಸಂರಕ್ಷಣೆ
3. ಬಡತನ ನಿರ್ಮೂಲನೆಗೆ ಕ್ರಮ. 4. ವಿಶ್ವಶಾಂತಿಯನ್ನು ನೆಲೆಗೊಳಿಸುವುದು.
5. ಕ್ರೀಡೆ,ವಿಜ್ಞಾನ ಹಾಗೂ ಕಲೆಯ ಬೆಳವಣಿಗೆಗೆ ಪ್ರೋತ್ಸಾಹ

**8. ಆರ್ಥಿಕ ಹಾಗೂ ಸಾಮಾಜಿಕ ಸಮಿತಿಯ ಕಾರ್ಯಗಳಾವುವು? / ವಿಶ್ವಸಂಸ್ಥೆಯಲ್ಲಿ ಆರ್ಥಿಕ ಮತ್ತು ಸಾಮಾಜಿಕ ಸಂಸ್ಥೆಯ ಪಾತ್ರವೇನು? /ಆರ್ಥಿಕ ಹಾಗೂ ಸಾಮಾಜಿಕ ಸಮಿತಿಯು ಅನೇಕ ಕಾರ್ಯಗಳನ್ನ ನಿರ್ವಹಿಸುತ್ತದೆ ಹೆಸರಿಸಿ.**

1. ಆರ್ಥಿಕ, ಸಾಮಾಜಿಕ ಹಾಗೂ ಆರೋಗ್ಯ ಸಮಸ್ಯೆಗಳಿಗೆ ಪರಿಹಾರ.
2. ನಿರಾಶ್ರಿತರು, ಮಹಿಳೆಯರ ಸ್ಥಾನಮಾನ, ವಸತಿ ಸಮಸ್ಯೆಗಳ ನಿವಾರಣೆ.
3. ಎಲ್ಲರಿಗೂ ಮಾನವ ಹಕ್ಕುಗಳು & ಮೂಲಭೂತಸ್ವಾತಂತ್ರ್ಯವನ್ನು ಒದಗಿಸುವುದು.
4. ಮಾನವ ಸಂಪನ್ಮೂಲ, ಸಂಸ್ಕೃತಿ, ಶಿಕ್ಷಣದ ಬಗ್ಗೆ ಅಂತರಾಷ್ಟ್ರೀಯ ಸಮ್ಮೇಳನ ಸಂಘಟನೆ.
5. **ILO, FAO & WHO** ಸಂಸ್ಥೆಗಳ ಕಾರ್ಯಗಳನ್ನು ಸಮನ್ವಯಗೊಳಿಸುವುದು.

**9. 'ಜಾಗತಿಕ ಹಂತದಲ್ಲಿ ಶಾಂತಿ ಸ್ಥಾಪನೆ ಮಾಡುವಲ್ಲಿ ವಿಶ್ವಸಂಸ್ಥೆಯ ಪಾತ್ರ ಮಹತ್ತರವಾಗಿದೆ ಹೇಗೆ?/ ವಿಶ್ವ ಸಂಸ್ಥೆಯ ಸಾಧನೆಗಳಾವುವು?/ ವಿಶ್ವಸಂಸ್ಥೆಯ ಹಣಕಾಸಿನ ಮತ್ತು ಸಾಮಾಜಿಕ ಸಾಧನೆಗಳಾವುವು.?**

**ಅ) ಶಾಂತಿ ಸ್ಥಾಪನಾ ಕಾರ್ಯಗಳು:**

* ಸೂಯೆಜ್ ಕಾಲುವೆ ಬಿಕ್ಕಟ್ಟು ನಿವಾರಣೆ. * ಇರಾಕ್ ಸಂಘರ್ಷ ಅಂತ್ಯ.
* ಕಾಶ್ಮೀರ ಸಮಸ್ಯೆ ನಿವಾರಣೆಗೆ ಪ್ರಯತ್ನ. * ಪ್ಯಾಲೆಸ್ಟನ್ ವಿಮೋಚನೆ. * ನಿಶ್ಯಸ್ತ್ರೀಕರಣ ಜಾರಿಗೆ.

**ಆ) ಆರ್ಥಿಕ ಮತ್ತು ಹಣಕಾಸಿನ ಸಾಧನೆಗಳು :**

* ಸುಂಕ ಮತು ವ್ಯಾಪಾರದ ಸಾಮಾನ್ಯ ಒಪ್ಪಂದ. * ವಿಶ್ವ ಸಂಸ್ಥೆಯ ಪ್ರಗತಿ ಯೋಜನೆ.
* ವಿಶ್ವ ಬ್ಯಾಂಕ್ ಮತ್ತು ಐ.ಎಮ್.ಎಫ್ ನೊಂದಿಗೆ ಉತ್ತಮ ಸಾಧನೆ.

**ಇ) ಸಾಮಾಜಿಕ ಸಾಧನೆಗಳು :**

* 1948ರ ಮಾನವ ಹಕ್ಕುಗಳ ಘೋಷಣೆ. * ವರ್ಣಬೇಧನೀತಿ ನಿರ್ಮೂಲನೆ.
* ಸಾಮ್ರಾಜ್ಯ ಮತ್ತು ವಸಾಹತುಶಾಹಿತ್ವ ಕೊನೆಗೊಳಿಸುವುದು.

# ಸಮಾಜಶಾಸ್ತ್ರ

## ಅಧ್ಯಾಯ-1 ಸಾಮಾಜಿಕ ಸ್ತರ ವಿನ್ಯಾಸ

**1. ಅಸ್ಪೃಶ್ಯತೆ ಒಂದು ಸಾಮಾಜಿಕ ಪಿಡುಗು ಚರ್ಚಿಸಿ / ಅಸ್ಪೃಶ್ಯತೆಯ ಸಮಸ್ಯೆಗಳು ಯಾವುವು? / ಅಸ್ಪೃಶ್ಯತೆಯ ಅತ್ಯಂತ ಅಮಾನವೀಯ ವ್ಯವಸ್ಥೆಯಾಗಿದೆ? ವಿಮರ್ಶಿಸಿ**

*. ಶೂದ್ರರಿಗಿಂತ ಕೆಳಗಿನವರು ಅಸ್ಪೃಶ್ಯರೆಂದು ಪರಿಗಣಿಸಿ ಅವರನ್ನು ಮನುಷ್ಯರೇ ಅಲ್ಲವೆಂಬಂತೆ ಕಾಣಲಾಗುತ್ತಿತ್ತು. ಅಸ್ಪೃಶ್ಯ ಎಂಬುದು ಮುಟ್ಟಬಾರದು, ಮುಟ್ಟಲಾಗದು ಎಂದು ತೀರ್ಮಾನಿಸುವುದು
* ಸಾರ್ವಜನಿಕ ಸ್ಥಳಗಳಾದ ಬಾವಿ, ಕೆರೆ, ದೇವಾಲಯ ಹೋಟೆಲ್‌ಗಳಿಗೆ ಪ್ರವೇಶ ನಿರಾಕರಣೆ
* ಸಾಮಾಜಿಕ, ಆರ್ಥಿಕ ಹಕ್ಕುಗಳನ್ನು ನಿರಾಕರಿಸಲಾಗಿದ್ದು.
* ಹುಟ್ಟಿನೊಂದಿಗೆ ಅಸ್ಪೃಶ್ಯನೆಚಿದು ಗುರುತಿಸುವುದು
* ಶೈಕ್ಷಣಿಕ ಮತ್ತು ಉದ್ಯೋಗ ಅವಕಾಶಗಳಲ್ಲಿ ವಂಚನೆ.

* ಸಾಮಾಜಿಕವಾಗಿ ಅತ್ಯಂತ ಕೆಳಮಟ್ಟದಲ್ಲಿ ಕಾಣಲಾಗುವುದು.
* ಆಸ್ತಿಯ ಒಡೆತನದ ಹಕ್ಕಿನ ನಿರಾಕರಣೆ
* ರಾಜಕೀಯ ಭಾಗವಹಿಸುವಿಕೆ ನಿರಾಕರಣೆ
* ದೈಹಿಕ ಹಲ್ಲೆ, ಮಾನಸಿಕ ಹಿಂಸೆ ಕೊಡುವುದು.

**2. ಅಸ್ಪೃಶ್ಯತಾ ನಿವಾರಣೆ ಸಂವಿಧಾನಾತ್ಮಕ ಮತ್ತು ಶಾಸನಾತ್ಮಕ ಕ್ರಮಗಳಾವುವು? ವಿವರಿಸಿ. / ಸ್ವಾತಂತ್ರ್ಯಾ ನಂತರ ಭಾರತದಲ್ಲಿ ಅಸ್ಪೃಶ್ಯತೆಯ ಆಚರಣೆಯನ್ನು ಹೋಗಲಾಡಿಸಲು ಸಾಕಷ್ಟು ಶ್ರಮಿಸಲಾಗಿದೆ ಎಂದು ಹೇಗೆ ಹೇಳುವಿರಿ.**

* ಸಂವಿಧಾನದ 17ನೇ ವಿಧಿಯು ಅಸ್ಪೃಶ್ಯತಾ ಆಚರಣೆಯನ್ನು ನಿಷೇದಿಸಿದೆ.
* ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯನ್ನು 1955 ರಲ್ಲಿ ಜಾರಿ.
* 1976 ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಜಾರಿ.
* ಈ ಕಾಯ್ದೆಯ ಪ್ರಕಾರ ಅಸ್ಪೃಶ್ಯತೆಯ ಆಚರಣೆಯು ಶಿಕ್ಷಾರ್ಹ ಅಪರಾಧ
* ಸಾರ್ವತ್ರಿಕ ಮತದಾನದ ಹಕ್ಕು
* ಕಾನೂನಿನ ಮುಂದೆ ಸಮಾನತೆಯ ಹಕ್ಕು
* ಶಿಕ್ಷಣ ಮತ್ತು ಉದ್ಯೋಗಾವಕಾಶಗಳಲ್ಲಿ ಮೀಸಲಾತಿಗಳನ್ನು ಕಲ್ಪಿಸಲಾಗಿದೆ.
* ರಾಜಕೀಯ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ನೀಡಲಾಗಿದೆ.
* 1989ರ ಶಾಸನದಂತೆ ವಿಶೇಷ ಜವಬ್ದಾರಿಗಳನ್ನು ರಾಜ್ಯ ಸರ್ಕಾರಗಳಿಗೆ ವಹಿಸಿದೆ.

**3. ಸಾಮಾಜಿಕ ತಾರತಮ್ಯದಿಂದ ಉಂಟಾಗುವ ಪೂರ್ವಾಗ್ರಹ ಮತ್ತು ಸಾಮಾಜಿಕ ಸಂಘರ್ಷಕ್ಕೆ ಕಾರಣವಾಗುವ ಅಂಶಗಳು ಯಾವುವು? ವಿವರಿಸಿ.**

ತಾರತಮ್ಯದಿಂದ ಉಂಟಾದ ಪೂರ್ವಾಗ್ರಹಕ್ಕೆ ಕಾರಣಗಳು

* ಜಾತಿ ತಾರತಮ್ಯ ಲಿಂಗ ತಾರತಮ್ಯ
* ಪ್ರಾದೇಶಿಕ ತಾರತಮ್ಯ ಬಡವ-ಬಲ್ಲಿದ
* ಸಾಮಾಜಿಕ ಸಂಘರ್ಷಕ್ಕೆ ಕಾರಣಗಳು
* ಅಸಹನೆ ತಿರಸ್ಕಾರ
* ಅಗೌರವ ದ್ವೇಷ

## ಅಧ್ಯಾಯ 2. ದುಡಿಮೆ ಮತ್ತು ಆರ್ಥಿಕ ಜೀವನ

**1. ನಿರುದ್ಯೋಗಕ್ಕೆ ಕಾರಣಗಳಾವುವು?**

* ಅತಿಯಾದ ಜನಸಂಖ್ಯೆ
* ಸಮಾಜಿಕ ಅಸಮಾನತೆ
* ಯಾಂತ್ರೀಕರಣ
* ಬಂಡವಾಳದ ಕೊರತೆ
* ಅತಿಯಾದ ಶ್ರಮವಿಭಜನೆ
* ಅನಕ್ಷರತೆ

**2. ನಿರುದ್ಯೋಗದ ಪರಿಣಾಮಗಳಾವುವು?**

* ಇದು ಭ್ರಷ್ಟಾಚಾರಕ್ಕೆ ಎಡೆಮಾಡುತ್ತದೆ

* ಇದು ಬಡತನಕ್ಕೆ ಕಾರಣವಾಗುತ್ತದೆ
* ಇದು ಕುಟುಂಬದ ವಿಘಟನೆ (ಒಡೆಯಲು) ಕಾರಣ
* ಇದು ಮೋಸ ವಂಚನೆ ಮಾಡಲು ಕಾರಣ
* ಅನೇಕ ಬಾರಿ ಅನಾರೋಗ್ಯಕ್ಕೆ ದಾರಿಯಾಗುತ್ತದೆ.
* ಕಳ್ಳತನ, ವ್ಯಭಿಚಾರದಂತಹ ಸಮಾಜಘಾತಕ ಕಾರ್ಯಗಳಿಗೆ ಎಡೆಮಾಡುತ್ತದೆ.

**3. ನಿರುದ್ಯೋಗ ಸಮಸ್ಯೆಗಳಿಗೆ ಪರಿಹಾರ ಕ್ರಮಗಳವುವು? ವಿವರಿಸಿ.**

* ಜನಸಂಖ್ಯಾ ನಿಯಂತ್ರಣ ಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
* ಗುಡಿಕೈಗಾರಿಕೆಗಳ ಪ್ರೋತ್ಸಾಹ
* ಕೃಷಿ ಕ್ಷೇತ್ರವನ್ನು ಅಭಿವೃದ್ದಿ ಮಾಡಲಾಗುತ್ತದೆ.
* ಕೈಗಾರಿಕಾ ಕ್ಷೇತ್ರದಲ್ಲಿ ಅಭಿವೃದ್ದಿ ಮಾಡಲಾಗುತ್ತದೆ.
* ಶೈಕ್ಷಣಿಕ ಸುಧಾರಣಾ ಯೋಜನೆಗಳನ್ನು ಜಾರಿಗೆ ತರಲಾಗಿದೆ.
* ಪಂಚವಾರ್ಷಿಕ ಯೋಜನೆಗಳು ಜಾರಿಯಲ್ಲಿವೆ.
* ವೃತ್ತಿಪರ ಶಿಕ್ಷಣಕ್ಕೆ ಪ್ರೋತ್ಸಾಹ
* ಗ್ರಾಮಾಭಿವೃದ್ಧಿ ಯೋಜನೆಗಳು ಉದ್ಯೋಗ ಖಾತರಿ ಯೋಜನೆಗಳನ್ನು ಅನುಷ್ಠಾನಕ್ಕೆ ತರಲಾಗಿದೆ.

**4. ದುಡಿಮೆಯಲ್ಲಿ ತಾರತಮ್ಯ ಸ್ವರೂಪವನ್ನು ವಿವರಿಸಿ.**

* ಸ್ತ್ರೀ–ಪುರುಷರಿಗೆ ನೀಡುವ ಉದ್ಯೋಗಗಳು ಸಮಾನವಾಗಿಲ್ಲ.
* ಪುರುಷರಿಗೆ ಉತ್ತಮ ಸ್ವರೂಪ ಉದ್ಯೋಗಳನ್ನು ನೀಡಲಾಗುತ್ತದೆ.
* ಹೆಚ್ಚು ಹೊಣೆಗಾರಿಕೆಯನ್ನು ಪುರುಷರಿಗೆ ನೀಡಲಾಗುತ್ತದೆ.
* ಪುರುಷರಿಗೆ ಸ್ತ್ರೀಯರಿಗಿಂತ ಹೆಚ್ಚಿನ ಸಂಬಳ ನೀಡಲಾಗುತ್ತದೆ.
* ಕೃಷಿ ಸಮಾಜದಲ್ಲಿ ಕೆಲಸಗಳ ಹಂಚಿಕೆಯಲ್ಲಿ ಅಸಮಾನತೆ ಇದೆ.
* ಕೂಲಿ ನೀಡುವುದರಲ್ಲಿಯೂ ಕೂಡ ಬೇದಭಾವವಿದೆ.

**5. ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವೆ ವ್ಯತ್ಯಾಸವೇನು?/ಸಂಘಟಿತ ದುಡಿಮೆಯ ವಲಯವು ಅಸಂಘಟಿತ ದುಡಿಮೆಯ ವಲಯಕ್ಕಿಂತ ಭಿನ್ನವಾಗಿದೆ ಹೇಗೆ?**

| **ಸಂಘಟಿತ ಕೆಲಸಗಾರರು** | **ಅಸಂಘಟಿತ ಕೆಲಸಗಾರರು** |
|---|---|
| 1. ನಿಗಧಿತ ವೇತನವಿರುತ್ತದೆ | ನಿಗಧಿತ ವೇತನವಿರುವುದಿಲ್ಲ. |
| 2. ನಿವೃತ್ತಿ ವೇತನ ಇರುತ್ತದೆ | ನಿವೃತ್ತಿ ವೇತನವಿರುವುದಿಲ್ಲ |
| 3. ಭತ್ಯೆಗಳ ಸೌಲಭ್ಯವಿರುತ್ತದೆ | ಭತ್ಯೆಗಳ ಸೌಲಭ್ಯವಿರುವುದಿಲ್ಲ. |
| 4. ಉಚಿತ ವೈದ್ಯಕೀಯ ಸೌಲಭ್ಯವಿದೆ | ಉಚಿತ ವೈದ್ಯಕೀಯ ಸೌಲಭ್ಯವಿರುವುದಿಲ್ಲ. |
| 5. ದುಡಿಮೆಯ ಅವಧಿ ನಿಗಧಿತವಾಗಿರುತ್ತದೆ | ದುಡಿಮೆಯ ಅವಧಿ ನಿಗಧಿತವಾಗಿರುವುದಿಲ್ಲ. |

| | |
|---|---|
| 6. ವ್ಯವಹಾರಗಳು ಬರಹ ರೂಪದಲ್ಲಿರುತ್ತದೆ | ವ್ಯವಹಾರಗಳು ಬಹುತೇಕ ಬಾಯಿ ಮಾತಿನಲ್ಲಿರುತ್ತದೆ |
| 7. ನಿಗಧಿತ ನಿಯಮ ಕಾಯ್ದೆಗಳಿರುತ್ತದೆ | ನಿಗಧಿತ ಕಾಯ್ದೆ ನಿಯಮಗಳು ಇರುವುದಿಲ್ಲ. |
| 8. ಉದಾ : ಸರ್ಕಾರಿ ಇಲಾಖೆ, ಶಾಲಾ ಕಾಲೇಜು ಸೈನ್ಯ, ಪೋಲಿಸ್ ಇತ್ಯಾದಿ | ಉದಾ: ಮನೆ ಕೆಲಸಗಾರರು, ಗೃಹ ನಿರ್ಮಾಣ ಕೂಲಿಕಾರರು ಕೃಷಿ ಕಾರ್ಮಿಕರು ಇತ್ಯಾದಿ |

**6. ಅಸಂಘಟಿತ ದುಡಿಮೆದಾರರು ಎದುರಿಸುತ್ತಿರುವ ಸವಾಲುಗಳು ಯಾವುವು?**

* ನಿಗಧಿತ ವೇತನವಿರುವುದಿಲ್ಲ.
* ನಿವೃತ್ತಿ ವೇತನವಿರುವುದಿಲ್ಲ
*. ಭತ್ಯೆಗಳ ಸೌಲಭ್ಯವಿರುವುದಿಲ್ಲ.
* ಉಚಿತ ವೈದ್ಯಕೀಯ ಸೌಲಭ್ಯವಿರುವುದಿಲ್ಲ.
* ದುಡಿಮೆಯ ಅವಧಿ ನಿಗಧಿತವಾಗಿರುವುದಿಲ್ಲ.
* ವ್ಯವಹಾರಗಳು ಬಹುತೇಕ ಬಾಯಿ ಮಾತಿನಲ್ಲಿರುತ್ತದೆ
* ನಿಗಧಿತ ಕಾಯ್ದೆ ನಿಯಮಗಳು ಇರುವುದಿಲ್ಲ.

## ಅಧ್ಯಾಯ 3. ಸಾಮುಹಿಕ ವರ್ತನೆ ಮತ್ತು ಪ್ರತಿಭಟನೆಗಳು

**1. ಸಮೂಹ ವರ್ತನೆಯ ವಿಧಗಳು ಯಾವುವು?/ಸಾಮಾಜಿಕ ವರ್ತನೆಯ ಕೆಲವು ಪ್ರಕಾರಗಳನ್ನು ಹೆಸರಿಸಿ / ಸಮೂಹ ವರ್ತನೆಯ ಮಾದರಿಗಳು ಯಾವುವು?**

**ಜನಮಂದೆ**

* ದೊಂಬಿ/ ಗಲಭೆ
* ಪರಿಸರ ಚಳುವಳಿಗಳು
* ಮಹಿಳಾ ಚಳುವಳಿಗಳು
* ರೈತ ಚಳುವಳಿಗಳು
* ಕಾರ್ಮಿಕ ಚಳುವಳಿಗಳು
* ಅಸ್ಪೃಶ್ಯತಾ ಆಚರಣೆ ವಿರೋಧಿ ಚಳುವಳಿಗಳು

**2. ಪರಿಸರ ಸಂರಕ್ಷಣೆಗೆ ನಡೆದ ಹೋರಾಟಗಳು ಯಾವುವು?/ ಪರಿಸರ ಚಳುವಳಿಗಳನ್ನು ಹೆಸರಿಸಿ./ ಜೀವ ಜಗತ್ತಿನ ಸಂರಕ್ಷಣೆಗೆ ಪರಿಸರವಾದಿಗಳು ಕೈಗೊಂಡ ಕ್ರಮಗಳನ್ನು ತಿಳಿಸಿ**

* ಚಿಪ್ಕೋ ಚಳುವಳಿ
* ಕರ್ನಾಟಕದ ಅಪ್ಪಿಕೋ ಚಳುವಳಿ
* ನರ್ಮದಾ ಬಚಾವೋ ಆಂದೋಲನ
* ಮೌನ ಕಣಿವೆ ಆಂದೋಲನ
* ಕರ್ನಾಟಕ ಕರಾವಳಿ ತೀರದ ಪರಿಸರ ಚಳುವಳಿ
* ಕೈಗಾ ಅಣುಸ್ಥಾವರ ವಿರೋಧಿ ಚಳುವಳಿ

**3. ಕರ್ನಾಟಕದಲ್ಲಿ ಪರಿಸರ ಸಂರಕ್ಷಣೆಗೆ ನಡೆಸಿದ ಹೋರಾಟಗಳು ಯಾವುವು?**

* ಕರ್ನಾಟಕದ ಅಪ್ಪಿಕೋ ಚಳುವಳಿ
* ಕರ್ನಾಟಕದ ಕರಾವಳಿ ತೀರದ ಪರಿಸರ ಚಳುವಳಿ
* ಕೈಗಾ ಅಣುಸ್ಥಾವರ ವಿರೊಧಿ ಚಳುವಳಿ

**4. ನರ್ಮದಾ ಬಚಾವೋ ಆಂದೋಲನ ನಡೆಯಲು ಕಾರಣವೇನು? / ಕರ್ನಾಟಕದಲ್ಲಿ ಕೈಗಾ ವಿರೋಧಿ ಚಳುವಳಿ ಸದ್ದು ಮಾಡಿತು. ಏಕೆ? ಚರ್ಚಿಸಿ / ಅಪ್ಪಿಕೋ ಮತ್ತು ಚಿಪ್ಕೋ ಚಳುವಳಿಯ ಉದ್ದೇಶವೇನಾಗಿತ್ತು?**

* ಪರಿಸರ ಮಾಲಿನ್ಯ
* ದಟ್ಟ ಸಮೃದ್ದ ಅರಣ್ಯದ ನಾಶ
* ಜೀವಿ ಪ್ರಬೇದಗಳ ನಾಶ
* ಪರಿಸರ ಅಸಮತೋಲನ
* ರೇಡಿಯೋ ವಿಕಿರಣಗಳ ಹೊರಸೂಸುವಿಕೆಯಿಂದ ಆರೋಗ್ಯ ಹಾನಿ
* ಜೀವ ಸಂಕುಲಕ್ಕೆ ತೊಂದರೆ

**5. ಮಹಿಳಾ ಸ್ವಸಹಾಯ ಸಂಘಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿದೆ. ಹೇಗೆ? / ಮಹಿಳಾ ಸ್ವ-ಸಹಾಯ ಸಮೂಹಗಳ ಪ್ರಾಮುಖ್ಯತೆಯನ್ನು ವಿವರಿಸಿ.**

* ಸ್ತ್ರೀಯರ ಸಾಮಾಜಿಕ ಶಕ್ತಿಯನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ
* ಸ್ತ್ರೀಯರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲರನ್ನಾಗಿಸುತ್ತದೆ.
* ಭಾರತದ ಹಣಕಾಸು ಉದ್ಯಮದ ನವೀನ ರೂಪವೇ ಆಗಿದೆ.
* ಗ್ರಾಮಾಂತರ ಪ್ರದೇಶಗಳಿಗೆ ಸ್ವಸಹಾಯ ಸಮೂಹಗಳನ್ನು ಸ್ಥಾಪಿಸುವುದರಿಂದ ಸಾಮಾಜಿಕ, ಆರ್ಥಿಕ ಅಭಿವೃದ್ಧಿಗೆ ಅವಕಾಶ ಮಾಡಿಕೊಟ್ಟಿದೆ.

**6. ಜನಮಂದೆ ಎಂದರೇನು? ಜನಮಂದೆಯ ಮೇಲೆ ಪ್ರಭಾವ ಬೀರುವ ಅಂಶಗಳಾವುವು?**

* ಯಾವುದೇ ಪೂರ್ವ ಯೋಜನೆ ಇಲ್ಲದೆ ಜನಗಳು ಗುಂಪು ಸೇರುವುದನ್ನು ಜನಮಂದೆ ಎಂದು ಕರೆಯುತ್ತೇವೆ. ಉದಾ : ಅನಿರೀಕ್ಷಿತ ರಸ್ತೆ ಅಪಘಾತವಾದಾಗ ಜನ ಸೇರುವ ಗುಂಪು

**ಪ್ರಭಾವ ಬೀರುವ ಅಂಶಗಳು**

* ಜನಮಂದೆಯಲ್ಲಿರುವ ಜನ ಅನಿಯಂತ್ರಿತ ನಡವಳಿಕೆ
* ಸಮಾಜದ ಲೋಪದೋಷಗಳನ್ನು ಸೂಚಿಸುವುದು.
* ಕೆಲವು ಸಂಸ್ಥೆಗಳ ಕಾರ್ಯವಿಧಾನವನ್ನು ವಿರೋಧಿಸುವುದು.
* ಕೆಲವು ಸರ್ಕಾರದ ಯೋಜನೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸುವುದು.

## ಅಧ್ಯಾಯ 4. ಸಾಮಾಜಿಕ ಸವಾಲುಗಳು

**1. ಸಾಮಾಜಿಕ ಸವಾಲುಗಳನ್ನು ಪಟ್ಟಿ ಮಾಡಿ. / ಪ್ರಾಚೀನ ಕಾಲದಿಂದಲೂ ನಮ್ಮಲಿರುವ ಸಾಮಾಜಿಕ ಅನಿಷ್ಟ ಪದ್ಧತಿಗಳಾವುವು? / ದೇಶದ ಅಭಿವೃದ್ದಿಗೆ ಮಾರಕವಾಗಿರುವ ಕೆಲವು ಸಾಮಾಜಿಕ ಸವಾಲುಗಳನ್ನು ಪಟ್ಟಿ ಮಾಡಿ. / ಭಾರತದಲ್ಲಿರುವ ಸಾಮಾಜಿಕ ಸವಾಲುಗಳ ವಿಧಗಳನ್ನು ಬರೆಯಿರಿ.**

* ಮಕ್ಕಳ ದುಡಿಮೆ
* ಹೆಣ್ಣು ಭ್ರೂಣ ಹತ್ಯೆ
* ಲಿಂಗ ತಾರತಮ್ಯ
* ಮಕ್ಕಳ ಸಾಗಾಣಿಕೆ/ಮಾರಾಟ
* ಮಕ್ಕಳ ಮೇಲಿನ ಲೈಂಗಿಕ ದರ್ಜನ್ಯ
* ಹಸಿವು ಅಪವಷ್ಟಿಕತೆ
* ಬಾಲ್ಯವಿವಾಹ

**2. ಬಾಲಕಾರ್ಮಿಕರು/ಬಾಲ್ಯವಿವಾಹ/ವರದಕ್ಷಿಣೆ/ಹೆಣ್ಣು ಭ್ರೂಣಹತ್ಯೆ/ಶಿಶುಹತ್ಯೆಗೆ ಕಾರಣಗಳು ಯಾವುವು?**

* ಬಡತನ
* ಅನಕ್ಷರತೆ
* ಸ್ತ್ರೀ ಅಸಮಾನತೆ
* ವಿಚ್ಛೇದನ
* ಅಜ್ಞಾನ
* ಕಾನೂನು ಕಳಪೆ ಅನುಷ್ಠಾನ
* ಕೌಟುಂಬಿಕ ಕಲಹ
* ವಲಸೆ
* ಜೀತ ಪದ್ಧತಿ

**3. ಬಾಲಕಾರ್ಮಿಕರು/ಬಾಲ್ಯವಿವಾಹ / ವರದಕ್ಷಿಣೆ ದುಷ್ಪರಿಣಾಮಗಳನ್ನುತಿಳಿಸಿ./ಭಾರತದ ಅಭಿವೃದ್ಧಿಗೆ ವರದಕ್ಷಿಣೆಯಂತಹ ಸಮಸ್ಯೆಗಳು ಮಾರಕವಾಗಿವೆ ಸ್ಪಷ್ಟೀಕರಿಸಿ.**

* ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಕುಂಠಿತ
* ಶಿಕ್ಷಣದಿಂದ ವಂಚಿತರಾಗುತ್ತಾರೆ
* ಮಕ್ಕಳ ಹಕ್ಕು ಉಲ್ಲಂಘನೆ
* ಅಪೌಷ್ಟಿಕತೆ
* ಲೈಗಿಂಕ ದೌರ್ಜನ್ಯ
* ರಕ್ತಹೀನತೆ
* ಅನಾರೋಗ್ಯ
* ವೈದ್ಯಕೀಯ ಸೌಲಭ್ಯಗಳ ಕೊರತೆ
* ಗೆಳೆಯರ ಒಡನಾಟಕ್ಕೆ ಧಕ್ಕೆ

**4. ಬಾಲ ಕಾರ್ಮಿಕತೆ / ಬಾಲ್ಯವಿವಾಹ / ವರದಕ್ಷಿಣೆ ಈ ಸಮಸ್ಯೆಗಳಿಗೆ ಪರಿಹಾರೋಪಾಯಗಳನ್ನು ತಿಳಿಸಿ. / ಭಾರತದಲ್ಲಿ ಸಾಮಾಜಿಕ ಸವಾಲುಗಳ ನಿರ್ಮೂಲನೆಗೆ ಅನುಸರಿಸಬೇಕಾದ ಕ್ರಮಗಳನ್ನು ಪಟ್ಟಿ ಮಾಡಿ./ ಶೈಕ್ಷಣಿಕ ಮುಕ್ತಿ ಸಮಾಜವನ್ನು ಕಟ್ಟಲು ನಾವು ಅನುಸರಿಸಬಹುದಾದ ಮಾರ್ಗೋಪಾಯಗಳನ್ನು ತಿಳಿಸಿ.**

* ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡುವುದು
* ಕಠಿಣ ಕಾನೂನುಗಳ ಕ್ರಮ ಜಾರಿ
* ಶೋಷಣೆಗಳ ನಿಯಂತ್ರಣ

* ಮಕ್ಕಳ ಹಕ್ಕುಗಳ ಕ್ಲಬ್ ರಚನೆ
* ಸಾಮಾಜಿಕ ಮೌಲ್ಯಗಳ ಬಗ್ಗೆ ಜಾಗೃತಿ
* ಮಕ್ಕಳ ಸಂರಕ್ಷಣೆ ಸಮಿತಿ ರಚನೆ
* ಗ್ರಾಮ ಸಭೆಯಲ್ಲಿ ಮಕ್ಕಳು ಭಾಗವಹಿಸುವಿಕೆ.
* ಕಡ್ಡಾಯ ಹಾಜರಾತಿ.

**4. ವರದಕ್ಷಿಣೆ ನಿರ್ಮೂಲನೆಗೆ ಸರ್ಕಾರ ಕೈಗೊಂಡಿರುವ ಕಾರ್ಯಕ್ರಮಗಳು ಯಾವುವು?**

* 1961 ರಲ್ಲಿ ವರದಕ್ಷಿಣೆ ನಿಷೇಧ ಕಾಯ್ದೆ ಜಾರಿ.
* 1980 ರಲ್ಲಿ ವರದಕ್ಷಿಣೆ ತಿದ್ದುಪಡಿ ನಿಷೇಧ ಕಾಯ್ದೆ ಜಾರಿ.
* 5 ವರ್ಷ ಜೈಲು, 15000 ರೂಗಳ ದಂಡ
* ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ
* ಕಾನೂನಿನ ಮೂಲಕ ಜನಜಾಗೃತಿ
* ಕಠಿಣ ಕಾನೂನು ನಿಯಮಗಳು ಜಾರಿ
* ಮಹಿಳಾ ಶಿಕ್ಷಣಕ್ಕೆ ಒತ್ತು

4. **ಪ್ರಸ್ತುತ ದಿನಗಳಲ್ಲಿ ಹೆಣ್ಣು ಭ್ರೂಣಹತ್ಯೆ ತಡೆಗಟ್ಟುವುದು ಅವಶ್ಯಕ ಏಕೆ?**

* ಭಾರತದಲ್ಲಿ ಗಂಡು ಮಕ್ಕಳಿಗೆ ಹೆಚ್ಚಿನ ಗೌರವ ಮತ್ತು ಸ್ಥಾನಮಾನವಿದ್ದು ಹೆಣ್ಣು ಭ್ರೂಣ ಹತ್ಯೆಗೆ ಮತ್ತು ಶಿಶು ಹತ್ಯೆಗಳು ನಡೆಯುತ್ತವೆ ಇದರಿಂದ ಹೆಣ್ಣು ಮಕ್ಕಳ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತದೆ. ಇದು ಲಿಂಗ ಅಸಮಾನತೆಗೆ ಕಾರಣವಾಗಿದೆ ಆದ್ದರಿಂದ ಹೆಣ್ಣು ಭ್ರೂಣ ಹತ್ಯೆಯನ್ನು ತಡೆಯಬೇಕಾಗಿದೆ.

## ಭೂಗೋಳಶಾಸ್ತ್ರ

### ಅಧ್ಯಾಯ1. ಭಾರತ: ಭೌಗೋಳಿಕ ಸ್ಥಾನ ಹಾಗೂ ಪ್ರಾಕೃತಿಕ ಲಕ್ಷಣಗಳು

**1. ಪೂರ್ವ ಘಟ್ಟಗಳಿಗೂ ಪಶ್ಚಿಮ ಘಟ್ಟಗಳಿಗೂ ಇರುವ ವ್ಯತ್ಯಾಸಗಳನ್ನು ತಿಳಿಸಿ./ಪೂರ್ವ ಘಟ್ಟಗಳು ಪಶ್ಚಿಮ ಘಟ್ಟಗಳಿಗಿಂತ ಹೇಗೆ ಭಿನ್ನವಾಗಿವೆ?/ಪೂರ್ವ ಘಟ್ಟಗಳು ಮತ್ತು ಪಶ್ಚಿಮ ಘಟ್ಟಗಳ ನಡುವಿನ ವ್ಯತ್ಯಾಸಗಳನ್ನು ಪಟ್ಟಿಮಾಡಿ.**

| ಪೂರ್ವ ಘಟ್ಟಗಳು | ಪಶ್ಚಿಮ ಘಟ್ಟಗಳು |
|---|---|
| ಎತ್ತರವಾಗಿಲ್ಲ ಮತ್ತು ನಿರಂತರವಾಗಿಲ್ಲ | ಎತ್ತರವಾಗಿವೆ ಮತ್ತು ನಿರಂತರವಾಗಿವೆ |
| ನದಿ ಕಣಿವೆಗಳಿಂದ ಪ್ರತ್ಯೇಕಿಸಲ್ಪಟ್ಟಿವೆ | ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಸಹ್ಯಾದ್ರಿ ಎಂದು ಕರೆಯುತ್ತಾರೆ |
| ಆರ್ಮಕೊಂಡ ಮತ್ತು ಮಹೇಂದ್ರಗಿರಿ ಎತ್ತರವಾದ ಪರ್ವತ ಶಿಖರಗಳು | ಆನೈಮುಡಿ ಎತ್ತರವಾದ ಪರ್ವತ ಶಿಖರ |

**2. ಪೂರ್ವ ಕರಾವಳಿಗೂ ಪಶ್ಚಿಮ ಕರಾವಳಿಗೂ ಇರುವ ವ್ಯತ್ಯಾಸಗಳನ್ನು ತಿಳಿಸಿ./ಪೂರ್ವ ಕರಾವಳಿ ತೀರ ಪಶ್ಚಿಮ ಕರಾವಳಿ ತೀರಕ್ಕಿಂತ ಹೇಗೆ ಭಿನ್ನವಾಗಿವೆ?/ಪೂರ್ವ ಕರಾವಳಿ ಮತ್ತು ಪಶ್ಚಿಮ ಕರಾವಳಿ ನಡುವಿನ ವ್ಯತ್ಯಾಸಗಳನ್ನು ಪಟ್ಟಿಮಾಡಿ.**

| ಪೂರ್ವ ಕರಾವಳಿ ತೀರ | ಪಶ್ಚಿಮ ಕರಾವಳಿ |
|---|---|
| ಪೂರ್ವ ಘಟ್ಟ ಹಾಗೂ ಬಂಗಾಳಕೊಲ್ಲಿಯ ನಡುವೆ ಇದೆ | ಅರಬ್ಬೀ ಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವೆ ಇದೆ |
| ಕನ್ಯಾಕುಮಾರಿಯಿಂದ ಗಂಗಾನದಿ ಮುಖಜ ಭೂಮಿವರೆಗೆ ಹಬ್ಬಿದೆ | ಗುಜರಾತಿನ ಕಛ್‌ನಿಂದ ಕನ್ಯಾಕುಮಾರಿ ಭೂಶಿರದವರೆಗೆ ಹಬ್ಬಿದೆ |
| ಹೆಚ್ಚು ಅಗಲ ಮತ್ತು ಒಂದೇ ರೀತಿ ಸಮತಟ್ಟಾಗಿದೆ | ಮುಂಬೈ, ಕಾಂಡ್ಲಾ, ಮಂಗಳೂರು ಮುಖ್ಯ ಬಂದರುಗಳು |
| ಉತ್ಕಲ ತೀರ ಮತ್ತು ಕೋರಮಂಡಲ ತೀರ | ಕೊಂಕಣ, ಕೆನರಾ ಮತ್ತು ಮಲಬಾರ್ ತೀರಗಳು |

**3. ಹಿಮಾಲಯ ಪರ್ವತ ಶ್ರೇಣಿಗಳು ಭಾರತದ ಜನಜೀವನದ ಮೇಲೆ ಅಪಾರ ಪ್ರಭಾವವನ್ನು ಬೀರುತ್ತವೆ. ಹೇಗೆ?/ಹಿಮಾಲಯದ ಮಹತ್ವವನ್ನು ವಿವರಿಸಿ./ಹಿಮಾಲಯ ಪರ್ವತದಿಂದಾಗುವ ಪ್ರಯೋಜನಗಳು ಯಾವುವು?**

1. ಭಾರತಕ್ಕೆ ರಕ್ಷಣೆಯನ್ನು ಒದಗಿಸುತ್ತವೆ.
2. ಉತ್ತರ ಏಷ್ಯಯಾದಿಂದ ಬೀಸುವ ಶೀತಗಾಳಿಗಳನ್ನು ತಡೆಯುತ್ತವೆ.
3. ನದಿಗಳ ಉಗಮ ಪ್ರದೇಶವಾಗಿವೆ.
4. ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗಿವೆ.
5. ಇದು ವಿಶಾಲವಾದ ಮೈದಾನಗಳನ್ನು ನಿರ್ಮಿಸಿವೆ.
6. ವೈವಿಧ್ಯಮಯ ಸಸ್ಯ ಮತ್ತು ಪ್ರಾಣಿ ಸಂಕುಲಗಳಿಗೆ ಆಶ್ರಯ ತಾಣವಾಗಿದೆ.
7. ಅಪಾರ ಪ್ರಮಾಣದ ಖನಿಜ ಸಂಪನ್ಮೂಲಗಳನ್ನು ಒಳಗೊಂಡಿವೆ.
8. ಪ್ರವಾಸೋದ್ದಿಮೆ ಮತ್ತು ಧಾರ್ಮಿಕ ಕೇಂದ್ರಗಳಿಗೆ ಪ್ರಾಮುಖ್ಯತೆಯನ್ನು ಪಡೆದಿದೆ.

**4. ಭಾರತವನ್ನು ಒಂದು ಉಪಖಂಡ ಎಂದು ಕರೆಯಲು ಕಾರಣವೇನು ?**

1, ವಿವಿಧ ರೀತಿಯ ಮೇಲ್ಮೈ ಲಕ್ಷಣಗಳು   2. ವಾಯುಗುಣ

3. ಸ್ವಾಭಾವಿಕ ಸಸ್ಯವರ್ಗಗಳ   4.ಜನರಲ್ಲಿನ ವೈವಿಧ್ಯತೆಗಳು

**5. ಭಾರತದ ಅಕ್ಷಾಂಶ ಮತ್ತು ರೇಖಾಂಶಗಳ ವಿಸ್ತರಣೆಯನ್ನು ತಿಳಿಸಿ. ?**

1. ಭಾರತದ ಪ್ರಧಾನ ಭೂಭಾಗವು $8^0.4^I$ ದಿಂದ $37^0\ 6^I$ ಉತ್ತರ ಅಕ್ಷಾಂಶ
2. $68^0.7^I$ ರಿಂದ $97^0.25^I$ ಪೂರ್ವ ರೇಖಾಂಶಗಳ ನಡುವೆ ವಿಸ್ತರಿಸಿದೆ.

**6. ಭಾರತದ ನಾಲ್ಕು ಪ್ರಧಾನ ಪ್ರಾಕೃತಿಕ ವಿಭಾಗಗಳನ್ನು ತಿಳಿಸಿ ?**

1. ಉತ್ತರದ ಪರ್ವತಗಳು   2. ಉತ್ತರದ ಮಹಾ ಮೈದಾನ

3. ಪರ್ಯಾಯ ಪ್ರಸ್ಥಭೂಮಿ   4. ಕರಾವಳಿ ಮೈದಾನಗಳು

**7. ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆ ಪಡೆದಿದೆ. ಏಕೆ ?**

1. ಅಪಾರವಾದ ಖನಿಜ ಸಂಪನ್ಮೂಲಗಳಿವೆ.
2. ಇಲ್ಲಿನ ನದಿಗಳು ಜಲಪಾತಗಳಿಂದ ಕೂಡಿರುವುದರಿಂದ ಜಲವಿದ್ಯುಚ್ಛಕ್ತಿಯ ಉತ್ಪಾದನೆಗೆ ಅನುಕೂಲ.

**8. ಅಂಡಮಾನ್–ನಿಕೋಬಾರ್ ದ್ವೀಪಗಳು ಮತ್ತು ಲಕ್ಷದ್ವೀಪಗಳ ನಡುವಿನ ವ್ಯತ್ಯಾಸಗಳೇನು ?**

| ಅಂಡಮಾನ್–ನಿಕೋಬಾರ್ ದ್ವೀಪಗಳು | ಲಕ್ಷದ್ವೀಪಗಳು |
|---|---|
| 1. ಬಂಗಾಳಕೊಲ್ಲಿಯಲ್ಲಿವೆ | 1. ದ್ವೀಪಗಳು ಅರಬ್ಬಿ ಸಮುದ್ರದಲ್ಲಿವೆ. |
| 2. ಸುಮಾರು 204 ದ್ವೀಪಗಳಿವೆ | 2. ಸುಮಾರು 43 ದ್ವೀಪಗಳು ಇವೆ. |
| 3. ಜ್ವಾಲಾಮುಖಿ ನಿರ್ಮಿತ ಶಿಲೆಗಳಿಂದ ಕೂಡಿವೆ | 3, ಹವಳ ದ್ವೀಪಗಳಗಿವೆ. |


1. **ಭಾರತದ ನಕ್ಷೆ ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ.**

**1 $23\frac{1}{2}^{0}$ ಉತ್ತರ ಅಕ್ಷಾಂಶ 2. ಇಂದಿರಾ ಕೋಲ್ 3. ಮನ್ನಾರ್ ಖಾರಿ 4. ಇಂದಿರಾ ಪಾಯಿಂಟ್**



**2. ಭಾರತದ ನಕ್ಷೆ ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ.**

**1. $82\frac{1}{2}^{0}$ ಪೂರ್ವ ರೇಖಾಂಶ 2. ಗುವಾರ ಮೋಟ 3. ಕೆಬಿತು 4. ಪಾಕ್ ಜಲಸಂಧಿ**



**3. ಭಾರತದ ನಕ್ಷೆ ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ.**

**1.** ಪಶ್ಚಿಮ ಘಟ್ಟಗಳು 2. ಪೂರ್ವ ಕರಾವಳಿ ತೀರ 3. ಕೋರಮಂಡಲ ತೀರ 4. ಉತ್ಕಲ ತೀರ



**4. ಭಾರತದ ನಕ್ಷೆ ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ.**

**1.** ಪಶ್ಚಿಮ ಕರಾವಳಿ ತೀರ 2. ಕೊಂಕಣ ತೀರ 3. ಮಲಬಾರ್ ತೀರ 4. ಪೂರ್ವ ಘಟ್ಟಗಳು



**5. ಭಾರತದ ವಾಯುಗುಣದ ಮೇಲೆ ಹೆಚ್ಚು ಪ್ರಭಾವ ಬೀರುವ ಅಂಶಗಳಾವುವು? ಅಥವಾ ಭಾರತದಲ್ಲಿ ವಾಯುಗುಣವು ಸ್ಥಳದಿಂದ ಸ್ಥಳಕ್ಕೆ, ಕಾಲದಿಂದ ಕಾಲಕ್ಕೆ ವ್ಯತ್ಯಾಸ ಹೊಂದುತ್ತದೆ. ಏಕೆ?**

1. ಅಕ್ಷಾಂಶ
2. ಸಮುದ್ರ ಮಟ್ಟದಿಂದ ಇರುವ ಎತ್ತರ
3. ಸಾಗರಗಳಿಂದ ಇರುವ ದೂರ
4. ಮಾರುತಗಳ ದಿಕ್ಕು
5. ಪರ್ವತ ಸರಣಿಗಳು ಹಬ್ಬಿರುವ ರೀತಿ
6. ಸಾಗರ ಪ್ರವಾಹಗಳು

## 3. ಭಾರತದ ಮಣ್ಣುಗಳು

**1. ಭಾರತದಲ್ಲಿ ಕಂಡು ಬರುವ ಮಣ್ಣಿನ ಮುಖ್ಯ ಪ್ರಕಾರಗಳಾವುವು/ ಮಣ್ಣಿನ ವಿಧಗಳನ್ನು ಪಟ್ಟಿ ಮಾಡಿ /ಮಣ್ಣಿನ ಪ್ರಮುಖ ಪ್ರಕಾರಗಳನ್ನು ಹೆಸರಿಸಿ.**

1. ಮೆಕ್ಕಲು ಮಣ್ಣು
2. ಕಪ್ಪು ಮಣ್ಣು
3. ಕೆಂಪು ಮಣ್ಣು
4. ಜಂಬಿಟ್ಟಿಗೆ ಮಣ್ಣು
5. ಮರುಭೂಮಿ ಮಣ್ಣು
6. ಪರ್ವತ ಮಣ್ಣು

**2. ಮಣ್ಣಿನ ಸವೆತಕ್ಕೆ ಕಾರಣವಾದ ಅಂಶಗಳಾವುವು?/ ಮಣ್ಣಿನ ಸವೆತವು ದೇಶದ ಮುಖ್ಯ ಸಮಸ್ಯೆಗಳಲ್ಲಿ ಒಂದಾಗಿದೆ. ಕಾರಣಗಳೇನು? /ಮಣ್ಣಿನ ಸವೆತವು ಇತ್ತೀಚಿನ ವರ್ಷಗಳಲ್ಲಿ ಅಧಿಕವಾಗಿದೆ. ಏಕೆ?**

1 ಅರಣ್ಯಗಳ ನಾಶ
2 ಹೆಚ್ಚು ಮೇಯಿಸುವುದು
3 ಅವೈಜ್ಞಾನಿಕ ಬೇಸಾಯ
4 ಅಧಿಕ ನೀರಾವರಿ ಬಳಕೆ
5 ಇಟ್ಟಿಗೆ, ಹೆಂಚು, ಮಡಿಕೆ ತಯಾರಿಕೆ

**3. ಮಣ್ಣಿನ ಸವೆತವು ಅನೇಕ ಸಮಸ್ಯೆಗಳಿಗೆ ಕಾರಣವಾಗುವುದು. ಹೇಗೆ?/ಮಣ್ಣಿನ ಸವೆತವನ್ನು ತಡೆಗಟ್ಟುವುದು ಅಗತ್ಯವಾಗಿದೆ. ಏಕೆ? /ಮಣ್ಣಿನ ಸವೆತದಿಂದಾಗುವ ಪರಿಣಾಮಗಳೇನು? /ನಾವು ಮಣ್ಣನ್ನು ಏಕೆ ಸಂರಕ್ಷಿಸಬೇಕು?**

1 ಮಣ್ಣಿನ ಸವೆತದಿಂದ ನದಿಗಳಲ್ಲಿ ಹೂಳುತುಂಬಿ ಪ್ರವಾಹ ಉಂಟಾಗುತ್ತದೆ.
2 ನದಿಗಳು ತಮ್ಮ ಪಾತ್ರವನ್ನು ಬದಲಾಯಿಸುತ್ತವೆ.
3 ಜಲಾಶಯಗಳಲ್ಲಿ ನೀರನ್ನು ಸಂಗ್ರಹಿಸುವ ಸಾಮರ್ಥ್ಯವು ಕಡಿಮೆಯಾಗುವುದು
4 ಭೂಮಿಯಲ್ಲಿ ಇಂಗುವ ನೀರಿನ ಪ್ರಮಾಣ ಕಡಿಮೆಯಾಗುವುದು.

5 ಸ್ವಾಭಾವಿಕ ಚಿಲುಮೆಗಳು ಬತ್ತಿ ಹೋಗುತ್ತವೆ.

6 ವ್ಯವಸಾಯದ ಉತ್ಪಾದನೆಯ ಮೇಲೆ ಹೆಚ್ಚು ಪರಿಣಾಮವನ್ನು ಬೀರುವುದು.

**4. ಮಣ್ಣಿನ ಸಂರಕ್ಷಣೆಯ ವಿಧಾನಗಳನ್ನು ಪಟ್ಟಿ ಮಾಡಿರಿ. /ನಾವು ಮಣ್ಣನ್ನು ಹೇಗೆ ಸಂರಕ್ಷಿಸಬೇಕು? /ಮಣ್ಣಿನ ಸವೆತವನ್ನು ತಡೆಗಟ್ಟುವ ವಿಧಾನಗಳಾವುವು?**

1 ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು.

2 ಅಡ್ಡ ಬದುಗಳನ್ನು ನಿರ್ಮಿಸುವುದು.

3 ಹಂತ ಹಂತವಾಗಿ ವ್ಯವಸಾಯ ಕ್ಷೇತ್ರಗಳ ನಿರ್ಮಾಣ.

4 ಅರಣ್ಯ ನಾಶವನ್ನು ತಡೆಗಟ್ಟುವುದು.

5 ಅರಣ್ಯಗಳ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದು.

6 ಅತಿಯಾಗಿ ಮೇಯಿಸುವುದನ್ನು ನಿಯಂತ್ರಿಸುವುದು.

7 ನೀರಿನ ಯೋಜಿತ ಬಳಕೆ.

8 ಚೆಕ್ ಡ್ಯಾಮ್‌ಗಳ ನಿರ್ಮಾಣ.

**5. ಮೆಕ್ಕಲು ಮಣ್ಣು ಮತ್ತು ಕಪ್ಪು ಮಣ್ಣುಗಳ ನಡುವಿನ ವ್ಯತ್ಯಾಸಗಳನ್ನು ಪಟ್ಟಿ ಮಾಡಿ. / ಮೆಕ್ಕಲು ಮಣ್ಣು ಕಪ್ಪು ಮಣ್ಣಿಗಿಂತ ಭಿನ್ನವಾಗಿದೆ. ಹೇಗೆ?/ ಮೆಕ್ಕಲು ಮಣ್ಣಿಗೂ ಕಪ್ಪು ಮಣ್ಣಿಗೂ ಇರುವ ವ್ಯತ್ಯಾಸಗಳನ್ನು ತಿಳಿಸಿ.**

| ಮೆಕ್ಕಲು ಮಣ್ಣು | ಕಪ್ಪು ಮಣ್ಣು |
|---|---|
| ನದಿಗಳು ಪರ್ವತ ಪ್ರದೇಶಗಳಿಂದ ಹೊತ್ತು ತಂದು ಸಂಚಯಿಸಿರುವ ಮಣ್ಣು | ಅಗ್ನಿ ಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿಯಾಗಿದೆ. |
| ಹೆಚ್ಚು ವಿಸ್ತಾರವಾದ ಪ್ರದೇಶದಲ್ಲಿ ಹರಡಿರುವುದು | ತೇವಾಂಶವನ್ನು ಹಿಡಿದಿಟ್ಟುಕೊಳ್ಳಲು ಸಮರ್ಥವಾಗಿದೆ |
| 7.7 ದಶಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡುಬರುವುದು | 5.46 ಲಕ್ಷ ಚ.ಕಿ.ಮೀ ಪ್ರದೇಶದಲ್ಲಿ ಕಂಡುಬರುತ್ತದೆ |

**6. ಮರುಭೂಮಿ ಮಣ್ಣು ಮತ್ತು ಪರ್ವತ ಮಣ್ಣುಗಳ ನಡುವಿನ ವ್ಯತ್ಯಾಸಗಳನ್ನು ಪಟ್ಟಿ ಮಾಡಿ. / ಮರುಭೂಮಿ ಮಣ್ಣು ಪರ್ವತ ಮಣ್ಣಿಗಿಂತ ಭಿನ್ನವಾಗಿದೆ. ಹೇಗೆ? / ಮರುಭೂಮಿ ಮಣ್ಣಿಗೂ ಪರ್ವತ ಮಣ್ಣಿಗೂ ಇರುವ ವ್ಯತ್ಯಾಸಗಳನ್ನು ತಿಳಿಸಿ.**

| ಮರುಭೂಮಿ ಮಣ್ಣು | ಪರ್ವತ ಮಣ್ಣು |
|---|---|
| ಅತಿ ಕಡಿಮೆ ಮಳೆ ಮತ್ತು ಅಧಿಕ ಉಷ್ಣಾಂಶದ ಪ್ರದೇಶದಲ್ಲಿ ಕಂಡು ಬರುತ್ತದೆ | ಕೊಳೆತ ಜೈವಿಕಾಂಶಗಳನ್ನು ಅಧಿಕ ಪ್ರಮಾಣದಲ್ಲಿ ಈ ಮಣ್ಣು ಹೊಂದಿದೆ |
| ಕೆಂಪು ಮತ್ತು ಕಂದು ಬಣ್ಣವನ್ನು ಹೊಂದಿದೆ | ಸಾರಜನಕ ಮತ್ತು ಸಾವಯವ ಅವಶೇಷಗಳನ್ನು ಹೆಚ್ಚಾಗಿ ಒಳಗೊಂಡಿರುತ್ತದೆ |
| ನೀರು ನಿಲ್ಲದೆ ತೀವ್ರವಾಗಿ ಬಸಿದು ಹೋಗುತ್ತದೆ ಮತ್ತು ಬೇಗ ಆರ್ದ್ರತೆ ಕಡಿಮೆ ಆಗುತ್ತದೆ | ಕಾಫಿ, ಚಹಾ, ಸಾಂಬಾರ ಪದಾರ್ಥಗಳು ಮತ್ತು ಹಣ್ಣುಗಳಿಗೆ ಸೂಕ್ತವಾಗಿದೆ. |

## 4. ಭಾರತದ ಅರಣ್ಯಗಳು

**1.ಭಾರತದಲ್ಲಿ ಕಂಡು ಬರುವ ಅರಣ್ಯಗಳ ಮುಖ್ಯ ಪ್ರಕಾರಗಳಾವುವು?/ ಅರಣ್ಯಗಳ ವಿಧಗಳನ್ನು ಪಟ್ಟಿ ಮಾಡಿ /ಅರಣ್ಯಗಳ ಪ್ರಮುಖ ಪ್ರಕಾರಗಳನ್ನು ಹೆಸರಿಸಿ.**

1 ನಿತ್ಯ ಹರಿದ್ವರ್ಣದ ಅರಣ್ಯಗಳು

2 ಎಲೆಯುದುರಿಸುವ ಮಾನ್ಸೂನ್ ಅರಣ್ಯಗಳು

3 ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳು

4 ಮ್ಯಾಂಗ್ರೋವ್ ಅರಣ್ಯಗಳು

5 ಮರುಭೂಮಿ ಅರಣ್ಯಗಳು

6 ಹಿಮಾಲಯದ ಅಲ್ಪೈನ್ ಅರಣ್ಯಗಳು.

**2. ಅರಣ್ಯನಾಶಕ್ಕೆ ಕಾರಣಗಳನ್ನು ತಿಳಿಸಿ./ಭಾರತದಲ್ಲಿ ಅರಣ್ಯಗಳ ಕ್ಷೇತ್ರವು ನಿರಂತರವಾಗಿ ಇಳಿಮುಖವಾಗುತ್ತಿದೆ. ಏಕೆ?/ ಅರಣ್ಯಗಳನ್ನು ಸಂರಕ್ಷಿಸಬೇಕಾದುದು ಅತ್ಯಂತ ಮುಖ್ಯವಾಗಿದೆ. ಕಾರಣಗಳೇನು?**

1) ವ್ಯವಸಾಯದ ವಿಸ್ತರಣೆ

2) ಹೈನುಗಾರಿಕೆ

3) ರಸ್ತೆಗಳು, ರೈಲುಮಾರ್ಗಗಳು,

4) ನೀರಾವರಿಯೋಜನೆಗಳ ನಿರ್ಮಾಣ,

5) ಕಾಡ್ಗಿಚ್ಚು,

6) ಗಣಿಗಾರಿಕೆ

**3. ಅರಣ್ಯ ಸಂರಕ್ಷಣೆ ವಿಧಾನಗಳನ್ನು ತಿಳಿಸಿ. / ದೇಶದಲ್ಲಿನ ಅರಣ್ಯ ಸಂರಕ್ಷಣೆಗೆ ಸಲಹೆಗಳು ಯಾವುವು?**

1. ಕಾಡ್ಗಿಚ್ಚು ಉಂಟುಮಾಡುವ ಘರ್ಷಿತ ಮರಗಳನ್ನು ತೆಗೆಯುವುದು.
2. ಅರಣ್ಯದ ಮರಗಳಿಗೆ ತಗಲುವ ರೋಗಗಳನ್ನು ನಿಯಂತ್ರಿಸುವುದು.
3. ಸಸಿಗಳನ್ನು ನೆಡುವುದು, ಬೀಜಗಳನ್ನು ಹರಡುವುದು.
4. ಕಾನೂನು ಬಾಹಿರವಾಗಿ ಮರ ಕಡಿಯುವದನ್ನು ನಿಯಂತ್ರಿಸುವುದು.
5. ಅರಣ್ಯಗಳಲ್ಲಿ ಸಾಕು ಪ್ರಾಣಿಗಳ ಮೇಯಿಸುವಿಕೆಯನ್ನು ನಿಯಂತ್ರಿಸುವುದು.
6. ಸಾರ್ವಜನಿಕರನ್ನು ಮರ ನೆಡಲು ಪ್ರೋತ್ಸಾಹಿಸುವುದು
7. ಸಾಮಾಜಿಕ ಅರಣ್ಯ ಯಶಸ್ವಿಯಾಗಿ ಕಾರ್ಯಗತಗೊಳಿಸುವುದು.

## 5. ಭಾರತದ ಜಲ ಸಂಪನ್ಮೂಲಗಳು

**1. ವಿವಿದೋದ್ದೇಶ ನದಿ ಕಣಿವೆ ಯೋಜನೆಯ ಉದ್ದೇಶಗಳಾವುವು?**

1) ನೀರಾವರಿ ಸೌಲಭ್ಯವನ್ನು ಒದಗಿಸುವುದು

2) ಜಲವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು

3) ನದಿಗಳ ಪ್ರವಾಹವನ್ನು ನಿಯಂತ್ರಿಸುವುದು

4) ನೌಕಾಯಾನದ ಸೌಲಭ್ಯವನ್ನು ಒದಗಿಸುವುದು,

5) ಗೃಹ ಬಳಕೆ ಹಾಗೂ ಕೈಗಾರಿಕೆಗಳಿಗೆ ನೀರನ್ನು ಒದಗಿಸುವುದು.

6) ಮಣ್ಣಿನ ಸವಕಳಿಯನ್ನು ನಿಯಂತ್ರಿಸುವುದು,

7) ಮೀನುಗಾರಿಕೆಯ ಅಭಿವೃದ್ಧಿ ಮಾಡುವುದು

8) ಅರಣ್ಯ ಸಂಪತ್ತನ್ನು ವೃದ್ಧಿಸುವುದು.


**1. ಭಾರತದ ನಕ್ಷೆ ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ.**

1. ಭಾಕ್ರಾನಂಗಲ್ ಯೋಜನೆ 2. ಕೋಸಿ ಯೋಜನೆ 3. ನರ್ಮದಾ ನದಿ 4. ಕೃಷ್ಣಾ ಮೇಲ್ದಂಡೆ ಯೋಜನೆ




**2. ಭಾರತದ ನಕ್ಷೆ ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ.**

**1.** ದಾಮೋದರ ಕಣಿವೆ 2. ಹಿರಾಕುಡ್ ಯೋಜನೆ 3. ಚಂಬಲ್ ಯೋಜನೆ 4. ತುಂಗಾಭದ್ರ ಯೋಜನೆ



**3. ಭಾರತದ ನಕ್ಷೆ ಬರೆದು ಈ ಕೆಳಗಿನ ಸ್ಥಳಗಳನ್ನು ಗುರುತಿಸಿ.**

1. ಬಿಯಾಸ್ ನದಿ 2. ಗಂಡಕಿ ನದಿ 3. ರಿಹಾಂದ್ ಯೋಜನೆ 4. ನಾಗಾರ್ಜುನ ಸಾಗರ ಯೋಜನೆ



## ಅಧ್ಯಾಯ 6. ಭಾರತದ ಭೂ ಬಳಕೆ ಹಾಗೂ ಕೃಷಿ

**1. ವ್ಯವಸಾಯದ ಪ್ರಾಮುಖ್ಯತೆ ತಿಳಿಸಿ**

1 ವ್ಯವಸಾಯವು ಭಾರತೀಯರ ಮುಖ್ಯ ಉದ್ಯೋಗವಾಗಿದೆ

2 ದೇಶದ ಜನಸಂಖ್ಯೆಗೆ ಅಹಾರ ಧಾನ್ಯಗಳನ್ನು ಪೂರೈಸುತ್ತದೆ

3 ವ್ಯವಸಾಯವು ಜೀವನಾಧಾರ ಉದ್ಯೋಗವಾಗಿದೆ

4 ಹೆಚ್ಚು ಜನರಿಗೆ ಉದ್ಯೋಗವಕಾಶಗಳನ್ನು ನೀಡಿದೆ

5 ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುತ್ತದೆ

6 ವ್ಯವಸಾಯವು ಸಂಚಾರ ಸಾರಿಗೆ ವ್ಯಾಪಾರ ಮುಂತಾದ ತೃತೀಯ ಆರ್ಥಿಕ ಉದ್ಯೋಗಗಳನ್ನು ಪೋಷಿಸಿದೆ

**2. ವ್ಯವಸಾಯ ಎಂದರೇನು ? ವ್ಯವಸಾಯದ ವಿಧಗಳು ಯಾವುವು ?**

ಭೂಮಿಯನ್ನು ಉಳುಮೆ ಮಾಡಿ ಸಸ್ಯಗಳನ್ನು ಪೋಷಿಸಿ ಅದರಿಂದ ಮಾನವ ಮತ್ತು ಪ್ರಾಣಿಗಳಿಗೆ ಉಪಯೋಗವನ್ನು ಪಡೆಯುವುದನ್ನೇ ವ್ಯವಸಾಯ ಎನ್ನುವರು

**ವ್ಯವಸಾಯದ ವಿಧಗಳು**

1 ಸಾಂದ್ರ ಬೇಸಾಯ

2 ಜೀವನಾಧಾರ ಬೇಸಾಯ

ಎ) ಸ್ಥಿರ ಬೇಸಾಯ

ಬಿ) ಸ್ಥಳಾಂತರ ಬೇಸಾಯ

3 ವಾಣಿಜ್ಯ ಬೇಸಾಯ

4 ಮಿಶ್ರ ಬೇಸಾಯ

5 ತೋಟಗಾರಿಕೆ ಬೇಸಾಯ

**3. ಬೆಳೆ ಮಾದರಿ ಎಂದರೇನು ? ಬೆಳೆಯ ಮಾದರಿಯನ್ನು ನಿರ್ಧರಿಸುವ ಅಂಶಗಳು ಯಾವುವು ?**

ಯಾವುದೇ ಒಂದು ಪ್ರದೇಶವು ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಹಲವಾರು ಬೆಳೆಗಳಿಂದ ಆವರಿಸಿದ್ದು ಇವುಗಳ ಅನುಪಾತವನ್ನು ಬೆಳೆ ಮಾದರಿ ಎನ್ನುವರು

**ಬೆಳೆ ಮಾದರಿ ನಿರ್ಧರಿಸುವ ಅಂಶಗಳು;**

| | |
|---|---|
| 1 ನೈಸರ್ಗಿಕ ಅಂಶಗಳು;- | ಭೂಸ್ವರೂಪ, ವಾಯುಗುಣ, ಮಳೆ |
| 2 ಆರ್ಥಿಕ ಅಂಶಗಳು | ಹಿಡುವಳಿ ಪ್ರದೇಶಗಳು |
| 3 ಸಾಮಜಿಕ ಅಂಶಗಳು | ಸಂಪ್ರದಾಯ, ಮೂಢನಂಬಿಕೆ, ಅನಕ್ಷರತೆ, ಮುಂತಾದವು, |
| 4 ರೈತರ ಮನೋಭಾವ | ರೈತರ ಮನೋಧೋರಣೆ |

**4. ಬೆಳೆ ಋತುಗಳು ಅಥವಾ ವ್ಯವಸಾಯದ ಅವಧಿಗಳು ಯಾವುವು ? ವಿವರಿಸಿ.**

ಭಾರತ ದೇಶದಲ್ಲಿ ಮೂರು ವ್ಯವಸಾಯದ ಅವಧಿಗಳು ಕಂಡುಬರುತ್ತವೆ

**1 ಮುಂಗಾರು ಅಥವಾ ಖಾರಿಫ್ ಬೇಸಾಯ**

* ನೈಋತ್ಯ ಮಾನ್ಸೂನ್ ಮಾರುತಗಳ ಅವಧಿಯ ಬೇಸಾಯವನ್ನು ಮುಂಗಾರು ಬೇಸಾಯ ಅಥವಾ ಖಾರಿಫ್ ಬೇಸಾಯ ಎನ್ನುವರು
* ಜೂನ್ ಅಥವಾ ಜುಲೈ ತಿಂಗಳಲ್ಲಿ ಬಿತ್ತನೆ ಮಾಡಿ ಸೆಪ್ಟಂಬರ್ ಅಥವಾ ಅಕ್ಟೋಬರ್ ತಿಂಗಳಲ್ಲಿ ಕಟಾವು ಮಾಡುವುದು
* ದೇಶದ ಹೆಚ್ಚು ಭಾಗವು ಈ ಅವಧಿಯ ಬೇಸಾಯಕ್ಕೆ ಒಳಪಟ್ಟಿರುವುದು
* ಭತ್ತ, ರಾಗಿ, ಹತ್ತಿ, ಜೋಳ, ಮೆಕ್ಕೆಜೋಳ, ಎಣ್ಣೆಕಾಳುಗಳು ಇತ್ಯಾದಿ

**2 ಹಿಂಗಾರು ಅಥವಾ ಚಳಿಗಾಲದ ಅಥವಾ ರಬಿ ಬೇಸಾಯ**

* ಚಳಿಗಾಲದಲ್ಲಿ ಮಳೆ ಪಡೆಯುವ ಪ್ರದೇಶಗಳ ಬೇಸಾಯದ ಅವಧಿಯಾಗಿದೆ
* ಅಕ್ಟೋಬರ್, ನವಂಬರ್‌ನಲ್ಲಿ ಬಿತ್ತನೆ ಮಾಡಿ ಪೆಬ್ರವರಿ ಮಾರ್ಚ ಅವಧಿಯಲ್ಲಿ ಕಟಾವು
* ಗೋಧಿ ಮುಖ್ಯ ಬೆಳೆಯಾಗಿದೆ

**3 ಬೇಸಿಗೆಯ ಅಥವಾ ಜೇಡ್ ಬೇಸಾಯ**

* ರಬಿ ಹಾಗೂ ಖಾರಿಪ್ ಬೇಸಾಯದ ನಡುವಿನ ಅವಧಿಗಳಲ್ಲಿ ಈ ಬೇಸಾಯ ಕಂಡುಬರುವುದು
* ಬೇಸಿಗೆಯ ಬೇಸಾಯವನ್ನೇ ಜೇಡ್ ಬೇಸಾಯ ಎನ್ನುವರು
* ದ್ವಿದಳ ಧಾನ್ಯಗಳು, ಉದ್ದು, ಹೆಸರು. ಎಣ್ಣೆಕಾಳುಗಳು, ಮತ್ತು ತರಕಾರಿಗಳು ಇತ್ಯಾದಿ

**5 ಭೂ ಬಳಕೆಯ ಪ್ರಕಾರಗಳು ಯಾವುವು ?**

1 ನಿವ್ವಳ ಸಾಗುವಳಿ ಕ್ಷೇತ್ರ        2 ಅರಣ್ಯ ಭೂಮಿ
3 ವ್ಯವಸಾಯೇತರ ಭೂ ಬಳಕೆ        4 ಬೀಳು ಭೂಮಿ
5 ಹುಲ್ಲುಗಾವಲು        6 ಬಳಕೆಯಾಗದ ವ್ಯವಸಾಯ ಯೋಗ್ಯ ಭೂಮಿ

**ಈ ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ**

1. **ಭೂ ಬಳಕೆ ಎಂದರೇನು ? ಭೂ ಬಳಕೆಯ ಮೆಲೆ ಪ್ರಭಾವ ಬೀರುವ ಅಂಶಗಳು ಯವುವು ?**

ಭೂಮಿಯನ್ನು ಅವುಗಳ ಗುಣಲಕ್ಷಣ ಹಾಗೂ ಅಗತ್ಯತೆಗೆ ಅನುಗುಣವಾಗಿ ವಿವಿಧ ಉದ್ದೇಶಗಳಿಗೆ ಬಳಸುವುದನ್ನು ಭೂ ಬಳಕೆ ಎನ್ನುವರು

**ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳು**

1 ಭೂ ಸ್ವರೂಪಗಳು        2 ವಾಯುಗುಣ
3 ಮಣ್ಣಿನ ಲಕ್ಷಣಗಳು        4 ಭೂ ಹಿಡುವಳಿ
5 ಜನಸಂಖ್ಯೆ        6 ವ್ಯವಸಾಯೋತ್ಪನ್ನಗಳ ಬೇಡಿಕೆ
7 ಉದ್ಯೋಗ        8 ಜನರ ಮನೋಭಾವನೆ
9 ಸಾಮಾಜಿಕ ಪರಿಸ್ಥಿತಿ        10 ಮಾರಕಟ್ಟೆ
11 ತಾಂತ್ರಿಕತೆ        12 ನೀರಾವರಿ ಸೌಲಭ್ಯ
13 ಮಾನವನ ಸಾಮರ್ಥ್ಯ        14 ಭೂ ಒಡೆತನ

2. **ಭತ್ತ, ಗೋಧಿ, ಕಬ್ಬು, ಹತ್ತಿ, ಚಹ, ಬೆಳೆಗಳನ್ನು ಬೆಳೆಯಲು ಅವಶ್ಯಕವಿರುವ ಪೂರಕಾಂಶಗಳಾವುವು ?**

| **ಬೆಳೆಗಳು** | **ಉಷ್ಣಾಂಶ** | **ಮಳೆ** | **ಮಣ್ಣು** | **ಇತರೆ ಅಂಶಗಳು** |
|---|---|---|---|---|
| 1 ಭತ್ತ | 25 ಡಿಗ್ರಿ ಸೆಲ್ಸಿಯಸ್ | 100-200 ಸೆಂ.ಮೀ | ಮೆಕ್ಕಲು ಮಣ್ಣು ಜೇಡಿಮಣ್ಣು | * ಭೂಮಿ ಸಮತಟ್ಟಾಗಿರಬೇಕು<br>* ಪೈರಿನ ತಳದಲ್ಲಿ.ಸದಾ ನೀರು ನಿಂತಿರಬೇಕು<br>* ಪಶ್ಚಿಮಬಂಗಾಳ ಭತ್ತ ಬೆಳೆಯುವ ಮೊದಲ ರಾಜ್ಯ |
| 2 ಗೋಧಿ | 10-15 ಡಿಗ್ರಿ ಸೆಲ್ಸಿಯಸ್ | 50-70 ಸೆಂ.ಮೀ | ಮರಳುಮಿಶ್ರಿತ ಜೇಡಿಮಣ್ಣು | *ಪಂಜಾಬ್ "ಗೋಧಿಯ ಕಣಜ" ಎಂದು ಕರೆಯುತ್ತಾರೆ |
| 3 ಕಬ್ಬು | 21-26ಡಿಗ್ರಿ ಸೆಲ್ಸಿಯಸ್ | 100-150 ಸೆಂ.ಮೀ | ಮೆಕ್ಕಲು ಮತ್ತು ಕಪ್ಪುಮಣ್ಣು | *. ಕಬ್ಬು ವಾರ್ಷಿಕ ಬೆಳೆ<br>*. ಉತ್ತರಪ್ರದೇಶ ಕಬ್ಬು ಬೆಳೆಯುವುದರಲ್ಲಿ ಮೊದಲರಾಜ್ಯ |
| 4 ಹತ್ತಿ | 20-25ಡಿಗ್ರಿ ಸೆಲ್ಸಿಯಸ್ | 75-150 ಸೆಂ.ಮೀ | ಕಪ್ಪುಮಣ್ಣು | *. ಜೇಡಿಮಣ್ಣಿನ ಕಣಗಳು ಹೆಚ್ಚಾಗಿವೆ ಆದ್ದರಿಂದ<br>* ತೇವಾಂಶ ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಹೊಂದಿದೆ |
| 5 ಚಹ | 21 ಡಿಗ್ರಿ ಸೆಲ್ಸಿಯಸ್ | 150-200 ಸೆಂ.ಮೀ | ಕೊಳೆತ ಜೈವಿಕಾಂಶ ಮರಳುಮಿಶ್ರಿತ ಜೇಡಿಮಣ್ಣು | *. ನೀರು ಸುಲಭವಾಗಿ ಹರಿದುಹೋಗುವಂತೆ ಇಳಿಜಾರು ಭೂಮಿಯಾಗಿರಬೇಕು |

**4 ತೋಟಗಾರಿಕೆ ಬೆಳೆಗಳು ಮತ್ತು ಪುಷ್ಪ ಬೇಸಾಯವು ಇತ್ತೀಚಿನ ದಿನಗಳಲ್ಲಿ ವ್ಯವಸಾಯ ಕ್ಷೇತ್ರದಲ್ಲಿ ಪ್ರಮುಖವಾದ ಆರ್ಥಿಕತೆಯನ್ನು ಹೊಂದಿವೆ. ಸಮರ್ಥಿಸಿ. ತೋಟಗಾರಿಕೆ ಬೆಳೆಗಳು;**

*. ತೋಟಗಾರಿಕೆ ಬೇಸಾಯವು ಹಣ್ಣು ತರಕಾರಿ ಹೂವುಗಳ ಉತ್ಪಾದನೆಗಳನ್ನು ಒಳಗೊಂಡಿದೆ

* ತೋಟಗಾರಿಕೆಯ ಬೇಸಾಯವು ಸಾಂದ್ರ ಹಾಗೂ ವಾಣಿಜ್ಯ ಬೇಸಾಯವಾಗಿದೆ

* ಮಾವು, ಬಾಳೆ, ಸಪೋಟ, ಹಾಗೂ ನಿಂಬೆ ಜಾತೀಯ ಹಣ್ಣುಗಳ ಉತ್ಪಾದನೆಯಲ್ಲಿ ಭಾರತವು ಪ್ರಪಂಚದಲ್ಲಿ ಮೊದಲನೇಯ ಸ್ಥಾನದಲ್ಲಿದೆ

*. ತೋಟಗಾರಿಕೆ ಬೇಸಾಯದ ಪ್ರಗತಿಯನ್ನು " ಸುವರ್ಣ ಕ್ರಾಂತಿ" ಎನ್ನವರು

*. ಭೌಗೋಳಿಕ ಅಂಶಗಳಾದ ಭೂಸ್ವರೂಪ, ವಾಯುಗುಣ, ಮಣ್ಣು, ನೀರಾವರಿ ಸೌಲಭ್ಯ ,ಕಾರ್ಮಿಕರು, ಮಾರುಕಟ್ಟೆ, ಸರ್ಕಾರದ ಉತ್ತೇಜನ, ಮುಂತಾದ ಸೌಲಭ್ಯಗಳು ಭಾರತದಲ್ಲಿ ಪೂರಕವಾಗಿವೆ

**ಪುಷ್ಪ ಬೇಸಾಯ**

*. ವಾಣಿಜ್ಯ ಮಾದರಿಯ ಹೂವುಗಳಾದ ಮಲ್ಲಿಗೆ, ಡಂಡುಮಲ್ಲಿಗೆ, ಸಂಪಿಗೆ, ಚಂಡು ಹೂವು , ಸೇವಂತಿಗೆ ಕನಕಾಂಬರ, ಗುಲಾಬಿ, ಲಿಲ್ಲಿ ಮುಂತಾದ ಹೂವುಗಳ ಬೇಸಾಯವನ್ನೇ ಪುಷ್ಪ ಬೇಸಾಯ ಎನ್ನುವರು

*. ಗುಲಾಬಿ, ಆರ್ಕಿಡ್ ,ಲಿಲ್ಲಿ, ಗ್ಲಾಡಿಯೋಲಸ್ ಕಾರನೇಷನ್ ಅಂಥೋರಿಯಂ ಹೂವುಗಳಿಗೆ ಅಪಾರ ಬೇಡಿಕೆ ಇದೆ

## ಅಧ್ಯಾಯ–7 ಭಾರತದ ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

**ಈ ಕೆಳಗಿನ ಪ್ರಶ್ನೆಗಳಿಗೆ ಐದು–ಆರು ವಾಕ್ಯಗಳಲ್ಲಿ ಉತ್ತರಿಸಿ**

**1. ಭಾರತದಲ್ಲಿ ದೊರಕುವ ಖನಿಜ ಸಂಪನ್ಮೂಲಗಳಾವವು ?**

1 ಕಬ್ಬಿಣದ ಅದಿರು

2 ಮ್ಯಾಂಗನೀಸ್ ಅದಿರು

3 ಆಭ್ರಕ

4 ಬಾಕ್ಸೈಟ್ ಅದಿರು

5 ಚಿನ್ನದ ಅದಿರು

**2. ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳೆಂದರೇನು ? ಅವುಗಳ ಪ್ರಾಮುಖ್ಯವನ್ನು ವಿವರಿಸಿ .**

ಪುನರ್ ಬಳಕೆ ಮಾಡಬಹುದಾದ ಸೌರಶಕ್ತಿ, ಪವನಶಕ್ತಿ, ಸಾಗರನೀರಿನ ಉಬ್ಬರ ವಿಳಿತದ ಶಕ್ತಿ, ಭೂ ಅಂತರಾಳದ ಶಕ್ತಿ, ಜೈವಿಕ ಅನಿಲ, ಮುಂತಾದವುಗಳನ್ನು ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳು ಎನ್ನುವರು

1 ಭಾರತದಲ್ಲಿ ಬಳಸುವ ಶಕ್ತಿ ಸಂಪನ್ಮೂಲಗಳಲ್ಲಿ ಮುಗಿದುಹೋಗುವ ಸಂಪನ್ಮೂಲಗಳೇ ಪ್ರಧಾನವಾಗಿವೆ

2 ಇವುಗಳ ಉತ್ಪಾದನೆ ಕಡಿಮೆ ಇದ್ದು ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗಿದೆ

3 ಇದರಿಂದ ರಾಷ್ಟ್ರೀಯ ಆದಾಯದ ಮೇಲೆ ಪರಿಣಾಮ ಉಂಟಾಗಿದೆ

4 ಆದ್ದರಿಂದಾಗಿ ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಉಪಯೋಗ ಅನಿವಾರ್ಯವಗಿದೆ

5 ಮುಗಿಯದೇ ಇರುವ ಸಂಪನ್ಮೂಲಗಳ ಶೋಧನೆ ಮತ್ತು ಬಳಕೆಗೆ ಪಂಚವಾರ್ಷಿಕ ಯೋಜನೆಗಳಲ್ಲಿ ಸಾಕಷ್ಟು ಪ್ರಾಮುಖ್ಯ ನೀಡಲಾಗಿದೆ

**3. ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನಿವಾರಿಸಲು ನಿಮ್ಮದೇ ಆದ ಸಲಹೆಗಳನ್ನು ನೀಡಿ.**

1] ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳನ್ನು ಹೆಚ್ಚಾಗಿ ಬಳಸುವುದು

2] ಜಲವಿದ್ಯುತ್ ಉತ್ಪಾದನೆಗೆ ಪ್ರಾಮುಖ್ಯ ನೀಡುವುದು

3] ಬದಲೀಯ ಸ್ಥಳೀಯ ಸಂಪನ್ಮೂಲಗಳನ್ನು ಬಳಸುವುದು

4] ಅಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳ ಬಳಕೆಯನ್ನು ಪ್ರೋತ್ಸಾಹಿಸುವುದು

5] ಶಕ್ತಿ ಸಂಪನ್ಮೂಲಗಳನ್ನು ಮಿತವಾಗಿ ಬಳಸುವುದು

6] ನಿರುಪಯುಕ್ತ ವಸ್ತುಗಳನ್ನು ಬಳಸಿ ವಿದ್ಯುತ್ ಉತ್ಪಾದಿಸುವುದು

**4. ಸೌರ ಶಕ್ತಿ ಎಂದರೇನು ? ಸೌರಶಕ್ತಿಯ ಉಪಯೋಗ ಕುರಿತು ಬರೆಯಿರಿ .**

ಸೂರ್ಯನ ಕಿರಣಗಳಿಂದ ಹೊರ ಸೂಸಲ್ಪಡುವ ಶಾಖದ ಬಳಕೆಯನ್ನೇ ಸೌರಶಕ್ತಿ ಎನ್ನುವರು

1] ಇದು ಮುಗಿಯದ ಶಕ್ತಿ ಸಂಪನ್ಮೂಲವಾಗಿದೆ

2] ಸೌರಶಕ್ತಿಯನ್ನು ನೇರವಾಗಿ ಶಾಖಶಕ್ತಿಯಾಗಿ ಪರಿವರ್ತಿಸಬಹುದು

3] ಸೌರಶಕ್ತಿಯನ್ನು ಸೋಲಾರ್ ವಾಟರ್ ಹೀಟರ್ , ಕುಕ್ಕರ್ , ಸೋಲಾರ್ ಥರ್ಮಲ್ , ವಿದ್ಯುತ್ ದೀಪ, ರೈಲ್ವೆ ಸಿಗ್ನಲ್, ನೀರೆತ್ತಲೂ, ಸಂಪರ್ಕ ಮಾಧ್ಯಮಗಳಲ್ಲಿ ಬಳಸುತ್ತಾರೆ

4] ರಾಜಸ್ಥಾನದ "ಬಾರ್ ಮರ್" ನಲ್ಲಿ ಮೊದಲ ಸೌರವಿದ್ಯುತ್ ಉತ್ಪಾದನೆ ಕೇಂದ್ರವನ್ನು ಸ್ಥಾಪಿಸಲಾಗಿದೆ

5] ಇತ್ತೀಚೆಗೆ ಕರ್ನಾಟಕದ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸೌರವಿದ್ಯುತ್ ಸ್ಥಾವರ ಸ್ಥಾಪಿಸಲಾಗಿದೆ

**5). ಭಾರತದ ಪ್ರಮುಖ ಶಕ್ತಿ ಸಂಪನ್ಮೂಲಗಳಾವುವು ?ವಿವರಿಸಿ**

**1] ಕಲ್ಲಿದ್ದಲು**

* .ಭಾರತದ ಪ್ರಮುಖವಾದ ಶಕ್ತಿ ಸಂಪನ್ಮೂಲವಾಗಿದೆ

*. ಭಾರತ ಪ್ರಪಂಚದ ಕಲ್ಲಿದ್ದಲಿನ ಉತ್ಪಾದನೆಯಲ್ಲಿ 3ನೇ ಸ್ಥಾನದಲ್ಲಿದೆ

*. ಕೋಟ್ಯಾಂತರ ವರ್ಷಗಳ ಹಿಂದೆ ದಟ್ಟವಾದ ಅರಣ್ಯವು ಭೂಮಿಯಲ್ಲಿ ಹುದುಗಿ ಹೋಗಿ ಅಧಿಕ ಶಾಖ ಮತ್ತು ಒತ್ತಡದಿಂದ ಕಲ್ಲಿದ್ದಲಾಗಿ ರೂಪುಗೊಂಡಿದೆ

*. ಕೀಟ ನಿರೋಧಕಗಳು, ಸ್ಫೋಟಕ ವಸ್ತುಗಳು, ಕೃತಕ ನಾರು, ಕೃತಕ ರಬ್ಬರ್, ಪ್ಲಾಸ್ಟಿಕ್, ರಸಗೊಬ್ಬರ, ಮುಂತಾದವುಗಳ ತಯಾರಿಕೆಯಲ್ಲಿ ಬಳಸುತ್ತಾರೆ

*. ಕಲ್ಲಿದ್ದಲು ಬಹುಉಪಯೋಗಿ ಖನಿಜವಾಗಿರುವುದರಿಂದ ಇದನ್ನು **"ಕಪ್ಪುಬಂಗಾರ"** ಎಂದು

ಕರೆಯುತ್ತಾರೆ

*. ಕಲ್ಲಿದ್ದಲಿನ ನಿಕ್ಷೇಪಗಳು ದಾಮೋದರ ನದಿ ಕಣಿವೆಯಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿವೆ

**2] ಪೆಟ್ರೋಲಿಯಂ**

*. ಪೆಟ್ರೋಲಿಯಂನ್ನು ಕಚ್ಚಾತೈಲ ಎಂದು ಕರೆಯುವರು

*. ಪೆಟ್ರೋಲಿಯಂನಿಂದ ಗ್ಯಾಸೋಲಿನ್, ಪೆಟ್ರೋಲ್, ಸೀಮೆಎಣ್ಣೆ ಶುದ್ಧೀಕರಿಸುತ್ತಾರೆ

*. ವ್ಯವಸಾಯ, ಕೈಗಾರಿಕೆ, ಸಾರಿಗೆ ಕ್ಷೇತ್ರಗಳಲ್ಲಿ ಪೆಟ್ರೋಲಿಯಂ ಅಮೂಲ್ಯ ಶಕ್ತಿ ಸಂಪನ್ಮೂಲವಾಗಿದೆ

*. ಇದು ಶಾಂತಿ ಹಾಗೂ ಯುದ್ದಕಾಲಗಳೆರಡರಲ್ಲೂ ಅಮೂಲ್ಯವಾದದ್ದು ಅದ್ದರಿಂದ ಇದನ್ನು **"ದ್ರವ ರೂಪದ ಚಿನ್ನ"** ಎಂದು ಕರೆಯುತ್ತಾರೆ

*. ಭಾರತದಲ್ಲಿ ಅಸ್ಸಾಂನ "ದಿಗ್ಬಾಯ್" ಎಂಬಲ್ಲಿ ಮೊದಲು ಪೆಟ್ರೋಲಿಯಂ ಪತ್ತೆಹಚ್ಚಲಾಯಿತು

*. "ಬಾಂಬೆ ಹೈ" ಭಾರತದ ಅತಿದೊಡ್ಡ ತೈಲ ನಿಕ್ಷೇಪವಾಗಿದೆ

**3] ಪರಮಾಣು ಖನಿಜಗಳು**

*. ಭಾರತವು ಪರಮಾಣು ಖನಿಜಗಳಿಂದ ಅಣುಶಕ್ತಿಯನ್ನು ಉತ್ಪಾದಿಸುತ್ತಿದೆ

* ಭಾರತದಲ್ಲಿ ಕಂಡುಬರುವ ಪರಮಾಣು ಖನಿಜಗಳು 1] ಯುರೇನಿಯಂ, 2] ಥೋರಿಯಂ, 3] ಬೆರಿಲಿಯಂ, 4] ಲಿಥಿಯಂ

## ಅಧ್ಯಾಯ– 8 ಭಾರತದ ಸಾರಿಗೆ ಹಾಗೂ ಸಂಪರ್ಕ

**1] ಸಾರಿಗೆ ಎಂದರೇನು? ಆರ್ಥಿಕ ಅಭಿವೃದ್ದಿಯಲ್ಲಿ ಸಾರಿಗೆಯ ಪಾತ್ರವೇನು ?**

**ಆರ್ಥಿಕ ಅಭಿವೃದ್ದಿಯಲ್ಲಿ ಸಾರಿಗೆಯು ಬಹಳ ಪ್ರಮುಖ ಪಾತ್ರ ವಹಿಸುತ್ತದೆ ಸ್ಪಷ್ಟಿಕರಿಸಿ.**

**ಭಾರತದಲ್ಲಿ ಸಾರಿಗೆಯ ಮಹತ್ವವನ್ನು ವಿವರಿಸಿ' ಸಾರಿಗೆಯಿಂದಾಗುವ ಪ್ರಯೋಜನಗಳಾವುವು ?**

**ಭಾರತದಲ್ಲಿ ರಸ್ತೆ ಮಾರ್ಗಗಳ ಪ್ರಾಮುಖ್ಯತೆ ಕುರಿತು ವಿವರಿಸಿ.**

**ರಸ್ತೆ ಸಾರಿಗೆಯು ದೇಶದ ಅರ್ಥಿಕ ಪ್ರಗತಿಗೆ ಪೂರಕವಾಗಿದೆ ಹೇಗೆ ?**

**ಭಾರತದಲ್ಲಿ ಆರ್ಥಿಕ ಅಭಿವೃದ್ದಿಯಲ್ಲಿ ಭೂಸಾರಿಗೆಯ ಪಾತ್ರವನ್ನು ಸ್ಪಷ್ಟಪಡಿಸಿ.**

**ರಸ್ತೆ ಸಾರಿಗೆಯ ಅನುಕೂಲಗಳೇನು ?**

*. ವಸ್ತುಗಳು, ಸೇವೆಗಳು, ಮಾಹಿತಿ ಮತ್ತು ಸರಕುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವುದು

*. ಹಳ್ಳಿಗಳ ನಡುವೆ ಸಂಪರ್ಕ *. ಕೃಷಿ ಪ್ರಗತಿ

*. ಕೈಗಾರಿಕೆ ಪ್ರಗತಿ

*. ರೈತರ ವಸ್ತುಗಳನ್ನು ಮಾರುಕಟ್ಟೆಗೆ ಸಾಗಿಸಲು

*. ಉದ್ಯೋಗ ಸೃಷ್ಟಿ

*. ಜೀವನ ಮಟ್ಟ ಸುಧಾರಣೆ

*. ರೈಲು ಸಾರಿಗೆಗೆ ಪೂರಕ

*. ಅವಶ್ಯಕ ವಸ್ತುಗಳ ಪೂರೈಕೆ

**2] ಸುವರ್ಣ ಚತುಷ್ಕೋನ ಮತ್ತು ಕಾರಿಡಾರ್ ಹೆದ್ದಾರಿಗಳನ್ನು ಕುರಿತು ವಿವರಿಸಿ .**

*. ದೇಶವನ್ನು ಉತ್ತರ–ದಕ್ಷಿಣ, ಪೂರ್ವ–ಪಶ್ಚಿಮವಾಗಿ ಸಂಪರ್ಕಿಸುತ್ತದೆ
*. ಕೈಗಾರಿಕಾ ಅಭಿವೃದ್ದಿಗೆ ವರದಾನ
*. ದೇಶದ ಮಹಾನಗರಗಳ ನಡುವೆ ಸಂಪರ್ಕ
*. ಕಡಿಮೆ ಅವಧಿ ಮತ್ತು ಕಡಿಮೆ ವೆಚ್ಚದಲ್ಲಿ ಸಾಗಾಣೆ ಸಾಧ್ಯ
*. ಆರ್ಥಿಕ ಮತ್ತು ರಾಜಕೀಯವಾಗಿ ಪ್ರಾಮುಖ್ಯತೆ.
*. ಅತಿ ದೊಡ್ಡ ರಸ್ತೆ ಸಾರಿಗೆ ಯೋಜನೆ.

**3. ರಸ್ತೆ ಸಾರಿಗೆಯಲ್ಲಿ ಕಂಡುಬರುವ ತೊಡಕುಗಳು ಯವುವು?/ ರಸ್ತೆ ಸಾರಿಗೆಗೆ ಕೆಲವು ಮಿತಿಗಳಿವೆ ಸ್ಪಷ್ಟಪಡಿಸಿ. /ರಸ್ತೆ ಸಾರಿಗೆಯಲ್ಲಿ ಕೆಲವು ಅನಾನುಕೂಲಗಳಿವೆ ಸ್ಪಷ್ಟಪಡಿಸಿ.**

*. ಗ್ರಾಮೀಣ ರಸ್ತೆಗಳು ಮಳೆಗಾಲದಲ್ಲಿ ಅನುಪಯುಕ್ತ
*. ಪರಿಸರ ಮಾಲಿನ್ಯ, ವಾಹನ ದಟ್ಟಣೆ
* ಮಳೆ ಪ್ರವಾಹ ಚಂಡಮಾರುತಗಳಿಂದ ಪ್ರತೀ ವರ್ಷವೂ ಹಾಳಾಗುತ್ತಿವೆ
*. ರಾಷ್ಟ್ರೀಯ, ರಾಜ್ಯ ಹೆದ್ದಾರಿಗಳ ನಿರ್ಮಾಣ ನಿರ್ವಹಣೆ ಅಸರ್ಮಪಕ
*. ರಸ್ತೆ ಬದಿಗಳಲ್ಲಿ ಬೇಕಾದ ಅಗತ್ಯತೆಗಳ ಕೊರತೆಯನ್ನು ದೇಶದಾದ್ಯಾಂತ ಕಾಣಬಹುದು

**4] ಪೂರ್ವ ಹಾಗೂ ಪಶ್ಚಿಮ ತೀರದ ಬಂದರುಗಳನ್ನು ಹೆಸರಿಸಿ**

| ಪಶ್ಚಿಮ ತೀರದ ಬಂದರುಗಳು | ಪೂರ್ವ ತೀರದ ಬಂದರುಗಳು |
|---|---|
| 1] ಕಾಂಡ್ಲ | 1] ಕೊಲ್ಕತ್ತಾ |
| 2] ಮುಂಬಯಿ | 2] ಹಾಲ್ದೀಯ |
| 3] ನವಾಶೇವಾ | 3] ಪಾರಾದೀಪ |
| 4] ಮರ್ಮಗೋವ | 4] ವಿಶಾಖ ಪಟ್ಟಣ |
| 5] ನವ ಮಂಗಳೂರು | 5] ಚೆನ್ನೈ |
| 6] ಕೊಚ್ಚಿ | 6] ತುತುಕುಡಿ |

**5] ಭಾರತದ ಪ್ರಮುಖ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಹೆಸರಿಸಿ .**

1] ಮುಂಬೈ ( ಸಹರಾ ಮತ್ತು ಸಾಂತ್ರಾಕ್ರೂಜ)
2]. ಕೋಲ್ಕತ್ತಾ ( ಸುಭಾಷ್ ಚಂದ್ರಬೋಷ್ )
3] ದೆಹಲಿ ( ಇಂದಿರಾಗಾಂಧಿ )
4] ಚನ್ನೈ ( ಅಣ್ಣಾ ಅಥವಾ ಮೀನಂಬಾಕಂ )
5] ಬೆಂಗಳೂರು ( ಕೆಂಪೇಗೌಡ )
6] ಹೈದರಾ ಬಾದ್ 7] ಅಹಮದಾಬಾದ್

8] ಪಣಜಿ 9] ಅಮೃತಸರ್

10] ಗುವಾಹಟಿ 11] ತಿರುವನಂತಪುರ

6] **ಸಂಪರ್ಕ ಮಾಧ್ಯಮಗಳ ಪ್ರಾಮುಖ್ಯತೆ ವಿವರಿಸಿ .**

**ಸಂಪರ್ಕ ಮಾಧ್ಯಮಗಳು ಪ್ರಸ್ತುತ ಕಾಲ ಘಟ್ಟದಲ್ಲಿ ಅತ್ಯಂತ ಪ್ರಮುಖವಾದದ್ದು ಸಮರ್ಥಿಸಿ.**

**ಸಂಪರ್ಕ ಮಾಧ್ಯಮಗಳು ಸಾರ್ವಜನಿಕರಿಗೆ ಉಪಯುಕ್ತವಾಗಿವೆ ಸ್ಪಷ್ಟಪಡಿಸಿ.**

**ಸಂಪರ್ಕ ಮಾಧ್ಯಮಗಳ ಮಹತ್ವ ತಿಳಿಸಿ./ ಸಂಪರ್ಕ ಮಾಧ್ಯಮಗಳ ಅನುಕೂಲತೆಯನ್ನು ಪಟ್ಟಿಮಾಡಿ .**

*. ದೇಶದ ಜನರಿಗೆ ವಿವಿಧ ಪ್ರದೇಶದ ಆಗುಹೋಗುಗಳ ಬಗ್ಗೆ ತಿಳುವಳಿಕೆ.

*. ಸರ್ಕಾರದ ನೀತಿ ನಿಯಮಗಳ ಬಗ್ಗೆ ತಿಳುವಳಿಕೆ

*. ವ್ಯವಸಾಯ ಕೈಗಾರಿಕೆಗಳ ಬಗ್ಗೆ ತಿಳುವಳಿಕೆ

*. ವಾಣಿಜ್ಯ ವ್ಯಾಪಾರ ಅಭಿವೃದ್ದಿಗೆ ಪೂರಕ

*. ದೇಶದ ಒಗ್ಗಟ್ಟು ಏಕತೆ ಹಾಗೂ ಸ್ಥಿರತೆಗೆ ಅನುಕೂಲ

*. ಜನರ ಜೀವನ ಮಟ್ಟ ಸುಧಾರಣೆ

7]. **ಭೌಗೋಳಿಕ ಮಾಹಿತಿ ವ್ಯವಸ್ಥೆ ಎಂದರೇನು ? ಇದರ ಅನುಕೂಲಗಳನ್ನು ಪಟ್ಟಿಮಾಡಿ .**

ಪೃಥ್ವಿಯ ಮೇಲ್ಮೈ ಮಾಹಿತಿಗಳನ್ನು ಸಂಗ್ರಹಿಸುವ, ಬಳಕೆ ಮಾಡುವ, ಮಾರ್ಪಡಿಸುವ, ಹಾಗೂ ತೋರಿಸುವ, ಪ್ರಬಲ ಸಲಕರಣೆಯ ಸಮೂಹ.

*. ಜಿ .ಐ. ಎಸ್ ತಂತ್ರಜ್ಞಾನ ಆಧಾರಿತ ನಕ್ಷೆಗಳು ಆಕರ್ಷಕ ಹಾಗೂ ಸ್ಪಷ್ಟತೆ ಹೊಂದಿವೆ

*. ಭೂ ಮೇಲ್ಮೈ ಮಾಹಿತಿಯನ್ನು ಸುಲಭವಾಗಿ ವಿಶ್ಲೇಷಿಸಬಹುದು

*. ಪ್ರಾಕೃತಿಕ ಸಂಪನ್ಮೂಲಗಳ ನಿರ್ವಹಣೆಯಲ್ಲಿ ಜಿ. ಐ ಎಸ್ ತಂತ್ರಜ್ಞಾನದ ಪ್ರಾಮುಖ್ಯತೆ ಹೆಚ್ಚು

*. ಕಂಪ್ಯೂಟರ್ ಆಧಾರಿತ ವಿಶ್ಲೇಷಣೆಯಾಗಿದ್ದು, ನಕ್ಷಾಶಾಸ್ತ್ರಜ್ಞರ ಸಹಾಯವಿಲ್ಲದೇ ರಚನೆ ಹಾಗೂ ಮಾರ್ಪಾಡು ಮಾಡಬಹುದು

8]. **ಗ್ಲೋಬಲ್ ಪೊಜಿಶನಿಂಗ್ ಸಿಸ್ಟಂ ಎಂದರೇನು ? ಅದರ ಪ್ರಾಮುಖ್ಯತೆ ಪಟ್ಟಿಮಾಡಿ.**

**ಗ್ಲೋಬಲ್ ಪೊಜಿಶನಿಂಗ್ ಸಿಸ್ಟಂ ಮಾನವರಿಗೆ ಆಧುನಿಕ ಕಾಲದಲ್ಲಿ ಹೇಗೆ ಸಹಾಯಕವಾಗಿದೆ ?**

ಭೂ ಮೇಲ್ಮೈಯಲ್ಲಿ ಯಾವುದೇ ವಸ್ತು, ಅಥವಾ ವ್ಯಕ್ತಿಯ, ಸ್ಥಾನ ಹಾಗೂ ಎತ್ತರವನ್ನು ಅಕ್ಷಾಂಶ ರೇಖಾಂಶಗಳ ಮೂಲಕ ನಿಖರವಾಗಿ ಸೂಚಿಸುವುದು

*. ಅಂತರಿಕ ಬಾಹ್ಯ ರಕ್ಷಣೆಗೆ ಮತ್ತು ರಕ್ಷಣಾಪಡೆಗಳಿಗೆ ನೆರವು

*. ಪ್ರಕೃತಿ ವಿಕೋಪಗಳಿಗೆ ಪರಿಹಾರ ಕೈಗೊಳ್ಳಲು ಸಹಕಾರಿ

*. ಇದರ ಮಾರ್ಗಸೂಚಿ ವ್ಯವಸ್ಥೆ ಸಾರಿಗೆ ನಿರ್ವಹಣೆಗೆ ಹೆಚ್ಚು ಅನುಕೂಲ

*. ನಗರಗಳಲ್ಲಿ ಮನೆಬಾಗಿಲ ಸೇವೆಗೆ ಹೆಚ್ಚು ಸಹಕಾರಿ

*. ಗೂಗಲ್ ಮ್ಯಾಪ್ ವ್ಯವಸ್ಥೆಗೆ ಸಹಕಾರಿ

**9] ಭಾರತ ನಕ್ಷೆ ಬರೆದು  ಇವುಗಳನ್ನು ಗುರ್ತಿಸಿ**

**1]  ಭಾರತದ ಬಂದರುಗಳು          2]  ಭಾರತದ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣಗಳು**




## ಅಧ್ಯಾಯ – 9. ಭಾರತದ ಪ್ರಮುಖ ಕೈಗಾರಿಕೆಗಳು

**1. ಭಾರತದ ಅಭಿವೃದ್ಧಿಯಲ್ಲಿ ಕೈಗಾರಿಕೆಗಳ ಪಾತ್ರವೇನು? / ಭಾರತದಲ್ಲಿ ಕೈಗಾರಿಕೆಗಳ ಮಹತ್ವ ತಿಳಿಸಿ./ ಭಾರತದಲ್ಲಿ ಕೈಗಾರಿಕೆಗಳಿಂದಾಗುವ ಅನುಕೂಲಗಳೇನು? / ಭಾರತದ ಆರ್ಥಿಕ ಪ್ರಗತಿಗೆ ಕೈಗಾರಿಕೆಗಳು ಹೇಗೆ ಸಹಕಾರಿ?**

- ಆಧುನಿಕ ಮಾನವನ ಅತೀ ಪ್ರಮುಖವಾದ ಆರ್ಥಿಕ ಚಟುವಟಿಕೆ
- ನಮಗೆ ಅವಶ್ಯಕವಾದ ವಸ್ತುಗಳನ್ನು ಪೂರೈಸುತ್ತದೆ.
- ಉದ್ಯೋಗವಕಾಶಗಳನ್ನು ಒದಗಿಸುತ್ತದೆ.
- ಕಚ್ಚಾವಸ್ತುಗಳನ್ನು ಸಿದ್ಧವಸ್ತುಗಳನ್ನಾಗಿ ಮಾರ್ಪಡಿಸುತ್ತದೆ.
- ರಾಷ್ಟ್ರೀಯ ಆದಾಯದ ಹೆಚ್ಚಳಕ್ಕೆ ನೆರವಾಗಿದೆ
- ಕೃಷಿ ಅಭಿವೃದ್ಧಿಗೆ ಸಹಕಾರಿ

**2. ಭಾರತದ ಪ್ರಧಾನ ಕೈಗಾರಿಕಾ ಪ್ರದೇಶಗಳಾವುವು?/ಭಾರತದಲ್ಲಿರುವ ಕೈಗಾರಿಕ ವಲಯಗಳಾವುವು?/ ಭಾರತದಲ್ಲಿ ಹೆಚ್ಚು ಕೈಗಾರಿಕೆಗಳು ಕೇಂದ್ರೀಕೃತವಾಗಿರುವ ಸ್ಥಳಗಳಾವುವು?**

- ಹೂಗ್ಲಿ ಪ್ರದೇಶ
- ಮುಂಬೈ –ಪೂನಾ ಪ್ರದೇಶ
- ಅಹಮದಾಬಾದ್  ವಡೋದರ ಪ್ರದೇಶ
- ದಾಮೋದರ ಕಣಿವೆ ಪ್ರದೇಶ

- ದಕ್ಷಿಣದ ಕೈಗಾರಿಕಾ ಪ್ರದೇಶ
- ನ್ಯಾಷನಲ್ ಕ್ಯಾಪಿಟಲ್ ಪ್ರದೇಶ
- ವಿಶಾಖಪಟ್ಟಣ ಗುಂಟೂರು ಪ್ರದೇಶ
- ಕೊಲ್ಲಂ ತಿರುವನಂತಪುರಂ ಪ್ರದೇಶ

**3. ಕೈಗಾರಿಕೆಗಳ ಸ್ಥಾಪನೆಗೆ ಪೂರಕವಾದ ಅಗತ್ಯತೆಗಳಾವುವು? /ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು? ಕೈಗಾರಿಕೆಗಳು ಎಲ್ಲಾ ಪ್ರದೇಶಗಳಲ್ಲೂ ಸ್ಥಾಪನೆಯಾಗಿಲ್ಲ ಏಕೆ?**

- ಕಚ್ಚಾ ವಸ್ತುಗಳು
- ಶಕ್ತಿ ಸಂಪನ್ಮೂಲಗಳು
- ಮಾರುಕಟ್ಟೆ
- ಸಾರಿಗೆ ಸೌಲಭ್ಯ
- ಕಾರ್ಮಿಕರ ಪೂರೈಕೆ
- ಬಂದರು ಸೌಲಭ್ಯ
- ಕಡಿಮೆ ದರದಲ್ಲಿ ಭೂಮಿಯ ಲಭ್ಯತೆ
- ತಂತ್ರಜ್ಞಾನ
- ಸರ್ಕಾರದ ನೀತಿ ನಿಯಮಗಳು

**4. ಭಾರತದಲ್ಲಿ ಜ್ಞಾನಾಧಾರಿತ ಕೈಗಾರಿಕೆಗಳು ದೇಶದ ಆರ್ಥಿಕತೆ ಮತ್ತು ಜನರ ಜೀವನ ಶೈಲಿಯ ಮೇಲೆ ಅಪಾರ ಪರಿಣಾಮ ಬೀರಿವೆ. ಹೇಗೆ?**

- ಇಂದು ಅತಿವೇಗವಾಗಿ ಬೆಳೆಯುತ್ತಿರುವ ಕೈಗಾರಿಕೆಯಾಗಿದೆ.
- ಇದು ಭಾರತದ ಪ್ರಮುಖ ರಫ್ತು ಉದ್ಯಮ
- ವಿದೇಶಿ ವಿನಿಮಯದ ಗಳಿಕೆಗೆ ಸಹಕಾರಿ
- ವ್ಯವಸಾಯ ಕ್ಷೇತ್ರದ ಪ್ರಗತಿಗೆ ನೆರವಾಗಿದೆ
- ಆಧುನಿಕ ಸಂಪರ್ಕ ಸಾಧನ ತಯಾರಿಕೆಗೆ ನೆರವು
- ರಕ್ಷಣಾ ಇಲಾಖೆಗೆ ನೆರವು

## ಅಧ್ಯಾಯ : 10 ನಿಸರ್ಗ ವಿಕೋಪಗಳು

**1. ಪ್ರಮುಖ ಪ್ರಾಕೃತಿಕ ವಿನಾಶಕಾರಕಗಳು ಯಾವುವು?**

ಭೂಕಂಪಗಳು, ಪ್ರವಾಹಗಳು, ಕ್ಷಾಮಗಳು, ಚಂಡಮಾರುತಗಳು, ಭೂಕುಸಿತ, ಕರಾವಳಿಕೊರೆತ, ಹಿಮಪಾತ

**2. ಬಂಗಾಳಕೊಲ್ಲಿಯಲ್ಲಿ ಚಂಡಮಾರುತಗಳು ಉಂಟಾಗಲು ಕಾರಣಗಳೇನು? ಮತ್ತು ಚಂಡಮಾರುತದ ಪರಿಣಾಮಗಳೇನು?**

**ಕಾರಣಗಳು**

- ಮೂರು ಕಡೆಗಳಲ್ಲಿ ಜಲಭಾಗ
- ಭೂಮಿ ಸಾಗರಭಾಗಗಳ ನಡುವಿನ ಉಷ್ಣಾಂಶದ ವ್ಯತ್ಯಾಸ
- ಭೂಮಿ ಸಾಗರ ಭಾಗಗಳ ನಡುವಿನ ಒತ್ತಡದ ವ್ಯತ್ಯಾಸ

**ಪರಿಣಾಮಗಳು**

- ಜನ ಜೀವನ ಅಸ್ತವ್ಯಸ್ತ
- ಅಪಾರ ಸಾವು–ನೋವು
- ಒಳನಾಡಿನ ಜಲರಾಶಿಗಳು ಲವಣಯುಕ್ತವಾಗುತ್ತವೆ
- ಬೆಳೆಗಳ ನಾಶ
- ಸಾರಿಗೆ ಮತ್ತು ವಿದ್ಯುತ್ ಸಂಪರ್ಕ ಅಸ್ತವ್ಯಸ್ತ
- ಸಾಂಕ್ರಾಮಿಕ ರೋಗಗಳು

**3. ಚಂಡಮಾರುತಗಳ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ಪರಿಹಾರ/ಮುನ್ನೆಚ್ಚರಿಕಾ ಕ್ರಮಗಳಾವುವು?**

- ಅಪಾಯಕಾರೀ ಸ್ಥಳಗಳಿಂದ ಜನರ ಸ್ಥಳಾಂತರ
- ವಿದ್ಯುತ್‌ಜನಕ ಯಂತ್ರಗಳನ್ನು ಸಜ್ಜಾಗಿರಿಸುವುದು
- ರೈಲು–ರಸ್ತೆ ಮಾರ್ಗಗಳ ಬದಲಾವಣೆ
- ಮಾಧ್ಯಮಗಳ ಮೂಲಕ ಮಾಹಿತಿ ನೀಡುವುದು
- ಸೇನಾ ತುಕಡಿಗಳನ್ನು ಸಿದ್ಧವಾಗಿಡುವುದು
- ಕುಡಿಯುವ ನೀರು ಮತ್ತು ಉಡುಪುಗಳನ್ನು ಸಂಗ್ರಹಿಸಿಡುವುದು
- ಔಷಧ ಮತ್ತು ವೈದ್ಯಕೀಯ ನೆರವು

**4. ಪ್ರವಾಹಗಳು ಉಂಟಾಗಲು ಕಾರಣಗಳೇನು?**

- ಅತ್ಯಧಿಕ ಮಳೆ
- ನದಿ ಪಾತ್ರದಲ್ಲಿ ಹೂಳು ತುಂಬುವಿಕೆ
- ಅಣೆಕಟ್ಟುಗಳ ಒಡೆಯುವಿಕೆ
- ನದಿಗಳ ಪಾತ್ರ ಬದಲಾವಣೆ

• ಚಂಡಮಾರುತಗಳಿಂದಾಗುವ ಅಧಿಕ ಮಳೆ
• ಸಮುದ್ರದಲ್ಲಾಗುವ ಭೂಕಂಪನಗಳು

**5. ಪ್ರವಾಹ ನಿಯಂತ್ರಣ ಕ್ರಮಗಳನ್ನು ತಿಳಿಸಿ.**

- ನದಿಯ ಇಕ್ಕೆಲಗಳಲ್ಲಿ ಅಡ್ಡಗಟ್ಟೆಗಳ ನಿರ್ಮಾಣ
- ಅಣೆಕಟ್ಟುಗಳ ನಿರ್ಮಾಣ
- ಪ್ರವಾಹ ಮುನ್ಸೂಚನಾ ಕೇಂದ್ರಗಳ ಸ್ಥಾಪನೆ
- ಜಲಾನಯನ ಪ್ರದೇಶಗಳಲ್ಲಿ ಅರಣ್ಯ ಬೆಳೆಸುವುದು
- ಮಣ್ಣಿನ ಸವೆತ ನಿಯಂತ್ರಣ
- ನದಿಗಳಲ್ಲಿ ಹೂಳು ತುಂಬುವುದನ್ನು ತಪ್ಪಿಸಬೇಕು.

**6. ಭೂ ಕುಸಿತಕ್ಕೆ ಕಾರಣಗಳೇನು?**

- ಪರ್ವತಗಳಲ್ಲಿ ಹರಿಯುವ ನೀರು ಮತ್ತು ಸಮುದ್ರ ತೀರಗಳಲ್ಲಿನ ಅಲೆಗಳು
- ಕಡಿದಾದ ಪರ್ವತ ಪ್ರದೇಶದಲ್ಲಿ ರಸ್ತೆ, ರೈಲುಮಾರ್ಗ ಮತ್ತು ಕಾಲುವೆಗಳನ್ನು ನಿರ್ಮಿಸುವುದು
- ಜೇಡಿಮಣ್ಣಿನ ಪದರದ ಮೇಲೆ ಸಡಿಲವಾದ ಮಣ್ಣಿನ ಪದರವಿದ್ದಾಗ
- ಗಣಿಗಾರಿಕೆ
- ಅರಣ್ಯನಾಶ
- ಕಡಿದಾದ ಇಳಿಜಾರನ್ನು ಆಳವಾಗಿ ಉಳುಮೆ ಮಾಡುವುದು.

**7. ಭೂ ಕುಸಿತದ ಪರಿಣಾಮಗಳು ಯಾವುವು?**

- ಚಿಕ್ಕ ನದಿಗಳು ಹರಿಯುವುದಕ್ಕೆ ಅಡ್ಡಿ ಉಂಟಾಗುತ್ತದೆ
- ಸಾರಿಗೆ ಸಂಚಾರಕ್ಕೆ ಅಡ್ಡಿ
- ಹಳ್ಳಿಗಳು ಮತ್ತು ಅನೇಕ ಸಸ್ಯವರ್ಗಗಳು ಭೂಗತವಾಗುತ್ತವೆ
- ಜೀವ ಹಾನಿ ಮತ್ತು ಆಸ್ತಿ ಹಾನಿ

**8. ಕಡಲ ಕೊರೆತದ ಪರಿಣಾಮಗಳು ಮತ್ತು ಅದರ ನಿರ್ವಹಣೆಯ ಕ್ರಮಗಳಾವುವು ?**

**ಪರಿಣಾಮಗಳು**

- ಭೂ ಪ್ರದೇಶವು ಸಮುದ್ರದ ಪಾಲಾಗುವುದು
- ಮನೆ ರಸ್ತೆ ಮುಂತಾದವು ಮುಳುಗುತ್ತವೆ.

**ನಿರ್ವಹಣೆಯ ಕ್ರಮಗಳು**

- ಮರಳು ತೆಗೆಯುವುದನ್ನು ನಿಯಂತ್ರಿಸಬೇಕು
- ತಡೆಗೋಡೆ ನಿರ್ಮಾಣ
- ತೀರದುದ್ದಕ್ಕೂ ದಪ್ಪ ಬಂಡೆಗಳ ರಾಶಿ ಹಾಕುವಿಕೆ
- ಮ್ಯಾಂಗ್ರೋವ್ ಅರಣ್ಯಗಳನ್ನು ಬೆಳೆಸುವುದು

**9. ಭೂ ಕಂಪನಕ್ಕೆ ಕಾರಣಗಳು ಯಾವುವು?**

- ಶಿಲಾಫಲಕಗಳ ಚಲನೆ
- ದ್ರವರೂಪದ ಮ್ಯಾಗ್ಮ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹರಿಯುವುದು
- ನಗರೀಕರಣ
- ಅರಣ್ಯನಾಶ
- ಅಣೆಕಟ್ಟುಗಳ ನಿರ್ಮಾಣ
- ಗಣಿಗಾರಿಕೆ

**10. ಭೂಕಂಪನದ ಪರಿಣಾಮಗಳಾವುವು?**

- ಜನರ ಸಾವು ನೋವು
- ಆಸ್ತಿ ಪಾಸ್ತಿಗಳ ಹಾನಿ
- ಸಾರಿಗೆ ಸಂಪರ್ಕ ಕಡಿತ
- ರೋಗ ಹರಡುವಿಕೆ
- ಸಾಗರದ ಅಲೆಗಳು ದಡಕ್ಕೆ ಅಪ್ಪಳಿಸುವಿಕೆ
- ಸುನಾಮಿ
- ನದಿಯ ದಿಕ್ಕು ಬದಲಾವಣೆ

**11. ಭೂಕಂಪನದ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕಾ ಕ್ರಮಗಳಾವುವು?**

- ಭೂಕಂಪನ ವಲಯದಲ್ಲಿ ಬಹು ಹಂತಸ್ತಿನ ಕಟ್ಟಡ ನಿರ್ಮಿಸಬಾರದು
- ಕಟ್ಟಡಗಳನ್ನು ಹಗುರವಾದ ವಸ್ತುಗಳಿಂದ ನಿರ್ಮಿಸುವುದು
- ಕಟ್ಟಡಗಳು ಸ್ಥಿತಿಸ್ಥಾಪಕತ್ವ ಗುಣ ಹೊಂದುವಂತೆ ನಿರ್ಮಿಸುವುದು
- ಜನರಿಗೆ ಭೂಕಂಪನದ ತಿಳುವಳಿಕೆ ನೀಡುವುದು
- ಶೀಘ್ರವಾಗಿ ವೈದ್ಯಕೀಯ ನೆರವು ನೀಡುವುದು

# ಅರ್ಥಶಾಸ್ತ್ರ.

## ಅಧ್ಯಾಯ–1 :ಅರ್ಥವ್ಯವಸ್ಥೆ ಮತ್ತು ಸರ್ಕಾರ

**1) ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ 'ಯೋಜನೆ' ಎಂಬುದು ಅತ್ಯಂತ ಅವಶ್ಯಕ ಸಮರ್ಥಿಸಿ. / ಒಂದು ದೇಶದ ಅರ್ಥವ್ಯವಸ್ಥೆಯಲ್ಲಿ ಯೋಜನೆಯ ಮಹತ್ವವೇನು?**

- ಏನನ್ನು? ಎಷ್ಟು ಉತ್ಪಾದಿಸಿ ಹೇಗೆ ವಿತರಿಸಬೇಕೆಂದು ನಿರ್ಧರಿಸಲು.
- ಜನರ ವೈಯಕ್ತಿಕ ಬದುಕಿನಲ್ಲಿ ಯಶಸ್ಸು ಗಳಿಸಲು.
- ಲಭ್ಯವಿರುವ ಸಂಪನ್ಮೂಲಗಳ ವ್ಯವಸ್ಥಿತ ಬಳಕೆ ಮಾಡಲು.
- ಅಗತ್ಯ ಕ್ಷೇತ್ರಗಳನ್ನು ಆಯ್ಕೆ ಮತ್ತು ಅಭಿವೃದ್ಧಿ.
- ನಿರ್ಧಿಷ್ಟ ಅವಧಿಯೊಳಗೆ ಪ್ರಗತಿ ಸಾಧಿಸಲು.
- ಸರ್ಕಾರದ ನಿರ್ದಿಷ್ಟ ಗುರಿಗಳನ್ನು ಸಾಧಿಸಲು.
- ಜನರ ಸುಖವನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸಲು.
- ದೇಶದ ಸಮಗ್ರ ಅಭಿವೃದ್ಧಿ.

**2) ಪಂಚವಾರ್ಷಿಕ ಯೋಜನೆಗಳ ಉದ್ದೇಶಗಳು ಅಥವಾ ಗುರಿಗಳಾವುವು?**

- ಉತ್ಪಾದನೆಯನ್ನು ಗರಿಷ್ಠ ಮಟ್ಟಕ್ಕೆ ಹೆಚ್ಚಿಸುವುದು.
- ಉದ್ಯೋಗಾವಕಾಶಗಳನ್ನು ಹೆಚ್ಚಿಸುವುದು.
- ಆರ್ಥಿಕ ಅಸಮಾನತೆಯನ್ನು ಕಡಿಮೆ ಮಾಡುವುದು.
- ಆರ್ಥಿಕ ಸ್ಥಿರತೆಯನ್ನು ಕಾಯ್ದುಕೊಳ್ಳುವುದು.
- ಅರ್ಥವ್ಯವಸ್ಥೆಯನ್ನು ಆಧುನೀಕರಣಗೊಳಿಸುವುದು.
- ಒಟ್ಟಾರೆ ಬಡತನ ನಿರ್ಮೂಲನೆ ಮಾಡಿ ಜನರ ಜೀವನ ಮಟ್ಟವನ್ನು ಹೆಚ್ಚಿಸುವುದು.

**3) ಪಂಚವಾರ್ಷಿಕ ಯೋಜನೆಗಳಿಂದ ಭಾರತದ ಅಭಿವೃದ್ಧಿಯಲ್ಲಿ ಮಹತ್ವದ ಬದಲಾವಣೆಗಳಾಗಿವೆ ಹೇಗೆ? / ಪಂಚವಾರ್ಷಿಕ ಯೋಜನೆಗಳ ಸಾಧನೆಗಳನ್ನು ತಿಳಿಸಿ.**

- ರಾಷ್ಟ್ರೀಯ ಆದಾಯವು ಸರಾಸರಿ 3.5 ರಿಂದ 7.6ಕ್ಕೆ ಹೆಚ್ಚಳವಾಗಿದೆ.
- ಆಹಾರ ದಾನ್ಯಗಳ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದೆ.
- ಕೈಗಾರಿಕೆ ಮತ್ತು ಸೇವಾ ವಲಯಗಳ ವಿಸ್ತರಣೆ.
- ಉದ್ಯೋಗಾವಕಾಶಗಳು ಹೆಚ್ಚಳವಾಗಿದೆ.

- ಬಡತನ ನಿರ್ಮೂಲನೆಗೊಂಡು ಜನರು ಆರ್ಥಿಕ ಸ್ವಾಯತ್ತತೆ ಹೊಂದಿದ್ದಾರೆ.
- ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಪ್ರಗತಿ.
- ರಫ್ತು ಪ್ರಮಾಣದಲ್ಲಿ ಹೆಚ್ಚಳವಾಗಿದೆ.
- ಜನರ ನಿರೀಕ್ಷಿತ ಜೀವಿತಾವಧಿ ಮತ್ತು ಸಾಕ್ಷರತೆಯ ಹೆಚ್ಚಳ.
- ಶಿಶು ಮತ್ತು ತಾಯಂದಿರ ಮರಣ ಪ್ರಮಾಣದಲ್ಲಿ ಇಳಿಕೆ.
- ಜನಸಂಖ್ಯೆ ಬೆಳವಣಿಗೆ ದರದಲ್ಲಿ ಇಳಿಕೆ.

**4) ಹಸಿರು ಕ್ರಾಂತಿಗೆ ಪ್ರೇರಣೆಯಾದ ಅಥವಾ ಕಾರಣವಾದ ಅಂಶಗಳಾವುವು ಅಥವಾ ಕೃಷಿ ವಲಯವು ಎದುರಿಸುತ್ತಿರುವ ಸಮಸ್ಯೆಗಳಾವುವು?**

- 1965–66 ರಲ್ಲಿ ಸಂಭವಿಸಿದ ಬೀಕರ ಬರಗಾಲ.
- ಕೃಷಿಗೆ ನಿಯಮಿತವಾದ ನೀರು ಮತ್ತು ರೋಗಗಳಿಂದ ರಕ್ಷಣೆ ಇಲ್ಲದಿರುವುದು.
- ಸುಧಾರಿತ ಬೀಜ, ರಾಸಾಯನಿಕಗೊಬ್ಬರ ಮತ್ತು ಕ್ರಿಮಿನಾಶಕಗಳ ಕೊರತೆ.
- ಕೃಷಿಯಲ್ಲಿ ಸುಧಾರಿತ ತಂತ್ರಜ್ಞಾನದ ಕೊರತೆ.
- ರೈತರಿಗೆ ಬ್ಯಾಂಕು ಮತ್ತು ಸಹಕಾರ ಸಂಘಗಳಿಂದ ಸಹಾಯಧನದ ಕೊರತೆ.
- ರೈತರು ಬೆಳೆದ ಬೆಳೆಗಳಿಗೆ ನ್ಯಾಯೋಚಿತ ಬೆಲೆ ಸಿಗದಿರುವುದು.
- ಸುಧಾರಿತ ಮಾರುಕಟ್ಟೆಗಳ ಅಭಾವ.
- ಕೃಷಿ ಉತ್ಪನ್ನಗಳ ಸಂಗ್ರಹಣೆಗೆ ಉಗ್ರಾಣಗಳು ಮತ್ತು ಶೈತ್ಯಾಗಾರಗಳು ಇಲ್ಲದಿರುವುದು.

**5) ಹಸಿರು ಕ್ರಾಂತಿಯ ಪರಿಣಾಮಗಳಾವುವು? /ಹಸಿರು ಕ್ರಾಂತ್ರಿಯ ಪರಿಣಾಮವಾಗಿ ಭಾರತವು ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿದೆ ಹೇಗೆ?/ಹಸಿರು ಕ್ರಾಂತಿಯ ಪರಿಣಾಮವಾಗಿ ಕೃಷಿಕ್ಷೇತ್ರ ಸುಧಾರಿಸಿದೆ ಹೇಗೆ?**

- ಹೆಚ್ಚು ಇಳುವರಿ ನೀಡುವ ಬೀಜಗಳ ಬಳಕೆ.
- ಕೃಷಿಗೆ ನೀರಾವರಿ ಸೌಲಭ್ಯಗಳ ವಿಸ್ತರಣೆ.
- ಕೃಷಿಯನ್ನು ರೋಗ ರುಜಿನಗಳಿಂದ ರಕ್ಷಿಸಿದ್ದು.
- ರಾಸಾಯನಿಕ ಗೊಬ್ಬರ ಮತ್ತು ಕ್ರಿಮಿನಾಶಕಗಳ ಬಳಕೆ.
- ಸುಧಾರಿತ ತಂತ್ರಜ್ಞಾನ.
- ರೈತರಿಗೆ ಬ್ಯಾಂಕು ಮತ್ತು ಸಹಕಾರ ಸಂಘಗಳ ಮೂಲಕ ಕಡಿಮೆ ಬಡ್ಡಿದರದಲ್ಲಿ ಸಹಾಯಧನ.
- ರೈತರ ಉತ್ಪನ್ನಗಳಿಗೆ ನ್ಯಾಯೋಚಿತ ಬೆಲೆ ದೊರಕಿದ್ದು.

- ಕೃಷಿ ಮಾರುಕಟ್ಟೆಗಳ ಸುಧಾರಣೆ.
- ಹೆಚ್ಚುವರಿ ಉತ್ಪನ್ನಗಳ ಸಂಗ್ರಹಣೆಗೆ ಉಗ್ರಾಣ ಮತ್ತು ಶೈತ್ಯಾಗಾರಗಳ ನಿರ್ಮಾಣ ಮತ್ತು ನಿರ್ವಹಣೆ.

## ಅಧ್ಯಾಯ –2 ಗ್ರಾಮೀಣಾಭಿವೃದ್ಧಿ

**1. ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಗ್ರಾಮೀಣಾಭಿವೃದ್ಧಿ ಹೆಚ್ಚಿನ ಮಹತ್ವ ಪಡೆದಿದೆ ಹೇಗೆ?**

1. ಗ್ರಾಮೀಣ ಜನರಿಗೆ ಶಿಕ್ಷಣ, ತರಭೇತಿ, ಆರೋಗ್ಯ ನೈರ್ಮಲ್ಯ ಸೌಲಭ್ಯಗಳು.
2. ಗ್ರಾಮೀಣ ಜನರಜ್ಞಾನ, ಕೌಶಲ್ಯ ದುಡಿಯುವ ಸಾಮರ್ಥ್ಯ ಹೆಚ್ಚಳವಾಗಬೇಕಿದೆ.
3. ಕೃಷಿಯನ್ನು ಆಧುನಿಕವಾಗಿ ಅಭಿವೃದ್ಧಿ ಪಡಿಸುವುದು.
4. ಆಕರ್ಷಕ, ಲಾಭದಾಯಕ ಉದ್ಯೋಗಗಳ ಅಭಿವೃದ್ಧಿ.
5. ಗೃಹ ಕೈಗಾರಿಕೆಗಳ ಅಭಿವೃದ್ಧಿ.
6. ಬಡ ಹಾಗೂ ಹಿಂದುಳಿದವರಿಗೆ ನಿರಂತರ ಉದ್ಯೋಗವಕಾಶಗಳು.
7. ನಗರದಜನರಿಗೆ ಲಭ್ಯವಿರುವ ಎಲ್ಲಾ ಸೌಲಭ್ಯಗಳನ್ನು ಗ್ರಾಮೀಣ ಜನರಿಗೆ ದೊರಕಿಸುವುದು.
8. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಹಳ್ಳಿಗರು ಭಾಗವಹಿಸುವುದು.

**2. ಗ್ರಾಮೀಣ ಅಭಿವೃದ್ಧಿಯಲ್ಲಿ ಗ್ರಾಮದ ಜನರು ಪಾಲ್ಗೊಳ್ಳುವಂತೆ ಮಾಡುವಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಪಾತ್ರ ಹಿರಿದಾದುದು ಚರ್ಚಿಸಿ.**

1. ಮೂಲಸೌಕರ್ಯಗಳ ಅಭಿವೃದ್ಧಿ.
2. ವೃತ್ತಿ ತರಬೇತಿಗೆ ಪ್ರೋತ್ಸಾಹ.
3. ಗ್ರಾಮೀಣ ಉತ್ಪಾದಕ ಚಟುವಟಿಕೆಗಳ ಅಭಿವೃದ್ಧಿ.
4. ದುಡಿಯುವ ಅವಕಾಶ ಹೆಚ್ಚಿಸುವುದು.
5. ಗ್ರಾಮೀಣ ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ.
6. ಮಾಹಾತ್ಮಗಾಂಧಿ ಉದ್ಯೋಗ ಖಾತ್ರಿ ಯೋಜನೆ ಜಾರಿಗೆ.
7. ಆಹಾರ ಸಂಸ್ಕರಣ ಘಟಕಗಳ ಸ್ಥಾಪನೆ.
8. ವಸತಿ ಯೋಜನೆಗಳು ಜಾರಿಗೆ.
9. ಸುವರ್ಣ ಗ್ರಾಮೋದಯ ಯೋಜನೆ ಜಾರಿಗೆ.
10. ಸಮಾಜ ಕಲ್ಯಾಣ ಸೇವೆಗಳು.
11. ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ.
12. ಸಂಧ್ಯಾ ಸುರಕ್ಷಯೋಜನೆ ಜಾರಿಗೆ.

**3. ವಿಕೇಂದ್ರೀಕರಣ ಮಹತ್ವ ತಿಳಿಸಿ./ವಿಕೇಂದ್ರೀಕರಣದ ಪ್ರಾಮುಖ್ಯತೆ ತಿಳಿಸಿ.**

1. ಹಳ್ಳಿಯ ಆಡಳಿತದ ಅಧಿಕಾರ ಹಾಗೂ ಅಭಿವೃದ್ಧಿಯ ಜವಾಬ್ದಾರಿ ಹಳ್ಳಿಗರಿಗೆ
2. ಸ್ವಾವಲಂಬಿ, ಸಮೃದ್ಧ, ಸ್ವಯಂಪೂರ್ಣ ಗ್ರಾಮಗಳ ಅಭಿವೃದ್ಧಿ.
3. ಗಾಂಧಿಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆ.
4. ಶೋಷಣೆಗಳನ್ನು ತಡೆಯುತ್ತದೆ.
5. ಮಾನವನ ಘನತೆ, ಸ್ವಾತಂತ್ರ್ಯವನ್ನು ಸಂರಕ್ಷಿಸುತ್ತದೆ.
6. ಮಾನವೀಯ ಮೌಲ್ಯಗಳನ್ನು ವೃದ್ಧಿಸುತ್ತದೆ.
7. 1993ರ ಸಂವಿಧಾನದ 73ನೆಯ ತಿದ್ದುಪಡಿಯಲ್ಲಿ ವಿಕೇಂದ್ರಿಕರಣ ಜಾರಿಗೆ ಬಂದಿತು.
8. ಪಂಚಾಯತ್ ಸಂಸ್ಥೆಗಳಿಗೆ ಸಂವಿಧಾನಾತ್ಮಕ ಸ್ಥಾನಮಾನ.
9. 3 ಹಂತದ ಪಂಚಾಯಿತಿಗಳು ಅಸ್ಥಿತ್ವಕ್ಕೆ ಬಂದವು.

**4. ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸುವಲ್ಲಿ "ಮಹಿಳಾ ಸ್ವಸಹಾಯ ಸಂಘ"ಗಳ ಪಾತ್ರವನ್ನು ವಿವರಿಸಿ.**

1. ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುವುದು.
2. ಗ್ರಾಮೀಣ ಬಡ ಮಹಿಳೆಯ ಸಂಘಟನೆಗೆ ಒತ್ತು.
3. ಉತ್ಪಾದಕ ಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರ.
4. ಉಳಿತಾಯ ಸಂಗ್ರಹ ಮತ್ತು ಸಾಲ ವಸೂಲಾತಿಯಲ್ಲಿ ಉತ್ತಮ ಸಾಧನೆ.
5. ಸಾಮಾಜಿಕ ದುಶ್ಚಟಗಳ ನಿರ್ಮೂಲನೆಗೆ ಒತ್ತು.
6. ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲು ಹೋರಾಟ.
7. ಸ್ವಚ್ಛ ಹಾಗೂ ಪ್ರಗತಿಪರ ಸಮಾಜ ಕಟ್ಟುವಲ್ಲಿ ನೆರವು.
8. ಕುಟುಂಬದ ಸುವ್ಯವಸ್ಥಿತ ನಿರ್ವಹಣೆ ಮತ್ತು ಭದ್ರತೆಯ ಜವಾಬ್ದಾರಿ ಹೊಂದಿರುತ್ತಾರೆ.

## ಅಧ್ಯಾಯ –3 : ಸಾರ್ವಜನಿಕ ಹಣಕಾಸು ಮತ್ತುಆಯವ್ಯಯ

**1) ಸಾರ್ವಜನಿಕ ಹಣಕಾಸಿನ ಮಹತ್ವ ಚರ್ಚಿಸಿ. /ಸಾರ್ವಜನಿಕ ಹಣಕಾಸುದೇಶದಅಭಿವೃದ್ಧಿಗೆ ಪೂರಕ ಹೇಗೆ? /ಸಾರ್ವಜನಿಕ ಹಣಕಾಸಿನ ಅನುಕೂಲ ಅಥವಾ ಉಪಯೋಗಗಳನ್ನು ತಿಳಿಸಿ. /ದೇಶದಅಭಿವೃದ್ಧಿಗೆ ಸಾರ್ವಜನಿಕ ಹಣಕಾಸು ಸಹಾಯಕ ಹೇಗೆ?**

* ಸರ್ಕಾರದಆದಾಯ, ವೆಚ್ಚ, ಸಾಲ ಬಗ್ಗೆ ಸಮಗ್ರಚಿತ್ರಣ ನೀಡುತ್ತದೆ.
* ಆರ್ಥಿಕಅಭಿವೃದ್ಧಿಗೆ ಪೂರಕ.
* ಆರ್ಥಿಕ ಸ್ಥಿರತೆಗೆ ಪೂರಕ.
* ಕೋಶೀಯ ನೀತಿಯನ್ನು ನಿರ್ವಹಿಸಲು ಸಹಾಯಕ.
* ದೇಶದ ನೈಸರ್ಗಿಕ ಸಂಪತ್ತು, ಶ್ರಮ, ಭೌತಿಕ ಬಂಡವಾಳಗಳ ಸಮರ್ಪಕ ಬಳಕೆ.
* ಗರಿಷ್ಠ ಉತ್ಪಾದನೆಗೆ ಪ್ರೇರಣೆ.
* ಉತ್ಪಾದನೆ ಮತ್ತುಆದಾಯವು ಸಮಾನ ಹಂಚಿಕೆಗೆ ಸಹಾಯಕ.
* ಇದು ಕೃಷಿ, ಸಣ್ಣಕೈಗಾರಿಕೆ, ಮೂಲ ಸೌಕರ್ಯಗಳ ಅಭಿವೃದ್ಧಿ.
* ಬಡತನ ಮತ್ತು ನಿರುದ್ಯೋಗ ನಿರ್ಮೂಲನೆ.
* ಬೆಲೆ ಏರಿಳಿತ ನಿಯಂತ್ರಣ.
* ಪ್ರಜೆಗಳ ಕಲ್ಯಾಣ.

**2) ವೈಯಕ್ತಿಕ ಹಣಕಾಸು ಮತ್ತು ಸಾರ್ವಜನಿಕ ಹಣಕಾಸಿನ ವ್ಯತ್ಯಾಸ ತಿಳಿಸಿ. ವೈಯಕ್ತಿಕ ಹಣಕಾಸು ಸಾರ್ವಜನಿಕ ಹಣಕಾಸಿಗಿಂತ ಭಿನ್ನವಾಗಿದೆ ಹೇಗೆ?**

| ವೈಯಕ್ತಿಕ ಹಣಕಾಸು | ಸಾರ್ವಜನಿಕ ಹಣಕಾಸು |
|---|---|
| * ಒಬ್ಬ ಅಥವಾ ಕುಟುಂಬದ ಆದಾಯಕ್ಕೆ ಸಂಬಂಧಿಸಿದೆ.<br>* ವ್ಯಕ್ತಿಗಳು ತಮ್ಮಆದಾಯಅಂದಾಜು ಮಾಡಿ ವೆಚ್ಚವನ್ನು ನಿರ್ಧರಿಸುತ್ತಾರೆ.<br>* ವ್ಯವಹಾರಗಳನ್ನು ಗೌಪ್ಯವಾಗಿ ಇಡಲಾಗುತ್ತದೆ.<br>* ಉಳಿತಾಯ ಮಾಡಿದರೆ ವ್ಯಕ್ತಿಯ ಪ್ರಗತಿಗೆ ಪೂರಕ. | * ಸರ್ಕಾರದ ಆದಾಯ ವೆಚ್ಚಕ್ಕೆ ಸಂಬಂಧಿಸಿದೆ.<br>* ವೆಚ್ಚವನ್ನು ಅಂದಾಜು ಮಾಡಿ ಆದಾಯವನ್ನು ಹೊಂದಿಸುತ್ತದೆ.<br>* ಸಾರ್ವಜನಿಕವಾಗಿ ಚರ್ಚಿಸಲಾಗುತ್ತದೆ.<br>* ದೇಶದ ಉಳಿತಾಯ ಮಾಡಿದರೆ ಪ್ರಗತಿ ಕುಂಠಿತ. |

**3) ಆಯವ್ಯಯ (ಮುಂಗಡ ಪತ್ರ) ಕುರಿತು ಚರ್ಚಿಸಿ.**

* ಸರ್ಕಾರವು ತನ್ನ ಕೋಶೀಯ ನೀತಿಯ ಉದ್ದೇಶಗಳನ್ನು ಸಾಧಿಸಲು ಸಹಾಯಕ
* ಸರ್ಕಾರದ ಆದಾಯ ಮತ್ತು ವೆಚ್ಚವನ್ನು ತಿಳಿಸುವ ದಾಖಲೆ.
* ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಪ್ರತ್ಯೇಕ ಆಯವ್ಯಯ ಮಂಡಿಸುತ್ತವೆ.

1) ಉಳಿತಾಯ ಆಯವ್ಯಯ, 2) ಕೊರತೆಯ ಆಯವ್ಯಯ, 3) ಸಮತೋಲನ ಆಯವ್ಯಯ ಎಂಬ ಮೂರು ವಿಧಗಳಿವೆ.

* ಪ್ರತಿ ಹಣಕಾಸು ವರ್ಷಕ್ಕೆ ಒಂದು ಆಯವ್ಯಯ.
* ಕೇಂದ್ರ ಹಣಕಾಸು ಸಚಿವರು ಸಂಸತ್ತಿನಲ್ಲಿ ಮಂಡಿಸುತ್ತಾರೆ.
* ಆರ್ಥಿಕ ಅಭಿವೃದ್ಧಿಗೆ ಅನುಕೂಲ.
* ಮೇ 31 ರೊಳಗೆ ಉಭಯ ಸದನಗಳ ಒಪ್ಪಿಗೆ.

**4) ಸರ್ಕಾರದ ಆದಾಯವು ಸಾರ್ವಜನಿಕವಾಗಿ ಹೇಗೆ ಉಪಯೋಗವಾಗಿದೆ.**
**/ಸರ್ಕಾರವು ತಾನು ಸಂಗ್ರಹಿಸಿದ ಆದಾಯವನ್ನು ಯಾವ ಉದ್ದೇಶಗಳಿಗಾಗಿ ಬಳಕೆ ಮಾಡುತ್ತದೆ.**
**/ಸರ್ಕಾರದ ಹಣದಿಂದ ಕೈಗೊಂಡಿರುವ ಯೋಜನೆಗಳನ್ನು ತಿಳಿಸಿ.**

* ರಾಷ್ಟ್ರದ ರಕ್ಷಣೆ, ಆಡಳಿತ ನಿರ್ವಹಣೆ ಮತ್ತು ಆರ್ಥಿಕ ಅಭಿವೃದ್ಧಿಗೆ ಅನುಕೂಲ.
* ಕಲ್ಯಾಣ ರಾಜ್ಯಗಳ ಉದಯಕ್ಕೆ ಸಹಾಯಕ.
* ಆರ್ಥಿಕ ಮತ್ತು ಸಾಮಾಜಿಕ ಸೇವೆಗಳಿಗೆ ಸಹಾಯಕ.
* ಕೇಂದ್ರ ಸರ್ಕಾರವು ರಾಜ್ಯ ಮತ್ತು ಕೇಂದ್ರಾಡಳಿತ, ಪ್ರದೇಶಗಳ ಯೋಜನೆಗಳನ್ನು ಕಾರ್ಯಗತಗೊಳಿಸಲು.
* ಆರ್ಥಿಕ, ಸಾಮಾಜಿಕ ಮತ್ತು ಸಾಮಾನ್ಯ ಸೇವೆಗಳಿಗೆ ಅನುಕೂಲ.
* ನಾಗರೀಕ ಆಡಳಿತ ವೆಚ್ಚ, ರಕ್ಷಣಾ ವೆಚ್ಚ, ಬಡ್ಡಿ ಪಾವತಿ, ಸಹಾಯಧನಕ್ಕೆ ಅನುಕೂಲ.

5. **ಸರ್ಕಾರವು ತೆರಿಗೆಗಳನ್ನು ಹೊರತುಪಡಿಸಿ ಇತರೆ ಮೂಲಗಳಿಂದಲೂ ಆದಾಯ ಸಂಗ್ರಹಿಸುತ್ತದೆ ಎಂದು ನಿರೂಪಿಸಿ/ಸಮರ್ಥಿಸಿ. /ಸರ್ಕಾರಕ್ಕೆ ಇರುವ ತೆರಿಗೆಯೇತರ ಆದಾಯ ಮೂಲಗಳನ್ನು ಪಟ್ಟಿ ಮಾಡಿ. ಕೇಂದ್ರ ಸರ್ಕಾರ ಸಂಗ್ರಹಿಸುವ ಪ್ರಮುಖ ತೆರಿಗೆಯೇತರ ಆದಾಯಗಳನ್ನು ಪ್ರಸ್ತುತ ಪಡಿಸಿ. ಸರ್ಕಾರ ತೆರಿಗೆಗಳನ್ನು ಹೊರತುಪಡಿಸಿ ತನ್ನ ವರಮಾನವನ್ನು ಯಾವ ಮೂಲಗಳಿಂದ ಹೆಚ್ಚಿಸಿಕೊಳ್ಳುತ್ತದೆ.**

1. ಭಾರತೀಯರಿಸರ್ವ್ ಬ್ಯಾಂಕ್ ಗಳಿಸುವ ನಿವ್ವಳ ಲಾಭ.
2. ಭಾರತೀಯರೈಲ್ವೆ ಗಳಿಸುವ ನಿವ್ವಳ ಲಾಭ.
3. ಅಂಚೆ, ದೂರವಾಣಿ ಸೇವೆಗಳಿಂದ ಬರುವ ಆದಾಯ.
4. ಸಾರ್ವಜನಿಕ ಉದ್ಯಮಗಳಿಂದ ಬರುವ ಆದಾಯ.
5. ನಾಣ್ಯ ಟಂಕಸಾಲೆಯಿಂದ ಬರುವ ಆದಾಯ.
6. ವಿವಿಧ ಶುಲ್ಕಗಳು, ದಂಡಗಳಿಂದ ಬರುವ ಆದಾಯ.

**6. ಪ್ರತ್ಯಕ್ಷ ತೆರಿಗೆ ಮತ್ತು ಪರೋಕ್ಷ ತೆರಿಗೆ ಚರ್ಚಿಸಿ.**

**ಅಥವಾ**

**ಪ್ರತ್ಯಕ್ಷ ತೆರಿಗೆ ಪರೋಕ್ಷ ತೆರಿಗೆಗಿಂತ ಭಿನ್ನವಾಗಿದೆ ಹೇಗೆ?**

| ಪ್ರತ್ಯಕ್ಷ ತೆರಿಗೆ | ಪರೋಕ್ಷ ತೆರಿಗೆ |
|---|---|
| * ವ್ಯಕ್ತಿಗೆ ಹೊರೆಯಾಗುತ್ತದೆ.<br>* ವರ್ಗಾಯಿಸಲು ಬರುವುದಿಲ್ಲ.<br>* ವ್ಯಕ್ತಿಗಳು ಅಥವಾ ಸಂಸ್ಥೆಗಳು ಗಳಿಸುವ ವರಮಾನಕ್ಕೆ ಸಂಬಂಧಿಸಿದ್ದು.<br>* ವರಮಾನ ತೆರಿಗೆ, ಕಂಪನಿ ತೆರಿಗೆ, ಸಂಪತ್ತಿನ ತೆರಿಗೆ. | * ಸಾರ್ವಜನಿಕವಾಗಿ ಹೊರೆಯಾಗುತ್ತದೆ.<br>* ವರ್ಗಾಯಿಸಲು ಸಾಧ್ಯ.<br>* ಸಾರ್ವಜನಿಕರು ಬಳಸುವ ಸರಕು ಮತ್ತು ಸೇವೆಗಳ ಮೇಲೆ ವಿಧಿಸಲಾಗುತ್ತದೆ.<br>* ಕೇಂದ್ರ ಅಬಕಾರಿ, ಆಮದು,ರಫ್ತು ಸುಂಕಗಳು |

# ವ್ಯವಹಾರ ಅಧ್ಯಯನ

## ಅಧ್ಯಾಯ–1 ಬ್ಯಾಂಕ್ ವ್ಯವಹಾರಗಳು

**1. ಬ್ಯಾಂಕುಗಳ ಗುಣಲಕ್ಷಣಗಳನ್ನು ತಿಳಿಸಿ.**

- ಹಣದ ವಹಿವಾಟು
- ಸಂಸ್ಥೆ/ವ್ಯಕ್ತಿ /ಕಂಪನಿ
- ಠೇವಣಿಗಳ ಅಂಗೀಕಾರ
- ಸಾಲಗಳನ್ನು ಕೊಡುವುದು
- ಪಾವತಿ ಮತ್ತು ಹಿಂದಕ್ಕೆ ಪಡೆಯುವುದು
- ಬ್ಯಾಂಕಿಂಗ್ ವ್ಯವಹಾರ
- ಲಾಭ ಮತ್ತು ಸೇವೆ
- ನಿರಂತರ ವಿಸ್ತರಿಸುತ್ತ ಹೋಗುವ ಕಾರ್ಯ

**2. ಬ್ಯಾಂಕಿನ ಕಾರ್ಯಗಳನ್ನು ತಿಳಿಸಿ. /ಬ್ಯಾಂಕ್ ನಿರ್ವಹಿಸುವ ವ್ಯವಹಾರ ತಿಳಿಸಿ. /ಬ್ಯಾಂಕಿನ ಸೇವೆಗಳನ್ನು ತಿಳಿಸಿ.**

- ಹಣದ ವಹಿವಾಟು
- ಠೇವಣಿಗಳ ಅಂಗೀಕಾರ
- ಸಾಲಗಳನ್ನು ಕೊಡುವುದು
- ಪಾವತಿ ಮತ್ತು ಹಿಂದಕ್ಕೆ ಪಡೆಯುವುದು.
- ಭದ್ರತಾ ಕಪಾಟುಗಳ ಬಾಡಿಗೆ
- ವಿದೇಶಿ ವಿನಿಮಯ ವ್ಯವಹಾರ

**3. ಬ್ಯಾಂಕ್ ಖಾತೆಯನ್ನು ತೆಗೆಯುವುದರಿಂದ ಆಗುವ ಅನುಕೂಲಗಳೇನು? /ಬ್ಯಾಂಕ್ ಖಾತೆಯನ್ನು ತೆಗೆಯುವುದರಿಂದ ಗ್ರಾಹಕರಿಗೆ ಯಾವ ರೀತಿ ಸಹಾಯವಾಗುತ್ತದೆ? /ಬ್ಯಾಂಕುಗಳು ಖಾತೆದಾರರಿಗೆ ನೀಡುವ ಸೇವೆಗಳನ್ನು ಪಟ್ಟಿ ಮಾಡಿ.**

- ಜಮಾ ಕಾರ್ಡುಗಳನ್ನು ಕೊಡುವುದು.
- ಡೆಬಿಟ್ ಕಾರ್ಡುಗಳನ್ನು ಕೊಡುವುದು.
- ಭರವಸೆ ಸೇವೆಗಳು.
- ಖಾಸಗಿ ಸಾಲಗಳು.
- ವ್ಯಾಪಾರಕ್ಕೆ ಬೇಕಾದ ಸಾಲಗಳು.
- ಭದ್ರತಾ ಅಥವಾ ರಕ್ಷಣಾ ಕಪಾಟುಗಳನ್ನು ಕೊಡುವುದು.
- ಸಹಿಗಳಿಗೆ ಜವಾಬ್ದಾರಿ ಹಾಕುವುದು

**4. ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ತೆರೆಯುವರ ಸಂಖ್ಯೆ ಹೇರಳವಾಗಿರುತ್ತದೆ ಕಾರಣ ಕೊಡಿ. ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ಇತರೆ ಖಾತೆಗಳಿಗಿಂತ ಮಹತ್ವವಾಗಿದೆ ಏಕೆ? ಇತ್ತೀಚಿನ ದಿನಗಳಲ್ಲಿ ಗ್ರಾಹಕರು ಉಳಿತಾಯ ಖಾತೆಯನ್ನು ತೆಗೆಯುವ ಉದ್ದೇಶಗಳೇನು?/ ಉಳಿತಾಯ ಖಾತೆಯು ಇತರೆ ಖಾತೆಗಳಿಗಿಂತ ಭಿನ್ನವಾಗಿದೆ ಹೇಗೆ?**

- ಹಣ ಉಳಿತಾಯ ಮಾಡಲು ಸಹಾಯ
- ವೇತನ ಪಡೆಯುವವರು
- ವಿದ್ಯಾರ್ಥಿಗಳು, ಪಿಂಚಣಿಗಾರರು ಈ ಖಾತೆ ತೆರೆಯುತ್ತಾರೆ
- ಸರ್ಕಾರದ ಎಲ್ಲಾ ರಿಯಾಯಿತಿ ದೊರೆಯುವುದು.
- ಈ ಖಾತೆಯಲ್ಲಿ ಮೊತ್ತಕ್ಕೆ ಗರಿಷ್ಠ ಮಿತಿ ಇಲ್ಲ
- ಧನಸಹಾಯ ವಿದ್ಯಾರ್ಥಿವೇತನ ನೇರವಾಗಿ ಖಾತೆಗೆ ಜಮ.

**5. ಗ್ರಾಹಕ ಮತ್ತು ಬ್ಯಾಂಕ್ ಸಂಬಂಧಗಳನ್ನು ತಿಳಿಸಿ./ಗ್ರಾಹಕ ಮತ್ತು ಬ್ಯಾಂಕ್ ನಡುವೆ ಉತ್ತಮ ಸಂಬಂಧಕ್ಕೆ ಯಾವ ಅಂಶಗಳು ಮುಖ್ಯ ಪಾತ್ರ ವಹಿಸುತ್ತವೆ.**

1. **ಸಾಮಾನ್ಯ ಸಂಬಂಧ:–** ಪ್ರಾಥಮಿಕ ಸಂಬಂಧ
   ಸಹಾಯಕ ಅಥವಾ ಉಪಕಾರ ಸಂಬಂಧ
   ಕಾರಬಾರಿ ಅಥವಾ ನಿಯೋಗಿ ಮತ್ತು ಮುಖ್ಯಸ್ಥನ ಸಂಬಂಧ
2. **ವಿಶೇಷ ಸಂಬಂಧ :–**ಚೆಕ್ಕುಗಳನ್ನು ಮನ್ನಣೆ ಮಾಡುವುದು
   ಗ್ರಾಹಕನ ಲೆಕ್ಕಗಳ ಗೌಪ್ಯತೆ ಕಾಪಾಡುವುದು

**6. ಬ್ಯಾಂಕುಗಳ ವಿಧಗಳನ್ನು ತಿಳಿಸಿ./ ಗ್ರಾಹಕನು ಯಾವ ಪ್ರಕಾರದ ಬ್ಯಾಂಕುಗಳಲ್ಲಿ ವ್ಯವಹಾರ ನಿರ್ವಹಿಸಬಹುದು?**

- ಕೇಂದ್ರ ಬ್ಯಾಂಕ್ ಅಥವಾ ಭಾರತೀಯರು ರಿಸರ್ವ್ ಬ್ಯಾಂಕ್
- ವಾಣಿಜ್ಯ ಬ್ಯಾಂಕುಗಳು
- ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳು
- ಭೂ ಅಭಿವೃದ್ಧಿ ಅಥವಾ ವ್ಯವಸಾಯ ಬ್ಯಾಂಕುಗಳು
- ಸ್ಥಳೀಯ ಬ್ಯಾಂಕುಗಳು (ಲೇವಾ ದೇವಿಗಾರರು ಅಥವಾ ಸಾಹುಕಾರರು)
- ಸಹಕಾರಿ ಬ್ಯಾಂಕುಗಳು

**7. ಅಂಚೆ ಕಚೇರಿಯ ಹಣಕಾಸಿನ ವ್ಯವಹಾರಗಳನ್ನು ಯಾವ ರೀತಿ ನಿರ್ವಹಿಸುತ್ತದೆ/ಅಂಚೆ ಕಚೇರಿಯು ಬ್ಯಾಂಕಿನ ವ್ಯವಹಾರಗಳಿಗೆ ಸಹಾಯಕ ಕ್ಷೇತ್ರ ವಾಗುತ್ತಿದೆ ಎಂದು ಹೇಗೆ ಹೇಳುವಿರಿ?**
**ಭಾರತದ ಗ್ರಾಮೀಣ ಪ್ರದೇಶಗಳಿಗೆ ಅಂಚೆ ಬ್ಯಾಂಕಿಂಗ್ ವರವಾಗಿದೆ ಹೇಗೆ?**

- ಉಳಿತಾಯ ಪತ್ರಗಳು
- ಅಂಚೆ ಉಳಿತಾಯ ಖಾತೆಗಳು
- ಕಿಸಾನ್ ವಿಕಾಸ ಪತ್ರಗಳು
- ಮಾಹೆಯಾನ ತೀರು ಠೇವಣಿಗಳು
- ಅಂಚೆ ವಿಮೆ
- ನಿವೃತ್ತಿ ವೇತನ
- ಹಣವನ್ನು ವರ್ಗಾಯಿಸುವುದು.

**8. ಬ್ಯಾಂಕ್ ಖಾತೆಯನ್ನು ತೆರೆಯಲು ಯಾವ ಹಂತಗಳನ್ನು ಅನುಸರಿಸಲಾಗುತ್ತದೆ./**
**ಬ್ಯಾಂಕ್ ಖಾತೆಯನ್ನು ತೆಗೆಯುವಾಗ ಅನುಸರಿಸುವ ವಿಧಾನಗಳಾವುವು?**

- ಯಾವ ವಿಧವಾದ ಬ್ಯಾಂಕ್ ಖಾತೆಯನ್ನು ತೆರೆಯಬೇಕೆಂಬ ನಿರ್ಧಾರ
- ಬ್ಯಾಂಕಿನ ಅಧಿಕಾರಿಯ ಸಂಪರ್ಕ
- ಪ್ರಸ್ತಾವನೆ ಅರ್ಜಿ ಅಥವಾ ನಮೂನೆ
- ಪರಿಚಿತರ ಉಲ್ಲೇಖನವನ್ನು ಕೊಡುವುದು
- ಬ್ಯಾಂಕ್ ಖಾತೆಯ ನಮೂನೆಯನ್ನು ಬ್ಯಾಂಕ್ ಖಾತೆಗೆ ಒಪ್ಪಿಸುವುದು
- ಅಧಿಕಾರಿಯ ಒಪ್ಪಿಗೆ
- ಪ್ರಾರಂಭಿಕ ಠೇವಣಿ

## ಅಧ್ಯಾಯ –2 ಉದ್ಯಮಶೀಲತೆ

**1. ಉದ್ಯಮಶೀಲತೆ ಒಂದು ಸೃಜನಾತ್ಮಕ ಚಟುವಟಿಕೆಯಾಗಿದೆ ಹೇಗೆ? ಸಮರ್ಥಿಸಿ. /ಉದ್ಯಮಶೀಲತೆಯು ಒಂದು ಸಾಹಸ ಕಾರ್ಯವಾಗಿದೆ ಹೇಗೆ**

- ಹೊಸದನ್ನು ಸೃಜಿಸುವ ಚಟುವಟಿಕೆ
- ಹೊಸ ವಸ್ತುಗಳು ಮತ್ತು ಸೇವೆಗಳ ಉತ್ಪಾದನೆ
- ಕಷ್ಟ ಸಾಧ್ಯವಾದ ಗೊಂದಲಮಯ ಅವಕಾಶವನ್ನು ಕಾರ್ಯರೂಪಕ್ಕೆ ತರುವುದು
- ಅವಕಾಶಗಳನ್ನು ಹುಡುಕಿ ಲಾಭ ಪಡೆಯುವ ಕಾರ್ಯ
- ಹೊಸ ತಾಂತ್ರಿಕತೆಯ ಬಳಕೆ
- ಏನೂ ಇಲ್ಲದದನ್ನು ಏನಾದರೂ ಒಂದಾಗಿ ಸೃಜಿಸುವ ಸಾಮರ್ಥ್ಯ

**2. ಉದ್ಯಮಶೀಲತೆಯ ಗುಣಲಕ್ಷಣಗಳು ಯಾವುವು? /ಉದ್ಯಮಶೀಲತೆಯ ಲಕ್ಷಣಗಳನ್ನು ತಿಳಿಸಿ ಅಥವಾ ಪಟ್ಟಿಮಾಡಿ.**

- ಸೃಜನಾತ್ಮಕ
- ಕ್ರಿಯಾತ್ಮಕ
- ಗುಂಪು ಕಟ್ಟುವುದು
- ಸಮಸ್ಯೆಯ ಪರಿಹಾರ
- ನಷ್ಟಭರಿತಕ್ಕೆ ಸಿದ್ಧ
- ವಚನ ಬದ್ಧತೆ
- ಹೊಸ ಪದ್ದತಿ ರೂಡಿ
- ನಾಯಕತ್ವ
- ಗುರಿ ಮುಟ್ಟುವಿಕೆ
- ಪ್ರಚೋದನೆಯ ಸಾಧನೆ

**4. ಉದ್ಯಮಿ ನಿರ್ವಹಿಸುವ ಪಾತ್ರವನ್ನು ತಿಳಿಸಿ./ಉದ್ಯಮಿಗಳು ಆರ್ಥಿಕ ಕ್ಷೇತ್ರದ ಅಭಿವೃದ್ಧಿಗೆ ಬಹು ಮುಖ್ಯರಾಗುತ್ತಾರೆ ಹೇಗೆ? ಸಮರ್ಥಿಸಿ. /ಉದ್ಯಮಿಗಳು ರಾಷ್ಟದ ಪ್ರಗತಿಯಲ್ಲಿ ಮಹತ್ವವನ್ನು ವಹಿಸುತ್ತಾರೆ ಹೇಗೆ? /ಉದ್ಯಮಿಯ ರಾಷ್ಟದ ಅಭಿವೃದ್ಧಿಯಲ್ಲಿ ಮುಖ್ಯ ಪಾತ್ರ ಏನು?**

- ಉದ್ಯೋಗ ಸೃಷ್ಟಿ
- ನಿವ್ವಳ ದೇಶಿಯ ಉತ್ಪನ್ನದ ಹೆಚ್ಚಳ
- ಜನರ ತಲಾ ವರಮಾನ ಹೆಚ್ಚಳ
- ಕೈಗಾರಿಕೆಗಳ ಅಭಿವೃದ್ಧಿ

- ಜನರ ಜೀವನಮಟ್ಟದ ಸುಧಾರಣೆ
- ರಫ್ತು ವ್ಯಾಪಾರದ ಹೆಚ್ಚಳ
- ಮಾರುಕಟ್ಟೆಗಳ ಅಭಿವೃದ್ಧಿ
- ಸಮಾಜದ ಏಳಿಗೆಗೆ ಸಹಾಯ

**5. ಉದ್ದಿಮೆಗಳು ಸ್ವಂತ ಉದ್ಯೋಗ ಮಾಡಲು ಯಾವ ರೀತಿಯ ಕ್ಷೇತ್ರಗಳ ಅವಕಾಶ ಇದೆ /ಉದ್ಯಮಿಗಳು ಸ್ವಉದ್ಯೋಗ ವನ್ನು ನಿರ್ವಹಿಸಲು ಯಾವ ವಿಧದ ಸಂಸ್ಥೆಗಳನ್ನು ಆರಿಸಿಕೊಳ್ಳಬಹುದು?**

- ಜಾಹೀರಾತು ಸೇವಾ ಸಂಸ್ಥೆಗಳು
- ಮಾರುಕಟ್ಟೆ ಸಲಹಾ ಸಂಸ್ಥೆಗಳು
- ಕೈಗಾರಿಕಾ ಸಲಹಾ ಸಂಸ್ಥೆ
- ವಸ್ತುಗಳನ್ನು ಬಾಡಿಗೆಗೆ ಮತ್ತು ಗುತ್ತಿಗೆ ನೀಡುವ ಸಂಸ್ಥೆ
- ಛಾಯಾ ಪ್ರತಿ ತೆಗೆಯುವ ಕೇಂದ್ರಗಳು
- ಕೈಗಾರಿಕಾ ಸಂಶೋಧನೆ ಮತ್ತು ಅಭಿವೃದ್ಧಿ ಪ್ರಯೋಗ
- ಕೈಗಾರಿಕಾ ವಸ್ತುಗಳನ್ನು ಗುಣಮಟ್ಟ ಪ್ರಯೋಗಾಲಯ
- ಅಂತರ್ಜಾಲ ಮತ್ತು ಸಂವಹನ ಅಂಗಡಿ
- ಬ್ಯೂಟಿ ಪಾರ್ಲರ್ ಗಳು

**6. ಸ್ವಯಂ ಉದ್ಯೋಗಕ್ಕಾಗಿ ಇರುವ ಯೋಜನೆಗಳು ಹಾಗೂ ಯೋಜನೆಗಳಿಗೆ ಸಹಾಯ ಮಾಡುವ ಸಂಸ್ಥೆಗಳನ್ನು ತಿಳಿಸಿ**

- ಭಾರತದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು
- ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯ ರಾಷ್ಟ್ರೀಯ ಬ್ಯಾಂಕು
- ಆಮದು ಮತ್ತು ರಫ್ತು ಬ್ಯಾಂಕು
- ಭಾರತೀಯ ಸಣ್ಣ ಕೈಗಾರಿಕಾ ಅಭಿವೃದ್ಧಿ ಬ್ಯಾಂಕು,
- ಭಾರತೀಯ ಕೈಗಾರಿಕಾ ಹಣಕಾಸು ನಿಗಮ
- ರಾಜ್ಯ ಹಣಕಾಸು ನಿಗಮಗಳು
- ಭಾರತೀಯ ಜೀವ ವಿಮಾ ನಿಗಮ

**7. ಸ್ವಯಂ ಉದ್ಯೋಗಕ್ಕಾಗಿ ಹಣಕಾಸಿನ ಅವಶ್ಯಕತೆಗಳನ್ನು ಪೂರೈಸುವ ಸಂಸ್ಥೆಗಳಾವುವು?/ ಉದ್ದಿಮೆಗಳನ್ನು ಬೆಂಬಲಿಸಲು ಅಭಿವೃದ್ಧಿಪಡಿಸಲು ಸರ್ಕಾರ ಯಾವ ಸಂಸ್ಥೆಗಳ ಮೂಲಕ ಆರ್ಥಿಕ ನೆರವು ನೀಡುತ್ತಿದೆ? /ಉದ್ಯಮಿಗಳ ಪ್ರವರ್ತಕ ಸಂಸ್ಥೆಗಳು ಯಾವುವು?**

- ಜಿಲ್ಲಾ ಕೈಗಾರಿಕಾ ಕೇಂದ್ರ
- ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ
- ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ನಿಗಮ ನಿಯಮಿತ ಸಂಸ್ಥೆ
- ಸಣ್ಣ ಪ್ರಮಾಣದ ಕೈಗಾರಿಕೆ ಸೇವಾ ಸಂಸ್ಥೆ
- ಕೈಗಾರಿಕಾ ಪ್ರದೇಶಗಳು
- ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ
- ತಾಂತ್ರಿಕ ಸಲಹಾ ಸಂಸ್ಥೆಗಳು

**8. ಜಿಲ್ಲಾ ಕೈಗಾರಿಕಾ ಕೇಂದ್ರಗಳು ಉದ್ಯಮಿಗಳಿಗೆ ನೀಡುವ ಸೇವೆಗಳನ್ನು ತಿಳಿಸಿ/ಜಿಲ್ಲಾ ಕೈಗಾರಿಕಾ ಕೇಂದ್ರಗಳ ಮಹತ್ವ ಅಥವಾ ಪಾತ್ರವನ್ನು ವಿವರಿಸಿ.**

- ಯಂತ್ರಗಳು ಮತ್ತು ಸಾಧನ ಸಲಕರಣೆಗಳ ಬಗ್ಗೆ ಮಾಹಿತಿ
- ಹೊಸದಾಗಿ ಕೈಗಾರಿಕಾ ಪ್ರದೇಶಗಳ ರಚನೆ
- ಯೋಜನಾ ವರದಿಗಳ ಅಂಗೀಕಾರ
- ಉದ್ಯಮಿ ಅಭಿವೃದ್ಧಿ ಕಾರ್ಯಕ್ರಮದೆಡೆ ತರಬೇತಿ
- ಕಚ್ಚಾ ಪದಾರ್ಥಗಳ ಹಂಚಿಕೆ
- ರಫ್ತು ಮಾಡಲು ಸಹಾಯ
- ಆಧುನಿಕರಣಕ್ಕೆ ಸಹಾಯ

## ಅಧ್ಯಾಯ–3
## ಗ್ರಾಹಕರ ಶಿಕ್ಷಣ ಮತ್ತು ರಕ್ಷಣೆ

**1. ಬಳಕೆದಾರರ ಶೋಷಣೆಗೆ ಕಾರಣಗಳೇನು?/ಗ್ರಾಹಕರು ಮಧ್ಯವರ್ತಿಗಳಿಂದ ಹೇಗೆ ಶೋಷಣೆಗೆ ಒಳಗಾಗುತ್ತಿದ್ದಾರೆ?**

- ಬೆಲೆಗಳಲ್ಲಿ ಮೋಸ
- ಪೂರೈಕೆದಾರ ಹಾಗೂ ಗ್ರಾಹಕರ ನಡುವಿನ ಅಂತರ ಹೆಚ್ಚಳ
- ಗ್ರಾಹಕ ಉತ್ಪಾದಕರ ನಡುವಿನ ಅಂತರ ಹೆಚ್ಚಳ
- ಗುಣಮಟ್ಟದಲ್ಲಿ ಮೋಸ

• ತೂಕ ಮತ್ತು ಅಳತೆಯಲ್ಲಿ ಮೋಸ

• ಕಲಬೆರಕೆ ವಸ್ತುಗಳ ಹೆಚ್ಚಳ

• ಮಧ್ಯವರ್ತಿಗಳಿಂದ ಶೋಷಣೆ

• ತಪ್ಪು ಮಾಹಿತಿ ನೀಡುವುದು

**2. ವಿಶ್ವ ಗ್ರಾಹಕರ ದಿನಾಚರಣೆಯನ್ನು ಏಕೆ ಆಚರಿಸಲಾಗುತ್ತದೆ?/ಮಾರ್ಚ್ 15 ಗ್ರಾಹಕರಿಗೆ ಮಹತ್ವವಾಗಿದೆ ತಿಳಿಸಿ./ಮಾರ್ಚ್ 15 ನ್ನು ವಿಶ್ವ ಗ್ರಾಹಕರ ದಿನವಾಗಿ ಆಚರಿಸಲು ಕಾರಣವೇನು?**

ಗ್ರಾಹಕ ಆಂದೋಲನದ ಚರಿತ್ರೆಯಲ್ಲಿ ಮಾರ್ಚ್ 15 – 1962 ಒಂದು ಮಹತ್ವದ ದಿನ ಅಮೆರಿಕದ ಅಧ್ಯಕ್ಷರಾಗಿದ್ದ ಜಾನ್ ಎಫ್ ಕೆನಡಿ ನಾಗರಿಕರಿಗೆ ಸಂರಕ್ಷಣೆ, ಮಾಹಿತಿ, ನಿವೇದನೆ ಮತ್ತು ಪರಿಹಾರ ಎಂಬ ನಾಲ್ಕು ಹಕ್ಕುಗಳನ್ನು ನೀಡುವ ವಿಧೇಯಕದ ಅಂಗೀಕಾರ.

**3. ಗ್ರಾಹಕ ಸಂರಕ್ಷಣಾ ಕಾಯ್ದೆ ಅತ್ಯಂತ ಮಹತ್ವವಾಗಿದೆ ಹೇಗೆ?/ಗ್ರಾಹಕ ಸಂರಕ್ಷಣಾ ಕಾಯ್ದೆಯ ಮುಖ್ಯ ಉದ್ದೇಶಗಳೇನು?/ ಕಾಯ್ದೆಯು ಗ್ರಾಹಕರ ಹಿತಾಸಕ್ತಿಗಳನ್ನು ಕಾಪಾಡುತ್ತದೆ ಹೇಗೆ?/ಗ್ರಾಹಕರ ಹಕ್ಕುಗಳ ಸಂರಕ್ಷಣೆಯಲ್ಲಿ ಗ್ರಾಹಕ ಹಕ್ಕುಗಳ 1986ರ ಕಾಯ್ದೆಯ ಪಾತ್ರವೇನು?**

• ಸುರಕ್ಷತೆ ಹಾಗೂ ಗುಣಮಟ್ಟಕ್ಕೆ ಪ್ರಾಶಸ್ತ್ಯ.

• ಅಪಾಯಕಾರಿ ವಸ್ತುಗಳ ತಯಾರಿಕೆ ಮತ್ತು ಮಾರಾಟದ ತಡೆ

• ಮಾರುಕಟ್ಟೆಯಲ್ಲಿನ ಅನುಚಿತ ವ್ಯವಹಾರ ಪದ್ಧತಿಗಳ ತಡೆ

• ಗುಣಮಟ್ಟ, ಅಳತೆ, ತೂಕ,ಬೆಲೆ ಇವುಗಳ ಮೇಲೆ ನಿಗಾ ವಹಿಸುವುದು

• ಬಳಕೆದಾರರ ತೊಂದರೆಗೆ ಸೂಕ್ತ ಪರಿಹಾರ

• ಗ್ರಾಹಕ ಶಿಕ್ಷಣದ ಮೂಲಕ ಜನರಲ್ಲಿ ಜಾಗೃತಿ

**4. ಗ್ರಾಹಕ ಸಂರಕ್ಷಣಾ ಕಾಯ್ದೆ ಗ್ರಾಹಕ ಹಿತಾಸಕ್ತಿಗಳನ್ನು ಕಾಪಾಡುತ್ತಿದೆ ಎಂದು ಹೇಗೆ ಹೇಳುವಿರಿ?/ಗ್ರಾಹಕರ ಹಿತಾಸಕ್ತಿಗಳನ್ನು ಕಾಪಾಡುವಲ್ಲಿ ಗ್ರಾಹಕ ಸಂರಕ್ಷಣಾ ಕಾಯ್ದೆಯು ಯಾವ ಹಕ್ಕುಗಳನ್ನು ನೀಡಿದೆ?**

• ಮಾಹಿತಿ ಪಡೆಯುವ ಹಕ್ಕು

• ವಸ್ತುಗಳ ಆಯ್ಕೆಯ ಹಕ್ಕು

• ವಸ್ತುಗಳ ಬಗ್ಗೆ ಆಲಿಸುವ ಹಕ್ಕು

• ಶೋಷಣೆಯ ವಿರುದ್ಧ ಪರಿಹಾರ ಕೇಳುವ ಹಕ್ಕು

• ಗ್ರಾಹಕ ಶಿಕ್ಷಣದ ಹಕ್ಕು

• ವಂಚನೆ ಅಥವಾ ಮೋಸದ ವಿರುದ್ಧದ ಹಕ್ಕು

• ಗ್ರಾಹಕರ ಜೀವನವನ್ನು ಉತ್ತಮಪಡಿಸುವ ಹಕ್ಕು

**6. ಗ್ರಾಹಕ ನ್ಯಾಯಾಲಯಕ್ಕೆ ಸಲ್ಲಿಸುವ ದೂರಿನಲ್ಲಿ ಇರಬೇಕಾದ ಮಾಹಿತಿಗಳು ಯಾವುವು?/ಪ್ರತಿಯೊಬ್ಬ ಗ್ರಾಹಕ ತನಗೆ ಸಿಗಬಹುದಾದ ನ್ಯಾಯವನ್ನು ಪಡೆಯಲು ಅನುಸರಿಸಬೇಕಾದ ಕ್ರಮಗಳಾವುವು?**

- ದೂರುಗಳನ್ನು ಕೈಬರಹದ ಅಥವಾ ಬೆರಳಚ್ಚಿನಲ್ಲಿ ನೀಡುವುದು.
- ದೂರು ಕೊಡುವವರ ಪೂರ್ಣ ವಿಳಾಸ ವಿರುವುದು.
- ವ್ಯಾಪಾರಿ /ಪೂರೈಕೆ ದಾರನ ದೂರಿನ ಪೂರ್ಣ ಮಾಹಿತಿ ಕೊಡುವುದು
- ವ್ಯಾಪಾರಿ ಅಥವಾ ಪೂರೈಕೆದಾರರ ಪೂರ್ಣ ಮಾಹಿತಿ
- ನಷ್ಟ ಅಥವಾ ಮೋಸವಾದ ವಸ್ತುವಿನ ರಸೀದಿ ಅಥವಾ ಬಿಲ್ಲನ್ನು ಲಗತ್ತಿಸುವುದು
- ದೂರಿಗೆ ಶುಲ್ಕ ಅಥವಾ ನೋಂದಾವಣಿ ಶುಲ್ಕ ಇರುವುದಿಲ್ಲ
- ಗ್ರಾಹಕನೆ ತನ್ನ ದೂರಿಗೆ ವಕೀಲರ ಸಹಾಯವಿಲ್ಲದೆ ಅಧ್ಯಕ್ಷರ ಮುಂದೆ ವಾದಿಸಬಹುದು.